**ಸಂಪುಟ: 05 ಸಂಚಿಕೆ: 251 ಪುಟಗಳು: 08 ಮಂಗಳವಾರ 25 ನವೆಂಬರ್ 2025**

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ | RNI No. KARKAN/2021/80833 | 9448225696 | +91 8035841833 | ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**

ಧ್ಯಾನಕ್ಕೆ ವಿಶಿಷ್ಟ ಶಕ್ತಿಯಿದೆ. ದಾನ ಮಾಡಿದಷ್ಟು ವ್ಯಕ್ತಿಯ ಆತ್ಮವು ಶುದ್ಧವಾಗುತ್ತದೆ.

# ಡಿಕೆಶಿ ಪರಪ್ಪನ ಅಗ್ರಹಾರಕ್ಕೆ ಶಾಸಕರ ಸಹಿ ಹಾಕಿಸಲು ಹೋಗಿದ್ದಾರೆ

• ಉದಯವಾಹಿನಿ, ಬೆಂಗಳೂರು

ಡಿಕೆ ಶಿವಕುಮಾರ್ ಅವರು ಪರಪ್ಪನ ಅಗ್ರಹಾರಕ್ಕೆ ಜೈಲಿನಲ್ಲಿ ಇರುವ ಇಬ್ಬರು ಶಾಸಕರ ಸಹಿ ಹಾಕಿಸಲೇ ಹೋಗಿದ್ದಾರೆ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ. ಶಿವಕುಮಾರ್ ಅವರು ಪರಪ್ಪನ ಅಗ್ರಹಾರದಲ್ಲಿ ಶಾಸಕರಾದ ವೀರೇಂದ್ರ, ಪಪ್ಪಿ ಹಾಗೂ ವಿನಯ್ ಕುಲಕರ್ಣಿ ಅವರನ್ನು ಭೇಟಿ ಮಾಡಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದರು.



ಶಾಸಕರ ದೆಹಲಿ ಟೂರ್, ಸಿದ್ದರಾಮಯ್ಯ ಮನೆಯಲ್ಲಿ ಡಿನ್ನರ್, ಡಿಕೆಶಿ ನಿವಾಸದಲ್ಲಿ ಬ್ರೇಕ್ ಫಾಸ್ಟ್ ಇಷ್ಟೇ ನಡೆಯುತ್ತಿದೆ. ರೈತರ ಆತ್ಮಹತ್ಯೆ ನಡೆಯುತ್ತಿದೆ. ಸಮಾಜವಾದಿ ಸರ್ಕಾರ ಅಲ್ಲ, ಇದು ಮಜವಾದಿ ಸರ್ಕಾರ ಹಾಗೂ ಜನರ ಪಾಲಿಗೆ ಸರ್ಕಾರ ಸತ್ತಿದೆ ಎಂದು ವಾಗ್ದಾಳಿ ನಡೆಸಿದರು.

**ಡೀಲ್ ಆದ ಸಿದ್ದರಾಮಯ್ಯ ಡಲ್:** ಡಿಕೆ ಶಿವಕುಮಾರ್ ಡೀಲ್ ಆದ ಬಳಿಕ ಸಿದ್ದರಾಮಯ್ಯ ಡಲ್ ಆಗಿದ್ದಾರೆ. ನಾನೇ ಐದು ವರ್ಷ ಸಿಎಂ ಎಂದವರು ಇದೀಗ ಪ್ಲೇಟ್ ಚೇಂಜ್ ಮಾಡಿದ್ದಾರೆ. ಕಾಲ ಹತ್ತಿರ ಬರುತ್ತದೆ ಎಂದು ಭವಿಷ್ಯ ನುಡಿದರು. ಡಿಕೆ ಜೋತಿಷ್ಯ ನಂಬುತ್ತಾರೆ. ನಾಯಕತ್ವ ಬದಲಾವಣೆ ಆಗಲ್ಲ ಅಂದರೆ ಯಾಕೆ ಡಿಕೆ ಶಿವಕುಮಾರ್ ಜೈಲಿಗೆ ಹೋಗಬೇಕು, ದೆಹಲಿಗೆ ಹೋಗಬೇಕು ಹಾಗೂ ಖರ್ಗೆ ಅವರ ನಿವಾಸಕ್ಕೆ ಭೇಟಿ ಕೊಡಬೇಕು ಎಂದು ಪ್ರಶ್ನಿಸಿದರು. ಖರ್ಗೆ ಹೆಸರಿಗಷ್ಟೇ ಅಧ್ಯಕ್ಷರು. ಆದರೆ ಅವರು ಪರಾವಲಂಬಿ ಎಂದರು.

**ಸರ್ಕಾರದ ವಿರುದ್ಧ ಹೋರಾಟ**

**ರಾಜ್ಯ ಸರ್ಕಾರದ ರೈತರ ವಿರುದ್ಧವಾಗಿದೆ. ರಾಜ್ಯದಲ್ಲಿ ರೈತರ ಆತ್ಮಹತ್ಯೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ನವೆಂಬರ್ 27 ಹಾಗೂ 28 ರಂದು ರಾಜ್ಯಾದ್ಯಂತ ವಿಧಾನಸಭೆ ಕ್ಷೇತ್ರದಲ್ಲಿ ಹೋರಾಟ ನಡೆಸಲಾಗುತ್ತದೆ. ಜಿಲ್ಲಾ ಕೇಂದ್ರದಲ್ಲಿ ಡಿಸೆಂಬರ್ 1 ಹಾಗೂ 2 ರಂದು ಹೋರಾಟ ನಡೆಯಲಿದೆ. ಸುಳ್ಳೇ ಕಾಂಗ್ರೆಸ್ ಬಂಡವಾಳ, ರೈತರ ದಿಕ್ಕು ತಪ್ಪಿಸಿದ ಸಿಎಂ ಎಂದು ಘೋಷಣೆಯೊಂದಿಗೆ ಹೋರಾಟ ನಡೆಯಲಿದೆ ಎಂದು ವಿವರಿಸಿದರು.**

ವಿರೋಧ ಪಕ್ಷವಾಗಿ ನಾವು ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದೇವೆ. ಹಲವು ಹೋರಾಟಗಳನ್ನು ಸಮರ್ಥವಾಗಿ ಮಾಡಿದ್ದೇವೆ.

ಕಾಂಗ್ರೆಸ್ ಮುಕ್ತ ಕರ್ನಾಟಕ ಒಳ್ಳೆಯದು. ದೇಶದಲ್ಲಿ ಮುಕ್ತ ಆಗ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಮುಕ್ತವಾಗಬೇಕು. ಬಟನ್ ಒತ್ತಲು ಕಾಯುತ್ತಿದ್ದಾರೆ ಜನರು. ಕಾಂಗ್ರೆಸ್ ರಾಜ್ಯದಲ್ಲಿ ಸತ್ತು ಹೋದ ಪಕ್ಷ ಎಂದರು.

**ಡಿಕೆ ಹಿಂದೆ 70 ಜನರು ಹೆಂಗಾದರು:** ಡಿಕೆ ಶಿವಕುಮಾರ್ ಅವರ ಜೊತೆಗೆ 11,12 ಜನ ಶಾಸಕರು ಇದ್ದರು. ಆದರೆ ಇದೀಗ 70 ಹೇಗಾಯ್ತು ಇದಕ್ಕೆ ಕರಾಮತ್ತು ಬೇಕು. ನಾವು ಪರಿಶೀಲನೆ ನಡೆಸುವಾಗ ಕುದುರೆ ವ್ಯಾಪಾರದ ಆರೋಪ ಸತ್ಯಕ್ಕೆ ಹತ್ತಿರವಾಗಿದೆ ಎಂದರು.

## ಸಂಧಿ-ಸಮಾಸ ಪಾಠ ಮಾಡುವ ಬದಲು ಸಮಸ್ಯೆ ಬಗೆಹರಿಸಿ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಶಾಲಾ ಮಕ್ಕಳಿಗೆ ಶೌಚಾಲಯ ಸ್ವಚ್ಛ ಮಾಡುವ ಕೆಲಸವನ್ನು ನೀಡಿರುವುದನ್ನು ಬಿಜೆಪಿ ಶಾಸಕ ಬಸನಗೌಡ ಯತ್ನಾಳ ತೀವ್ರವಾಗಿ ಖಂಡಿಸಿದ್ದಾರೆ. 'ಸಿದ್ದರಾಮಯ್ಯ ಅವರ ಸ್ವಕ್ಷೇತ್ರದಲ್ಲೇ ಈ ಪರಿಸ್ಥಿತಿ ಎಂದರೆ ಇನ್ನು ರಾಜ್ಯದ ಬೇರೆ ಶಾಲೆಗಳಲ್ಲಿ ಇರುವ ಪರಿಸ್ಥಿತಿಯನ್ನು ವಿವರಿಸಬೇಕಾಗಿಲ್ಲ. ತಮ್ಮ ಕ್ಷೇತ್ರದ ಅಧಿಕಾರಿಗಳು, ಶಿಕ್ಷಣ ವ್ಯವಸ್ಥೆಯ ಮೇಲೆ ಮುಖ್ಯಮಂತ್ರಿಗಳಿಗೆ ಹಿಡಿತವಿಲ್ಲ ಎಂದರೆ ಇನ್ನು ರಾಜ್ಯದಲ್ಲಿರುವ ಶಾಲೆಗಳ, ಅಲ್ಲಿನ ಅವ್ಯವಸ್ಥೆಗಳ ಪಾಡು ಏನೆಂದು ನಾವು ಊಹಿಸಿಕೊಳ್ಳಬಹುದು' ಎಂದು ಯತ್ನಾಳ ಬೇಸರ ಹೊರಹಾಕಿದ್ದಾರೆ. ಸಿದ್ದರಾಮಯ್ಯ ಅವರೇ, ಸದನದಲ್ಲಿ 'ಸಂಧಿ', 'ಸಮಾಸ' ಪಾಠ ಮಾಡುವ ಮೊದಲು ತಮ್ಮ ಕ್ಷೇತ್ರದಲ್ಲಿನ ಶಾಲೆಗಳ ಸಮಸ್ಯೆಗಳನ್ನು ಬಗೆಹರಿಸಿ ಎಂದು ಯತ್ನಾಳ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣಾ ವಿಧಾನಸಭಾ ಕ್ಷೇತ್ರದ ಬಿಲಗೆರೆಹುಂಡಿ ಗ್ರಾಮದಲ್ಲಿ ಈ ಘಟನೆ ನಡೆದಿದೆ ಎಂದು ವರದಿಯಾಗಿದೆ. ಶಿಕ್ಷಕರ ಸೂಚನೆಯಂತೆ ಶಾಲಾ ಆವರಣದಲ್ಲಿರುವ ಸಂಪ್‌ನಿಂದ ಮಕ್ಕಳು ನೀರು ತಂದು ಶೌಚಾಲಯಗಳನ್ನು ಸ್ವಚ್ಛಗೊಳಿಸಿದ್ದಾರೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

## ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಪರವಾನಗಿ ನವೀಕರಣ

• ಉದಯವಾಹಿನಿ, ಬೆಂಗಳೂರು

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಪರವಾನಗಿ ನವೀಕರಣ ಮಾಡಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಔಷಧ ನಿಯಂತ್ರಣ ಇಲಾಖೆಗೆ ನೋಟಿಸ್ ಜಾರಿಗೊಳಿಸುವಂತೆ ಹೈಕೋರ್ಟ್ ಸೋಮವಾರ ಆದೇಶಿಸಿದೆ. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಹಾಗೂ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಔಷಧ ನಿಯಂತ್ರಣ ಇಲಾಖೆ ಔಷಧ ನಿಯಂತ್ರಕ, ಬೆಂಗಳೂರು ದಕ್ಷಿಣ ವಿಭಾಗದ ಸಹಾಯಕ ಔಷಧ ನಿಯಂತ್ರಕ ಮತ್ತು ಪಿಎಂಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿತು.

## ಅತ್ಯಾಚಾರ ಪ್ರಕರಣ: ಪ್ರಜ್ವಲ್ ಜಾಮೀನಿಗೆ ಅರ್ಹ ಆಸಾಮಿಯಲ್ಲ

• ಉದಯವಾಹಿನಿ, ಬೆಂಗಳೂರು

ಮನೆಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯಾಗಿರುವ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಅಧೀನ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಯುವುದನ್ನು ತಡೆಯಲು 10ರಿಂದ 12 ಬಾರಿ ಪ್ರಯತ್ನ ಮಾಡಿದ್ದರು. ಹೀಗಾಗಿ. ಅವರಿಗೆ ಜಾಮೀನು ನೀಡಬಾರದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿತು. 'ನನಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಶೇಷ ತನಿಖಾ ದಳದ (ಎಸ್‌ಐಟಿ) ಪರ ವಾದ ಮಂಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, 'ಪ್ರಜ್ವಲ್ ಕೃತ್ಯ ನಡೆಸಿ ದೇಶ ತೊರೆದಿದ್ದರು. ಸಂತ್ರಸ್ತೆಯರ ಜೊತೆಗಿನ ಲೈಂಗಿಕ ಕೃತ್ಯ ಸೆರೆ ಹಿಡಿದಿದ್ದ ಫೋನ್ ಅನ್ನು ತನಿಖಾಧಿಕಾರಿಗಳಿಗೆ ಒಪ್ಪಿಸಿಲ್ಲ. ತನ್ನ ಫೋನ್ ಜರ್ಮನಿಯಲ್ಲಿ ಕಳೆದು ಹೋಗಿದೆ ಎಂದು ಹೇಳಿದ್ದಾರೆ.





# ರಾಹುಲ್ ಸಮ್ಮುಖದಲ್ಲಿ ಇಂದು ಫೈನಲ್

# ರಾಗಾ ಯಾರಿಗೆ ಸಿಎಂ ಯೋಗ

ಸೈಲೆಂಟ್ ಆಗಿಯೇ ರಾಹುಲ್ ಭೇಟಿಯಾದ ಹರಿಪ್ರಸಾದ್

ಖರ್ಗೆ - KJ ಜಾರ್ಜ್



**ಸಿಎಂ ರಾದ್ಧಾಂತಕ್ಕೆ ರಾಹುಲ್ ಬ್ರೇಕ್**

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನ ಅಧಿಕಾರ ಹಂಚಿಕೆಯ ಕಗ್ಗಂಟಿಗೆ ಕಾಂಗ್ರೆಸ್ ಹೈಕಮಾಂಡ್ ಈ ವಾರದಲ್ಲೇ ಪರಿಹಾರ ಸೂತ್ರ ಪ್ರಕಟಿಸುವ ಸಾಧ್ಯತೆಗಳು ನಿಚ್ಚಳವಾಗಿದ್ದು, 2-3 ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿ ಎಲ್ಲವನ್ನು ಇತ್ಯರ್ಥ ಮಾಡುವ ಸಾಧ್ಯತೆಗಳು ಹೆಚ್ಚಿವೆ. ಎರಡೂವರೆ ವರ್ಷದ ನಂತರ ಮುಖ್ಯಮಂತ್ರಿ ಬದಲಾವಣೆ ಎನ್ನುವ ಗೊಂದಲಕ್ಕೆ ಇನ್ನೆರಡು ದಿನಗಳಲ್ಲಿ ಪರಿಹಾರ ಸಿಗುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ, ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶದಿಂದ ಹಿಂದಿರುಗುತ್ತಲೇ, ಎಲ್ಲಾ ಗೊಂದಲಕ್ಕೂ ಫುಲ್ ಸ್ಟಾಪ್ ಬೀಳಬಹುದು. ವಿದೇಶ ಪ್ರವಾಸದಿಂದ ರಾಹುಲ್ ಗಾಂಧಿ ದೆಹಲಿಗೆ ವಾಪಸ್ ಆಗಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ರಾಹುಲ್ ಗಾಂಧಿ ಭೇಟಿಗೆ ಸಮಯವನ್ನು ಕೇಳಿದ್ದಾರೆಂದು ವರದಿಯಾಗಿದೆ. ಹಾಗಾಗಿ, ಇನ್ನೆರಡು ದಿನಗಳಲ್ಲಿ ಎಲ್ಲವೂ ಸಸೂತ್ರವಾಗಿ ಇತ್ಯರ್ಥವಾಗಲಿದೆ.

**1** **ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಅಂತಿಮ ಹಂತಕ್ಕೆ**

**2** **ವಿದೇಶ ಪ್ರವಾಸದಿಂದ ರಾಹುಲ್ ವಾಪಸ್, ಪವರ್ ಶೇರಿಂಗ್ ಇತ್ಯರ್ಥ..**

**3** **ರಾಹುಲ್ ಭೇಟಿಯಾಗಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ**

ಇಂಧನ ಇಲಾಖೆಯ ಸಚಿವ ಕೆಜೆ ಜಾರ್ಜ್, ಮಲ್ಲಿಕಾರ್ಜುನ ಖರ್ಗೆಯವರನ್ನು ಅವರ ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಭೇಟಿಯಾಗಿದ್ದರು. ಸುಮಾರು, ತೊಂಬತ್ತು ನಿಮಿಷಗಳ ಸುದೀರ್ಘ ಮಾತುಕತೆಯ ನಂತರ ಜಾರ್ಜ್, ಅಲ್ಲಿಂದ, ಡಿಕೆ ಶಿವಕುಮಾರ್‌ರನ್ನು ಭೇಟಿಯಾಗಿದ್ದರು. ರಾಜ್ಯ ಕಾಂಗ್ರೆಸ್ಸಿನಲ್ಲಿ ಜೊತೆಜೊತೆಯಾಗಿ ಬೆಳೆದಿರುವ ಜಾರ್ಜ್ - ಡಿಕೆ ಶಿವಕುಮಾರ್, 45ವರ್ಷಗಳಿಂದ ಸ್ನೇಹಿತರು. ಅಂದು ಏನು ಹೈಕಮಾಂಡ್ ಅಂಗಣದಲ್ಲಿ ಮಾತುಕತೆ ನಡೆದು, ಒಪ್ಪಂದವಾಗಿತ್ತೋ, ಅದರ ಪ್ರಕಾರ ನಡೆಯಬೇಕು ಎನ್ನುವ ಕಂಡೀಷನ್ ಅನ್ನು ಡಿಕೆಶಿ ಮತ್ತೆ ಹಾಕಿದ್ದಾರೆ ಎಂದು ಹೇಳಲಾಗುತ್ತಿದೆ. ಹೈಕಮಾಂಡ್ - ರಾಜ್ಯ ಸರ್ಕಾರದ ನಡುವೆ ಬ್ರಿಡ್ಜ್ ನಂತಿರುವ ಕೆಜೆ ಜಾರ್ಜ್, ಎಐಸಿಸಿ ಅಧ್ಯಕ್ಷರನ್ನು ಭೇಟಿಯಾಗಿದ್ದರು. ಆ ಭೇಟಿಯ ವೇಳೆ, ಏನು ಮಾತುಕತೆ ನಡೆದಿತ್ತೋ, ಅದರ ಒಟ್ಟಾರೆ ಸಾರಾಂಶವನ್ನು ಜಾರ್ಜ್, ಡಿಕೆಶಿ ಮುಂದೆ ಇಟ್ಟಿದ್ದಾರೆ. ಆ ಭೇಟಿಯ ನಂತರ, ರಾಜ್ಯ ಸರ್ಕಾರದ ಕೆಲವು ಸಚಿವರ ಹೇಳಿಕೆಯ ಟೋನ್ ಬದಲಾಗುತ್ತಿದೆ. ತಮ್ಮ ಭೇಟಿಯು ಸುದ್ದಿಯಾಗುತ್ತಿದ್ದಂತೆಯೇ ಕೆಜೆ ಜಾರ್ಜ್ ಇದಕ್ಕೆ ಸ್ಪಷ್ಟನೆಯನ್ನು ಕೊಟ್ಟಿದ್ದಾರೆ. ನಾವು ಯಾರ ಪರವಾಗಿಯೂ ಅಲ್ಲಿಗೆ ಹೋಗಿದ್ದಲ್ಲ. ಎಐಸಿಸಿ ನನಗೆ ಆತರದ ಯಾವುದೇ ಜವಾಬ್ದಾರಿಯನ್ನು ನೀಡಿಲ್ಲ. ಗ್ರೇಟರ್ ಬೆಂಗಳೂರು ಚುನಾವಣೆಯ ಬಗ್ಗೆ ಮಾತುಕತೆ ನಡೆಸಲು ನಾನೇ ಹೋಗಿದ್ದೆ. ಡಿಕೆ ಶಿವಕುಮಾರ್ ಮತ್ತು ನಾನು ಸಹದ್ಯೋಗಿ, ಅವರನ್ನು ಸಮಾಧಾನದಿಂದ ಇರಲು ನಾನು ಹೇಗೆ ಹೇಳಲು ಸಾಧ್ಯ, ಎಂದು ಹೇಳಿದ್ದಾರೆ.

**ಡಿಕೆಶಿ ಪರ ಮತ್ತಷ್ಟು ಶಾಸಕರು ದೆಹಲಿಗೆ**

**ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಪರಿಗಣಿಸುವಂತೆ ಕಾಂಗ್ರೆಸ್ ಶಾಸಕರ ದಂಡು ಮತ್ತೆ ದೆಹಲಿ ಯಾತ್ರೆ ಕೈಗೊಂಡಿದೆ. ಕಳೆದ ನಾಲ್ಕು ದಿನಗಳ ಹಿಂದೆ 7-8 ಶಾಸಕರು ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುಖರ್ಗೆ ಸೇರಿದಂತೆ ವರಿಷ್ಠ ನಾಯಕರನ್ನು ಭೇಟಿ ಮಾಡಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಬೇಡಿಕೆ ಇಟ್ಟಿದ್ದರು. ಎಐಸಿಸಿ ಅಧ್ಯಕ್ಷ ಖರ್ಗೆ ಬೆಂಗಳೂರಿಗೆ ಬಂದ ಹಿನ್ನೆಲೆಯಲ್ಲಿ ದೆಹಲಿಗೆ ತೆರಳಿದ್ದ ಶಾಸಕರುಗಳಾದ ಹೆಚ್.ಡಿ.ರಂಗನಾಥ್, ಶರತ್ ಬಚ್ಚೆಗೌಡ, ಆನೇಕಲ್ ಶಿವಣ್ಣ, ಎಸ್.ಆರ್.ಶ್ರೀನಿವಾಸ್, ನೆಲಮಂಗಲ ಶಾಸಕ ಶ್ರೀನಿವಾಸ್, ಶೃಂಗೇರಿ ಶಾಸಕ ರಾಜೇಗೌಡ ಇವರುಗಳು ಬೆಂಗಳೂರಿಗೆ ವಾಪಸ್ಸಾಗಿದ್ದರು.**

**ಅಧಿಕಾರ ಹಂಚಿಕೆ, ಸಂಪುಟ ಪುನಾರಚನೆ ಸೇರಿದಂತೆ ಎಲ್ಲಾ ವಿಚಾರಗಳ ಸಂಬಂಧ ಹೈಕಮಾಂಡ್ ತೀರ್ಮಾನಕ್ಕೆ ನಾನು ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ. ಚಿಕ್ಕಬಳ್ಳಾಪುರದ ಶಿಡ್ಲಘಟ್ಟದಲ್ಲಿಂದು ವಿವಿಧ ಅಭಿವೃದ್ಧಿ ಕಾರ್ಯಗಳ ಶಂಕುಸ್ಥಾಪನೆ, ಉದ್ಘಾಟನೆಗೆ ಆಗಮಿಸಿದ**



## ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

**ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮಲ್ಲಿ ಹೈಕಮಾಂಡ್ ಏನು ತೀರ್ಮಾನ ಮಾಡುತ್ತಾರೋ ಅದರಂತೆ ನಾನು ಮತ್ತು ಡಿ.ಕೆ. ಶಿವಕುಮಾರ್ ನಡೆದುಕೊಳ್ಳುತ್ತೇವೆ. ಅದನ್ನು ಒಪ್ಪಿಕೊಳ್ಳುತ್ತೇವೆ ಎಂದರು.ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರ ತೀರ್ಮಾನದಂತೆ ನಾವು ನಡೆಯುವೆವು ಎಂದು ಹೇಳುವ ಮೂಲಕ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂಬ ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದರು. ಐದು ತಿಂಗಳ ಹಿಂದೆ ಹೈಕಮಾಂಡ್‌ನ್ನು ಭೇಟಿಯಾದಾಗ ಸಂಪುಟ ಪುನಾರಚನೆ ಮಾಡಲು ಸೂಚನೆ ನೀಡಿದ್ದರು. ನಾನು ಎರಡೂವರೆ ವರ್ಷ ತುಂಬಿದ ನಂತರ ಮಾಡೋಣ ಎಂದು ಹೇಳಿದ್ದೆ. ಈಗ ಹೈಕಮಾಂಡ್ ಏನು ಸೂಚನೆ ನೀಡುತ್ತದೋ ಅದರಂತೆ ನಾವು ನಡೆಯುತ್ತೇನೆ ಎಂದರು.**

ಈಗಾಗಲೇ, ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್, ಇಬ್ಬರನ್ನೂ ಮಲ್ಲಿಕಾರ್ಜುನ ಖರ್ಗೆ ಭೇಟಿಯಾಗಿ ಚರ್ಚಿಸಿದ್ದಾರೆ. ಇಬ್ಬರ ಅಭಿಪ್ರಾಯವನ್ನು ಪಡೆದುಕೊಂಡಿದ್ದಾರೆ. ಇದರ ಮಾಹಿತಿಯನ್ನು ರಾಹುಲ್ ಗಾಂಧಿ ಭೇಟಿಯ ವೇಳೆ, ಅವರಿಗೆ ನೀಡುವ ಸಾಧ್ಯತೆಯಿದೆ.

ಹಾಗಾಗಿ, ನ.25 ಕಾಂಗ್ರೆಸ್ ಹೈಕಮಾಂಡ್ ಒಂದು ನಿರ್ಧಾರಕ್ಕೆ ಬರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ನಾನೇ ಪೂರ್ಣಾವಧಿಗೆ ಮುಖ್ಯಮಂತ್ರಿ ಎಂದು ಹೇಳುತ್ತಿದ್ದ ಸಿದ್ದರಾಮಯ್ಯ, ಹೈಕಮಾಂಡ್ ಏನು ನಿರ್ಧಾರ ತೆಗೆದುಕೊಳ್ಳುತ್ತೋ, ಅದಕ್ಕೆ ನಾನು ಬದ್ಧ. ಮುಖ್ಯಮಂತ್ರಿಯಾಗಿ ಮುಂದುವರಿಯಲು ಸೂಚಿಸಿದರೆ, ಮುಂದುವರಿಯುತ್ತೇನೆ, ಇಲ್ಲಾಂದ್ರೆ ಇಲ್ಲ ಎಂದು ಹೇಳಿದ್ದಾರೆ. ರಾಜ್ಯ ಕಾಂಗ್ರೆಸ್ಸಿನ ಈಗಿನ ವಿದ್ಯಮಾನಗಳು ಪಕ್ಷದ ವರ್ಚಸ್ಸಿಗೆ ಧಕ್ಕೆ ತರಬಹುದು. ನಾಯಕರು ಮತ್ತು ಕಾರ್ಯಕರ್ತರ ಬೇಸರಕ್ಕೂ ಕಾರಣವಾಗಬಹುದು.

ಹಾಗಾಗಿ, ಇದಕ್ಕೆ ಆದಷ್ಟು ಬೇಗ ಫುಲ್ ಸ್ಟಾಪ್ ಇಡುವುದು ಉತ್ತಮ ಎನ್ನುವ ಸಲಹೆಯನ್ನು, ಹಲವು ಮುಖಂಡರು, ಮಲ್ಲಿಕಾರ್ಜುನ ಖರ್ಗೆಯವರಿಗೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

**ರಾಹುಲ್ ಭೇಟಿಯಾದ ಹರಿಪ್ರಸಾದ್**

**ಸಿದ್ದರಾಮಯ್ಯ-ಡಿಕೆ ಶಿವಕುಮಾರ್ ನಡುವೆ ಕುರ್ಚಿ ಕದನ ದಿನಕ್ಕೊಂದು ಬೆಳವಣಿಗೆ ಕ್ಷಣಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಡಿಕೆ ಶಿವಕುಮಾರ್ ಅವರನ್ನ ಎರಡುವರೆ ವರ್ಷದ ಅವಧಿಗೆ ಸಿಎಂ ಮಾಡಬೇಕೆಂದು ಅವರ ಬೆಂಬಲಿಗರು ದೆಹಲಿ ಪರೇಡ್ ನಡೆಸಿದ್ದಾರೆ. ಈಗಾಗಲೇ ಡಿಕೆಶಿ ಬಣ ಎರಡು ತಂಡಗಳಾಗಿ ದೆಹಲಿಯಲ್ಲೇ ಬೀಡುಬಿಟ್ಟಿದ್ದು, ಹೈಕಮಾಂಡ್ ನಾಯಕರ ಭೇಟಿಗೆ ಕಸರತ್ತು ನಡೆಸಿವೆ. ಇನ್ನು ಡಿಕೆ ಶಿವಕುಮಾರ್ ಭೇಟಿಗೆ ರಾಹುಲ್ ಗಾಂಧಿ ಸಮಯ ಕೊಟ್ಟಿಲ್ಲ. ಡಿಕೆಶಿ ಖರ್ಗೆ ಅವರನ್ನ ಭೇಟಿ ಮಾಡಿಬಂದು ತಮ್ಮದೇ ದಾಳ ಉರುಳಿಸುತ್ತಿದ್ದಾರೆ. ಡಿಕೆಶಿಯನ್ನೇ ಕಟ್ಟಿ ಹಾಕಲು ಸಿದ್ದರಾಮಯ್ಯ ಬಣ ಸೈಲೆಂಟ್ ದಾಳ ಉರುಳಿಸುತ್ತಿದೆ. ಹೀಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಉಲ್ಬಣವಾಗಿದ್ದರೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮಿಂದ ಏನು ಆಗುತ್ತಿಲ್ಲ ಎಂದು ಕೈಚೆಲ್ಲಿ ಅಸಹಾಯಕತೆ ತೋಡಿಕೊಂಡಿದ್ದಾರೆ. ವಿಧಾನಪರಿಷತ್ ಸದಸ್ಯ ಬಿಕೆ ಹರಿಪ್ರಸಾದ್ , ಸೈಲೆಂಟ್ ಆಗಿಯೇ ರಾಹುಲ್ ಗಾಂಧಿಯನ್ನು ಭೇಟಿ ಮಾಡಿದ್ದು ಭಾರೀ ಕುತೂಹಲಕ್ಕೆ ಕಾರಣವಾಗಿದೆ. ಡಿಕೆಶಿ ಭೇಟಿಗೆ ಸಮಯ ಕೊಡದ ರಾಹುಲ್, ಹರಿಪ್ರಸಾದ್‌ಗೆ ಕೊಟ್ಟಿರುವುದು ಅಚ್ಚರಿಗೆ ಕಾರಣವಾಗಿದೆ.**

# ಸಾರ್ವಜನಿಕರ ಅಭಿಪ್ರಾಯ ಆಧರಿಸಿಯೇ ಎಸ್ಸೆಸ್ಸೆಲ್ಸಿ ಪಾಸ್ ಮಾರ್ಕ್ಸ್ ಇಳಿಕೆ

## ■ ವಿದ್ಯಾರ್ಥಿಗಳ ಡ್ರಾಪ್‌ಔಟ್ ತಡೆದು, ಉದ್ಯೋಗ ಪಡೆಯಲು ಅನುಕೂಲವಾಗುವ ನಿಟ್ಟಿನಲ್ಲಿ ಈ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಶಾಲಾ- ಕಾಲೇಜು ಶಿಕ್ಷಣದಿಂದ ವಿದ್ಯಾರ್ಥಿಗಳ ಡ್ರಾಪ್ ಔಟ್ ತಡೆ, ಮಕ್ಕಳ ಕಲಿಕೆ ಮುಂದುವರಿಸುವ ಜತೆಗೆ ಸಾಮಾನ್ಯವೆನಿಸುವ ಉದ್ಯೋಗಗಳನ್ನಾದರೂ ಪಡೆಯಲು ಅನುಕೂಲವಾಗುವ ನಿಟ್ಟಿನಲ್ಲಿ ಸಾರ್ವಜನಿಕರ ಅಭಿಪ್ರಾಯ ಆಧರಿಸಿಯೇ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣ ಅಂಕವನ್ನು 35ರಿಂದ 33ಕ್ಕೆ ಇಳಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸಮರ್ಥಿಸಿಕೊಂಡಿದ್ದಾರೆ.

**ಮಧು ಬಂಗಾರಪ್ಪ ಸಮರ್ಥನೆ**

ಕನಿಷ್ಠ ಅಂಕ ಇಳಿಕೆಗೆ ಸಾಹಿತಿಗಳೂ ಸೇರಿದಂತೆ ನಾನಾ ವರ್ಗದವರ ಆಕ್ಷೇಪಗಳನ್ನು ನಯವಾಗಿಯೇ ಅಲ್ಲಗಳೆದಿರುವ ಅವರು, ಈ ಸದುದ್ದೇಶದ ನಿರ್ಧಾರವನ್ನು ಆಕ್ಷೇಪಿಸುವವರು ಕನ್ನಡಿಗರಿಗೆ ಉದ್ಯೋಗಾವಕಾಶ ಸಿಗುವುದನ್ನು ವಿರೋಸುವವರು ಎಂದು ಭಾವಿಸಬೇಕಾಗುತ್ತದೆ ಎಂದಿದ್ದಾರೆ.

ಶಿಕ್ಷಣ ಇಲಾಖೆಯಲ್ಲಿನ ಕೆಲ ಪ್ರಯತ್ನ, ಪ್ರಯೋಗಗಳ ಕುರಿತಂತೆ ಮಾತನಾಡಿದ ಅವರು, ''ಕೇರಳ, ಈಶಾನ್ಯ ರಾಜ್ಯಗಳಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣ ಅಂಕ 30 ಇದೆ. ಗುಜರಾತ್, ರಾಜಸ್ಥಾನದಲ್ಲಿ ಕನಿಷ್ಠ ಅಂಕ 33 ಇದೆ.

ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾದರೆ ಪಿಯು, ಪದವಿ ಶಿಕ್ಷಣ ಮುಂದುವರಿಸಲು ಇತರೆ ಕೌಶಲ ತರಬೇತಿ ಪಡೆದು ಜೀವನೋಪಾಯ ಕಂಡುಕೊಳ್ಳಲು ನೆರವಾಗಲಿದೆ,'' ಎಂದು ಹೇಳಿದರು.

''ಚಾಲನಾ ಪರವಾನಗಿ ಪಡೆಯಲು ಎಸ್ಸೆಸ್ಸೆಲ್ಸಿ ಉತ್ತೀರ್ಣವಾಗಿರಬೇಕೆಂಬ ಷರತ್ತಿದೆ. ಒಂದೆರಡು ಅಂಕ ಕಡಿಮೆಯಿಂದ ಅನುತ್ತೀರ್ಣರಾಗಿ ಶಿಕ್ಷಣದಿಂದಲೇ ದೂರವಾದರೆ ಚಾಲಕರಾಗಿ ಜೀವನ ನಡೆಸುವುದು ಕೂಡ ಕಷ್ಟವಾಗಲಿದೆ. ಉದಾಹರಣೆಗೆ ಚಾಲಕರು, ಶುಶ್ರೂಷಕರೂ ಸೇರಿದಂತೆ ಇತರೆ ಉದ್ಯೋಗ ಪಡೆಯಲು ಸಹಕಾರಿ ಎನಿಸಿದೆ. ಹಾಗೆಂದು ಕನ್ನಡಿಗರು ಚಾಲಕ, ಶುಶ್ರೂಷಕ ಹುದ್ದೆಗಳನ್ನಷ್ಟೇ ಪಡೆಯಬೇಕೇ ಎಂದು ಭಾವಿಸಬೇಕಿಲ್ಲ. ಕನಿಷ್ಠ ಅಂಕ ಗಳಿಸಿದವರಿಗೂ ಮುಂದೆ ಉದ್ಯೋಗ ಸಿಗುವಂತಾಗಬೇಕೆಂಬ ಆಶಯ ನಮ್ಮದು. ಈ ಸಂಬಂಧ ಸಾರ್ವಜನಿಕರ ಅಭಿಪ್ರಾಯವನ್ನೂ ಸಂಗ್ರಹಿಸಲಾಗಿದ್ದು, 708 ಮಂದಿ ಸರಿ ಎಂದಿದ್ದು, 8 ಮಂದಿಯಷ್ಟೇ ಕನಿಷ್ಠ 35 ಅಂಕವಿರಲಿ ಎಂದಿದ್ದಾರೆ,'' ಎಂದು ವಿವರಿಸಿದರು.

''ಹಿಂದಿನ ಸರಕಾರ ಕೇವಲ 4,800 ಶಿಕ್ಷಕರನ್ನಷ್ಟೇ ನೇಮಕ ಮಾಡಿತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದ 11 ತಿಂಗಳಲ್ಲಿ 13,000 ಶಿಕ್ಷಕರನ್ನು ನೇಮಕ ಮಾಡಿದೆ. ಈಗ ಸರಕಾರಿ ಶಾಲೆಗಳಿಗೆ 12,000 ಹಾಗೂ ಅನುದಾನಿತ ಶಾಲೆಗಳಿಗೆ 6,000 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಶುರುವಾಗಿದೆ. ಒಳ ಮೀಸಲು ನಿಗದಿ ಸೇರಿದಂತೆ ನೇಮಕ ಪ್ರಕ್ರಿಯೆ ನಡೆಸಿ ಮುಂದಿನ ಶೈಕ್ಷಣಿಕ ವರ್ಷಾರಂಭದ ಹೊತ್ತಿಗೆ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು,'' ಎಂದು ತಿಳಿಸಿದರು.



**1,000 ಕೆಪಿಎಸ್ ಶಾಲೆ ಆರಂಭಕ್ಕೆ ಪ್ರಯತ್ನ**

**ಎಲ್‌ಕೆಜಿಯಿಂದ ಪಿಯುವರೆಗೆ ಒಂದೇ ಕಡೆ ಗುಣಮಟ್ಟದ ಶಿಕ್ಷಣ ಸಿಗುವ ಕೆಪಿಎಸ್ ಶಾಲೆ ಆರಂಭಿಸಲು ಒತ್ತು ನೀಡಲಾಗಿದೆ. ಒಂದನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ, 6ನೇ ತರಗತಿಯಲ್ಲಿ ಕೌಶಲ ಶಿಕ್ಷಣವೂ ಸಿಗಲಿದ್ದು, ಪೋಷಕರು ಮಕ್ಕಳನ್ನು ದಾಖಲಿಸಲು ಉತ್ಸುಕರಾಗಿದ್ದಾರೆ. ಸದ್ಯ 308 ಕೆಪಿಎಸ್ ಶಾಲೆಗಳಿದ್ದು, 1,000 ಕೆಪಿಎಸ್ ಶಾಲೆ ಆರಂಭಿಸಲು ಪ್ರಯತ್ನ ನಡೆದಿದೆ ಎಂದು ಹೇಳಿದರು. ಎಡಿಬಿ ಸಾಲದ ನೆರವಿನೊಂದಿಗೆ 500 ಕೆಪಿಎಸ್ ಶಾಲೆ ಆರಂಭಕ್ಕೆ ಸಿದ್ಧತೆ ನಡೆದಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 'ಅಕ್ಷರ ಆವಿಷ್ಕಾರ' ಕಾರ್ಯಕ್ರಮದಡಿ 1,250 ಕೋಟಿ ರೂ. ವೆಚ್ಚದಲ್ಲಿ ಆ ಭಾಗದಲ್ಲೇ 200 ಕೆಪಿಎಸ್ ಶಾಲೆಗಳು ಕಾರ್ಯಾರಂಭವಾಗಲಿವೆ. ಗಣಿಬಾಧಿತ ಪ್ರದೇಶಗಳಲ್ಲಿ 100 ಕೆಪಿಎಸ್ ಶಾಲೆಗಳನ್ನು ಡಿಎಂಎಫ್ ನಿಧಿ ಬಳಸಿ ಆರಂಭಿಸಲು ಪ್ರಯತ್ನ ನಡೆದಿದೆ. 4000 ಉರ್ದು ಶಾಲೆಗಳ ಪೈಕಿ 100 ಕೆಪಿಎಸ್ ಶಾಲೆ ಆರಂಭಿಸಲು ನಿರ್ಧರಿಸಲಾಗಿದೆ. ಇನ್ನೂ 100 ಕೆಪಿಎಸ್ ಶಾಲೆ ಸೇರಿದಂತೆ ಒಟ್ಟು 1,000 ಶಾಲೆ ಆರಂಭಿಸಲಾಗುವುದು ಎಂದು ತಿಳಿಸಿದರು.**

**ಯಾವುದೇ ಶಾಲೆ ಮುಚ್ಚುವುದಿಲ್ಲ:** ಕೆಪಿಎಸ್ ಶಾಲೆ ಹೆಚ್ಚಿದಂತೆ ಸರಕಾರಿ ಶಾಲೆಗಳನ್ನು ಮುಚ್ಚಲಾಗುತ್ತದೆ ಎಂಬುದಾಗಿ ಅಪಪ್ರಚಾರ ನಡೆದಿದೆ. 10ಕ್ಕಿಂತ ಕಡಿಮೆ ಮಕ್ಕಳಿರುವ 5008 ಶಾಲೆಗಳು ಸೇರಿದಂತೆ 50ಕ್ಕಿಂತ ಕಡಿಮೆ ಮಕ್ಕಳಿರುವ ಸುಮಾರು 23,000 ಶಾಲೆಗಳಿವೆ.

ಆದರೆ, ಒಬ್ಬ ವಿದ್ಯಾರ್ಥಿಯಿದ್ದರೂ ಶಾಲೆ ನಡೆಯಲಿದೆ. ಪೋಷಕರು ಬಯಸಿದರಷ್ಟೇ ಕೆಪಿಎಸ್ ಶಾಲೆಯಲ್ಲಿ ಸಮೀಪದ ಸರಕಾರಿ ಶಾಲೆಗಳ ಮಕ್ಕಳ ವಿಲೀನಕ್ಕೆ ಅವಕಾಶವಿರಲಿದೆ. ಮಕ್ಕಳ ಸಂಖ್ಯೆ ಶೂನ್ಯಕ್ಕಿಳಿದರೂ ಶಿಕ್ಷಕರ ಸೇವೆ ಬೇರೆಡೆ ಬಳಸಿಕೊಂಡರೂ ಶಾಲೆ ಹಾಗೆಯೇ ಉಳಿಯಲಿದೆ,'' ಎಂದು ಹೇಳಿದರು.

''ಪೂರ್ವ ಪ್ರಾಥಮಿಕದಿಂದ ಪಿಯುವರೆಗೆ ಒಂದೇ ಕ್ಯಾಂಪಸ್‌ನಲ್ಲಿ ಗುಣಮಟ್ಟದ ಶಿಕ್ಷಣ, 5 ಕಿ.ಮೀ. ವ್ಯಾಪ್ತಿವರೆಗೆ ಉಚಿತ ಸಾರಿಗೆ ವ್ಯವಸ್ಥೆ ಕಾರಣಕ್ಕೆ ಸರಕಾರಿ ಶಾಲೆಗಳು ಮಾತ್ರವಲ್ಲದೆ, ಖಾಸಗಿ ಶಾಲೆ ಮಕ್ಕಳು ಸಹ ಕೆಪಿಎಸ್ ಶಾಲೆಗೆ ದಾಖಲಾಗುವ ನಿರೀಕ್ಷೆ ಇದೆ. ಹಾಗಿದ್ದರೂ ನಾನಾ ಲಾಬಿಗಳು ಸರಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂಬುದಾಗಿ ಅಪಪ್ರಚಾರ ನಡೆಸುತ್ತಿವೆ,'' ಎಂದು ದೂರಿದರು.

''ರಾಜ್ಯಾದ್ಯಂತ 100ಕ್ಕೂ ಹೆಚ್ಚು ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳ ಆರಂಭಕ್ಕೂ ಪ್ರಯತ್ನ ನಡೆದಿದೆ. 6,000 ಗ್ರಾಪಂ ವ್ಯಾಪ್ತಿಯಲ್ಲಿ 6,000 ಕೆಪಿಎಸ್ ಶಾಲೆಗಳನ್ನು ಹಂತ ಹಂತವಾಗಿ ಆರಂಭಿಸಬೇಕೆಂಬುದು ನಮ್ಮ ಗುರಿ. ಶಾಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ, ಶೂ, ಸಾಕ್ಸ್, ಪಠ್ಯಪುಸ್ತಕ, ನೋಟ್‌ಬುಕ್, ಹಾಲು, ಮೊಟ್ಟೆ, ಊಟ ನೀಡಲಾಗುತ್ತಿದೆ. ಸರಕಾರ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸುತ್ತಿರುವಾಗ ಪೋಷಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲಿಸಲು ಮುಂದಾಗಬೇಕು,'' ಎಂದು ಮನವಿ ಮಾಡಿದರು.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,513/Gram24ct ₹11,470/Gram22ct | ಬೆಳ್ಳಿ: ₹163.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ದೇವದೇವಿಯರ ಅವಹೇಳನ - 3

ಕೊಲ್ಲೂರು ಮೂಕಾಂಬಿಕೆಗೆ ಸೀರೆ ಉಡಿಸಿದರೆ ದೇವರು ತೃಪ್ತಿ ಆಗತಾನಂತ. ಥೂ! ಲಕ್ಷ್ಮೀಪೂಜೆ ಮಾಡಿದರೆ ಲಕ್ಷ್ಮೀ ಬರತಾಳಂತ, ಯಾವ ಲಕ್ಷ್ಮೀ, ಜೂಲೀ ಲಕ್ಷ್ಮೀ ಕೈಲಾಸದಾಗ ಶಿವ ಇದ್ದಾನಂತ ಪಾರ್ವತೀ ಇದ್ದಾಳಂತ ತಲೆ ಮ್ಯಾಲ ಒಬ್ಬಳನ್ ಇಟ್ಕೊಂಡಾನಂತ, ತೊಡೆಮ್ಯಾಲ್ ಒಬ್ಬಳನ್ನಿಟ್ಕೊಂಡಾನಂತ, ಇವಳ ಜೊತೆ ಲವ್ ಅಂತ, ಅವಳಿಲ್ದ ಇವಳ ಜೊತೆ ಡಿವೋರ್ಸ್ ಅಂತ. ದೇಶ ಉದ್ಧಾರ ಆಗೋದು ಗುಡಿಯಿಂದನೋ ಯಾವನ್ರಿ ಅವನು ಗಣಪತಿ ದೇವರು ಅಂದಾಂವ ಹಸು ದೇವರಂತೆ ಹಂದಿ ಯಾಕ ದೇವರಾಗಲ್ಲ ಇವು ನಿಜಗುಣಾನಂದ ಸ್ವಾಮಿಯ ಮಾತುಗಳು. ಕಾವೀಧಾರಿ ಮಠಾಧಿಪತಿ ಭಕ್ತರಿಗೆ ಉಪದೇಶ ನೀಡುವ ಧರ್ಮತತ್ತ್ವಗಳು! ಹೊಲಸು ತಿನ್ನಬೇಡಿ ಕುಡಿಯಬೇಡಿ ಕಳ್ಳತನ ಸುಳ್ಳು ಅಹಂಕಾರ ಬೇಡ, ಸದ್ಗುಣ ನಯ ವಿನಯ ಭಕ್ತಿ ಇರಲೆಂದು ಹೇಳಿದರೆ ತಲೆ ಬಾಗೋಣ. ತದ್ವಿರುದ್ಧವಾಗಿ ಗುಡಿಗೆ ಹೋಗಬೇಡಿ, ಭಯ ಭಕ್ತಿ ಪೂಜೆ ಪುನಸ್ಕಾರ ದಾನ ಧರ್ಮ ಬಿಡಿ ಎನ್ನುವುದು ಯಾವ ಧರ್ಮ ಈತ ಧರ್ಮಗುರುವಂತೆ, ಈತನಿಗೂ ಗುಪ್ತಾಂಗವಿದೆಯಂತೆ! ಎಂದರೆ ಹೇಗೆ ಜಗದ ರಕ್ಷಕನೊಬ್ಬ ತಂದೆ ಜಗತ್ತಿಗೆ ಅನ್ನ ನೀಡುವ ತಾಯಿ, ಇಳೆ ನಿಮ್ಮ ದಾನ ಎಂಬ ಆಶಯದಂತೆ ಶಿವ ಪಾರ್ವತಿ ಗಣಪತಿ ಮುಂತಾದ ಸಗುಣ ದೇವರನ್ನು ಕಲ್ಪಿಸಿ ಋಣಭಾವದಿಂದ ದಾನ ಧರ್ಮ ಕಾಣಿಕೆ ಅರ್ಪಿಸಿ ಪೂಜಿಸಿ ಭಕ್ತರು ಸಂತಸಪಡುವುದು ಇವರ ಬುಡಕ್ಕೆ ಬೆಂಕಿ ಇಟ್ಟಂತೆಯೇ ದೇಶಕ್ಕೆ ಬಾಂಬ್ ಇಟ್ಟಂತೆಯೇ ಕೊಳ್ಳೆ ಹೊಡೆದಂತೆಯೇ

# ಬೆಂಗಳೂರಿನಲ್ಲಿ ಸದ್ದಿಲ್ಲದೆ ಅರಳುತ್ತಿದೆ ಕಾಶ್ಮೀರಿ ಕೇಸರಿ: ಹೊಸ ಟ್ರೆಂಡ್ ಆಗುತ್ತಿದೆ ಒಳಾಂಗಣ ಕೃಷಿ!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ 30 ಕ್ಕೂ ಹೆಚ್ಚು ಜನರು ಕೇಸರಿ ಒಳಾಂಗಣ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಕೇಸರಿ ಬೆಳೆಯುವ ವಿಧಾನಗಳು ಇತ್ತೀಚಿನ ವರ್ಷಗಳಲ್ಲಿ ಆರಂಭವಾಗಿದ್ದು, ಈಗ ಅವು ನಿಧಾನವಾಗಿ ಟ್ರೆಂಡ್ ಆಗುತ್ತಿವೆ. ಇದನ್ನು ಸಾಮಾನ್ಯವಾಗಿ ಗುಡ್ಡಗಾಡು ಅಥವಾ ಪರ್ವತ ಪ್ರದೇಶಗಳಲ್ಲಿ ಬೆಳೆಸಲಾಗುತ್ತದೆ. ಬೆಂಗಳೂರು ಸೇರಿ ಶೃಂಗೇರಿ, ಕುಣಿಗಲ್ ಮತ್ತು ತುಮಕೂರಿನಲ್ಲಿ ಈ ಪದ್ಧತಿ ವಿರಳವಾಗಿದ್ದರೂ ಸಹ ಪ್ರಚಲಿತವಾಗಿದೆ.

ಬೆಂಗಳೂರು ಗುಡ್ಡಗಾಡು ಪ್ರದೇಶವಲ್ಲದಿದ್ದರೂ, ಅದರ ಎತ್ತರ ಮತ್ತು ಹವಾಮಾನವು ಕೇಸರಿ ಬೆಳೆಯಲು ಅನುಕೂಲಕರವಾಗಿದೆ ಎಂದು ಕರ್ನಾಟಕ ಕೇಸರಿ ರೈತರ ಸಂಘದ (ಕೆಎಸ್‌ಎಫ್‌ಎ) ಸಂಸ್ಥಾಪಕ ಮತ್ತು ಮುಖ್ಯ ಕಾರ್ಯದರ್ಶಿ ಲೋಕೇಶ್ ವೊಲಿವಿನ್ ಹೇಳಿದರು. ನಮ್ಮ ಹೆಚ್ಚಿನ ಸದಸ್ಯರು ಸಾಂಪ್ರದಾಯಿಕ ಕೃಷಿ ಕುಟುಂಬಗಳಿಂದ ಬಂದವರು, ಆದಾಗ್ಯೂ ಅವರಲ್ಲಿ ಹಲವರು ಪ್ರಸ್ತುತ ಐಟಿ, ಜೈವಿಕ ತಂತ್ರಜ್ಞಾನ, ಆರೋಗ್ಯ ಮತ್ತು ಸಂಶೋಧನೆ ಸೇರಿದಂತೆ ವಿವಿಧ ವೃತ್ತಿಪರ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕೆಲವರು ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ವೈದ್ಯರು ಅಥವಾ ಅಧಿಕಾರಿಗಳಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ ಎಂದು ವೊಲಿವಿನ್ ಹೇಳಿದರು.

ಕೇಸರಿ ಗಿಡ ಹೂಬಿಡುವುದು ಅತ್ಯಂತ ನಿರ್ಣಾಯಕ ಹಂತವಾಗಿದೆ. ತಾಪಮಾನ, ತೇವಾಂಶ ಅಥವಾ ಬೆಳಕಿನಲ್ಲಿನ ಸಣ್ಣ ಏರಿಳಿತವು ಸಹ ಹೂವಿನ ಇಳುವರಿಯನ್ನು ತೀವ್ರವಾಗಿ ಕಡಿಮೆ ಮಾಡುತ್ತದೆ. ಮತ್ತೊಂದು ಸವಾಲು ಎಂದರೆ ಗುಣಮಟ್ಟದ ಕೇಸರಿ ಗೆಡ್ಡೆಗಳ ಲಭ್ಯತೆ ಮತ್ತು ವೆಚ್ಚ. ಕೇಸರಿ ಗೆಡ್ಡೆಗಳನ್ನು ಬಹುತೇಕ ಸಂಪೂರ್ಣವಾಗಿ ಕಾಶ್ಮೀರದಿಂದಲೇ ಪಡೆಯಬೇಕಾಗಿದೆ. ಕಳೆದ ಐದು ವರ್ಷಗಳಲ್ಲಿ, ಗೆಡ್ಡೆ ಬೆಲೆಗಳು ಕೆಜಿಗೆ ಸುಮಾರು 250 ರೂ.ಗಳಿಂದ 3,000 ರೂ.ಗಳಿಗೆ ಏರಿದೆ, ಹೀಗಾಗಿ ಅಗತ್ಯವಿರುವ ಬೆಂಬಲ ಸಿಗುತ್ತಿಲ್ಲ ಎಂದು ವೊಲಿವಿನ್ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಕೃಷಿ, ತೋಟಗಾರಿಕೆ ಇಲಾಖೆ ಮತ್ತು ಸಂಶೋಧನಾ ಸಂಸ್ಥೆಗಳಿಂದ ಸೀಮಿತ ಸಾಂಸ್ಥಿಕ ಅಥವಾ ತಾಂತ್ರಿಕ ಬೆಂಬಲವಿದೆ. ಗುಣಮಟ್ಟದ ಗೆಡ್ಡೆಗಳು ಮತ್ತು ಪರಿಸರ ನಿಯಂತ್ರಣವನ್ನು ಖಚಿತಪಡಿಸಿಕೊಂಡರೆ ಅದು ಆರ್ಥಿಕವಾಗಿ ಸುಸ್ಥಿರವಾಗಿರುತ್ತದೆ. ಹೂಡಿಕೆ, ಸರ್ಕಾರಿ ಬೆಂಬಲದ ಕೊರತೆ ಮತ್ತು ತಾಂತ್ರಿಕ ಸವಾಲುಗಳು ಈ ವಲಯಕ್ಕೆ ಹೊಸಬರಿಗೆ ಪ್ರಮುಖ ಅಡೆತಡೆಗಳಾಗಿ ಉಳಿದಿವೆ ಎಂದು ಅವರು ಹೇಳಿದರು.

# ಭೂಮಿ ಕಳೆದುಕೊಂಡ ಸಾವಿರಾರು ಮಾಲೀಕರಿಗೆ ನಿವೇಶನ ಹಂಚಿಕೆ ಪ್ರಕ್ರಿಯೆ

## ಇನ್ನೆರಡು ವಾರಗಳಲ್ಲಿ, ಪ್ರಾಧಿಕಾರವು ಭೂಮಿ ಕಳೆದುಕೊಂಡವರಿಂದ ಪ್ರತ್ಯೇಕವಾಗಿ ಅರ್ಜಿಗಳನ್ನು ಆಹ್ವಾನಿಸುವ ಸಾಧ್ಯತೆಯಿದೆ

• **ಉದಯವಾಹಿನಿ, ಬೆಂಗಳೂರು**

ವರ್ಷಗಳ ಕಾಲದ ಕಾನೂನು ಹೋರಾಟ, ವಿಳಂಬ ಮತ್ತು ಸಾವಿರಾರು ಭೂಮಾಲೀಕರ ಆತಂಕದ ನಿರೀಕ್ಷೆಯ ನಂತರ, ಡಾ. ಕೆ. ಶಿವರಾಮ ಕಾರಂತ ಬಡಾವಣೆ ಯೋಜನೆ ಅಂತಿಮವಾಗಿ ಪರಿಹಾರದತ್ತ ಸಾಗುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಈಗ ತಮ್ಮ ಭೂಮಿಯನ್ನು ಬಿಟ್ಟುಕೊಟ್ಟವರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸಿದ್ಧತೆ ನಡೆಸುತ್ತಿದೆ. ಬಹುತೇಕ ಇನ್ನೆರಡು ವಾರಗಳಲ್ಲಿ, ಪ್ರಾಧಿಕಾರವು ಭೂಮಿ ಕಳೆದುಕೊಂಡವರಿಂದ ಪ್ರತ್ಯೇಕವಾಗಿ ಅರ್ಜಿಗಳನ್ನು ಆಹ್ವಾನಿಸುವ ಸಾಧ್ಯತೆಯಿದೆ. ಅಧಿಕಾರಿಗಳ ಪ್ರಕಾರ, ಮೊದಲ ಹಂತದಲ್ಲಿ ಸುಮಾರು 5,000 ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ಈ ಬೆಳವಣಿಗೆಯು ಮಹತ್ವದ್ದಾಗಿದ್ದರೂ, ಈಗಾಗಲೇ ತಡವಾಗಿದೆ. ಸುಪ್ರೀಂ ಕೋರ್ಟ್‌ನ ನಿರ್ದೇಶನಗಳಿಗೆ ಅನುಗುಣವಾಗಿ ಕರ್ನಾಟಕ ಹೈಕೋರ್ಟ್, ಗೃಹ ನಿರ್ಮಾಣ ಬಡಾವಣೆಗಾಗಿ ತಮ್ಮ ಭೂಮಿಯನ್ನು ಒಪ್ಪಿಸಿದ್ದ ಭೂಮಾಲೀಕರಿಗೆ ನಿವೇಶನಗಳನ್ನು ಹಂಚಲು ಬಿಡಿಎಗೆ ಅನುಮತಿ ನೀಡಿ ಎರಡು ತಿಂಗಳಿಗಿಂತ ಹೆಚ್ಚು ಸಮಯವೇ ಕಳೆದಿದೆ. ಸಾಫ್ಟ್‌ವೇರ್ ಸಿದ್ಧವಾಗಿದೆ. ರೈತರ ವಿವರಗಳು, ಅವರು ಕಳೆದುಕೊಂಡ ಭೂಮಿಯ ವಿಸ್ತೀರ್ಣವನ್ನು ಸಿಸ್ಟಮ್‌ಗೆ ಸೇರಿಸಲಾಗುತ್ತಿದೆ. ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಮಾನವ ಹಸ್ತಕ್ಷೇಪವನ್ನು ತಪ್ಪಿಸಲು ಇದನ್ನು ಮಾಡಲಾಗುತ್ತಿದೆ. ಹಿಂದಿನ ತಪ್ಪುಗಳನ್ನು ಪುನರಾವರ್ತಿಸಲು ನಾವು ಬಯಸುವುದಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ಈ ವಾರ ಪ್ರಾಯೋಗಿಕ ಚಾಲನೆ ನಡೆಯುವ ಸಾಧ್ಯತೆಯಿದ್ದು, ಡಿಸೆಂಬರ್‌ನಲ್ಲಿ ಪೂರ್ಣ ಪ್ರಮಾಣದ ಹಂಚಿಕೆ ಆರಂಭವಾಗುವ ನಿರೀಕ್ಷೆಯಿದೆ. ಕಳೆದ ವರ್ಷವೇ ಬಡಾವಣೆ ಹಂಚಿಕೆಗೆ ಸಿದ್ಧವಾಗಿದ್ದರೂ, ಸರ್ಕಾರವು ಭೂಮಿ ಕಳೆದುಕೊಂಡವರಿಗೆ ಮತ್ತು ಸಾರ್ವಜನಿಕರಿಗೆ ಏಕಕಾಲದಲ್ಲಿ ನಿವೇಶನಗಳನ್ನು ನೀಡಲು ಪ್ರಯತ್ನಿಸಿದ ನಂತರ ಪ್ರಕ್ರಿಯೆಯನ್ನು ನಿಲ್ಲಿಸಲಾಯಿತು.

ಹೈಕೋರ್ಟ್ ಈ ಕ್ರಮಕ್ಕೆ ತಡೆಯಾಜ್ಞೆ ನೀಡಿದ್ದರಿಂದ, ಹಂಚಿಕೆ ಪ್ರಕ್ರಿಯೆಯು ದೀರ್ಘಕಾಲದವರೆಗೆ ಸ್ಥಗಿತಗೊಂಡಿತ್ತು. ಈ ಬಡಾವಣೆಯಲ್ಲಿ ಒಟ್ಟು ಸುಮಾರು 34,000 ನಿವೇಶನಗಳಿವೆ.

**ಇದಲ್ಲದೆ, ಫೆಬ್ರವರಿ 2023ರಲ್ಲೇ ತಮ್ಮ ಆಸ್ತಿಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು, ಅಂದಿನಿಂದ ಪರಿಹಾರಕ್ಕಾಗಿ ಕಾಯುತ್ತಿರುವ ಭೂಮಾಲೀಕರಿಗೆ ಇದು ದೊಡ್ಡ ಸಮಾಧಾನ ತಂದಿದೆ. ಬಿಡಿಎಯ 60:40 ಯೋಜನೆ' ಅಡಿಯಲ್ಲಿ, ರೈತರು ಒಂದು ಎಕರೆ ಕೃಷಿ ಭೂಮಿಯನ್ನು ಬಿಟ್ಟುಕೊಟ್ಟರೆ, ಅದಕ್ಕೆ ಪ್ರತಿಯಾಗಿ 9,583 ಚದರ ಅಡಿಯ 'ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿಗಳನ್ನು ಸ್ವೀಕರಿಸಲು ನಿವೇಶನಗಳನ್ನು ಹಂಚಲು ಪ್ರಾಧಿಕಾರವು ವಿಶೇಷ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಿದೆ ಎಂದು ಬಿಡಿಎಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

ಉತ್ತರ ಬೆಂಗಳೂರಿನ 17 ಗ್ರಾಮಗಳಲ್ಲಿ 3,500 ಎಕರೆಗಳಷ್ಟು ವಿಸ್ತಾರವಾಗಿರುವ ಈ ಬಡಾವಣೆಯು ಬಹುತೇಕ ಸಿದ್ಧವಾಗಿದೆ. ಆದರೆ, ಹೈಕೋರ್ಟ್‌ನಲ್ಲಿ ಕೆಲವು ವ್ಯಾಜ್ಯಗಳು ಬಾಕಿ ಇರುವುದರಿಂದ ಕೆಲವೆಡೆ ಕಾಮಗಾರಿ ಸ್ಥಗಿತಗೊಂಡಿದೆ.

### ಬಿಡಿಎ ಲಾಭಕ್ಕಾಗಿ ರಿಯಲ್ ಎಸ್ಟೇಟ್

**ಬಡಾವಣೆಗಾಗಿ ಸಣ್ಣ ತುಂಡು ಭೂಮಿಯನ್ನು ಕಳೆದುಕೊಂಡಿರುವ ರಾಮಗೊಂಡನಹಳ್ಳಿಯ ಸಾಮಾಜಿಕ ಕಾರ್ಯಕರ್ತ ರಮೇಶ್ ಎಂ. ಅವರ ಪ್ರಕಾರ, ಅಭಿವೃದ್ಧಿಪಡಿಸಿದ ನಿವೇಶನಗಳ ಬಗ್ಗೆ ಬಿಡಿಎ ನೀಡಿದ ಭರವಸೆಗಳು ಸಂಪೂರ್ಣವಾಗಿ ಈಡೇರಿಲ್ಲ. ಮನೆಗಳನ್ನು ನಿರ್ಮಿಸಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಬಿಡಿಎ ಒದಗಿಸಿದೆ, ಆದರೆ ಪೈಪ್‌ಲೈನ್ ಮೂಲಕ ನೀರು ಸರಬರಾಜು ಇಲ್ಲ. ಸುಮಾರು 20 ವರ್ಷಗಳ ಹಿಂದೆ ನಿಗಮದ ವ್ಯಾಪ್ತಿಗೆ ಸೇರಿಸಿದ 110 ಹಳ್ಳಿಗಳಿಗೆ ಈಗಷ್ಟೇ ನೀರಿನ ಸಂಪರ್ಕ ಸಿಗುತ್ತಿದೆ, ಹೀಗಿರುವಾಗ ಈ ಬಡಾವಣೆಗೆ ಯಾವಾಗ ಸಿಗುತ್ತದೆ? ತಾಂತ್ರಿಕವಾಗಿ, ಬಿಡಿಎ ತನ್ನ ಸ್ವಂತ ಲಾಭಕ್ಕಾಗಿ ರಿಯಲ್ ಎಸ್ಟೇಟ್ ಯೋಜನೆಯನ್ನು ಕೈಗೊಂಡಿದೆ, ಎಂದು ಅವರು ಆರೋಪಿಸಿದರು.**

ನಾವು ನ್ಯಾಯಾಲಯದಲ್ಲಿ ಅನುಕೂಲಕರ ಫಲಿತಾಂಶಗಳನ್ನು ಪಡೆಯುವ ವಿಶ್ವಾಸವಿದೆ, ಎಂದು ಹೇಳಿದ್ದಾರೆ.

## ಭಜನ-ಪ್ರವಚನ-ಸಂಕೀರ್ತನ

• **ಉದಯವಾಹಿನಿ, ಬೆಂಗಳೂರು**

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸಂಜಯನಗರದ ಶ್ರೀ ರಾಧಾಕೃಷ್ಣ ದೇವಸ್ಥಾನದಲ್ಲಿ ನವೆಂಬರ್ 25 ರಿಂದ 28ರವರೆಗೆ ಏರ್ಪಡಿಸಿರುವ ಕಾರ್ಯಕ್ರಮಗಳು ಭಜನಾ ಕಾರ್ಯಕ್ರಮ (ಪ್ರತಿದಿನ ಸಂಜೆ 6 ರಿಂದ 7) : ನವೆಂಬರ್ 25–ಮತ್ತಿಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿ, ನವೆಂಬರ್ 26– ಸಂಜಯನಗರದ ಶ್ರೀ ಲಕ್ಷ್ಮೀ ಸೋಬಾನೆ ಮಹಿಳಾ ಮಂಡಲಿ ಮತ್ತು ನವೆಂಬರ್ 27–ವಿದ್ಯಾರಣ್ಯಪುರದ ಶ್ರೀ ವಿಜಯ ವಿಠಲ ಭಜನಾ ಮಂಡಳಿ.



ಪ್ರವಚನ ಕಾರ್ಯಕ್ರಮ ಪ್ರತಿದಿನ ಸಂಜೆ 7 ರಿಂದ 8 ಶ್ರೀ ಆನಂದತೀರ್ಥಾಚಾರ್ಯ ಪೇಟೆಯವರಿಂದ ಭಾಗವತ ದಶಮ ಸ್ಕಂದ ವಿಷಯವಾಗಿ ಧಾರ್ಮಿಕ ಪ್ರವಚನ. ಹರಿನಾಮ ಸಂಕೀರ್ತನೆ ನವೆಂಬರ್ 28, ಶುಕ್ರವಾರ ಸಂಜೆ 6–30ಕ್ಕೆ. ಕು|| ಕೀರ್ತನ ನರಸಿಂಹನ್ (ಗಾಯನ), ಕು|| ದೀಪಿಕಾ ರಾಜಪ್ಪ (ಪಿಟೀಲು), ಶ್ರೀ ಲೋಕಪ್ರಿಯ ಗುರುಮೂರ್ತಿ (ಮೃದಂಗ), ಶ್ರೀ ಆರ್. ವಿಶ್ವನಾಥ್ (ಘಟ). ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಟಿ ಟಿ ಡಿ ಹೆಚ್ .ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ.

## BTS 2025: ಶೇ.37 ರಷ್ಟು ಮಾಲಿನ್ಯ ಕಡಿತ- ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ನವೆಂಬರ್ 20 ರಂದು ಮುಕ್ತಾಯಗೊಂಡ ಬೆಂಗಳೂರು ಟೆಕ್ ಶೃಂಗಸಭೆ BTS 2025 ರಲ್ಲಿ ಇಂಗಾಲ ಹೊರಸೂಸುವಿಕೆಯಲ್ಲಿ ಶೇ. 37 ರಷ್ಟು ಕಡಿತ ಸಾಧಿಸಿರುವುದಾಗಿ ಪ್ರಿಯಾಂಕ್ ಖರ್ಗೆ ಘೋಷಿಸಿದ್ದಾರೆ. ಖರ್ಗೆ ನೇತೃತ್ವದಲ್ಲಿ ಶೃಂಗಸಭೆ ನಡೆಸಲಾಯಿತು. ಹೆಚ್ಚಿದ ಮೆಟ್ರೋ ಬಳಕೆ ಮತ್ತು ಸಂಬಂಧಿತ ಉಪಕ್ರಮಗಳಿಂದ ಇಂಗಾಲ ಹೊರಸೂಸುವಿಕೆಯಲ್ಲಿ ಶೇ. 37 ರಷ್ಟು ಕಡಿತ ಸಾಧಿಸಿದ್ದೇವೆ ಎಂದು ಅವರು ಹೇಳಿಕೊಂಡಿದ್ದಾರೆ. ಪ್ರತಿನಿಧಿಗಳಿಗೆ 5,000ಕ್ಕೂ ಹೆಚ್ಚು ಬಾರಿ ಉಚಿತವಾಗಿ ಮೆಟ್ರೋದಲ್ಲಿ ಕರೆದೊಯ್ಯಲಾಗಿದೆ. ಇದರರ್ಥ ಸ್ಥಳಕ್ಕೆ 5,000 ಕಡಿಮೆ ವಾಹನದ ಪ್ರಯಾಣ ಎಂಬುದಾಗಿದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ಸುಮಾರು 92,500 ಜನರು ಭಾಗವಹಿಸಿದ್ದ ಶೃಂಗಸಭೆಯಲ್ಲಿ 9,700 ಕೆಜಿಗಿಂತ ಹೆಚ್ಚು ತ್ಯಾಜ್ಯ ಉತ್ಪಾದನೆಯಾಗಿತ್ತು. ಅದನ್ನೆಲ್ಲ ಮರುಬಳಕೆ ಮಾಡಲಾಗಿದೆ.

ಸುಸ್ಥಿರತೆ ಜಾಗೃತಿಯಾಗಿ ಸುಮಾರು 12,000 ಭಾಗವಹಿಸಿದ್ದ ಶೃಂಗಸಭೆಯಲ್ಲಿ 850 ಮಳಿಗೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದು ಹೇಳಿದ್ದಾರೆ.

## ಬೆಂಗಳೂರು ಕೇಂದ್ರ ನಗರ ಪಾಲಿಕೆ: ಇಂದು ಫೋನ್ ಇನ್ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಲು ನ.25ರಂದು ಸಂಜೆ 6ರಿಂದ 7ರವರೆಗೆ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಸಾರ್ವಜನಿಕರ ಕರೆಗಳಿಗೆ ಉತ್ತರಿಸಲಿದ್ದಾರೆ. ರಸ್ತೆ ಗುಂಡಿ, ರಸ್ತೆ ದುರಸ್ತಿ, ಬೀದಿ ದೀಪಗಳ ನಿರ್ವಹಣೆ, ಕಸ ವಿಲೇವಾರಿ, ಉದ್ಯಾನ ನಿರ್ವಹಣೆ, ಇ-ಖಾತಾ ವಿಷಯಗಳು, ಒತ್ತುವರಿ, ಚರಂಡಿ ಶುದ್ಧೀಕರಣ ಸಹಿತ ವಿವಿಧ ವಿಚಾರಗಳ ಬಗ್ಗೆ ಅಹವಾಲು ಸಲ್ಲಿಸಬಹುದು. ಕರೆ ಮಾಡಬೇಕಾದ ಸಂಖ್ಯೆ: 080–22975803.

## ದಿಢೀರ್ ಗಗನಕ್ಕೇರಿದ ಟೊಮ್ಯಾಟೋ ಬೆಲೆ, ಕಂಗಾಲಾದ ಗ್ರಾಹಕರು

• **ಉದಯವಾಹಿನಿ, ಬೆಂಗಳೂರು**

ಕಳೆದ ಕೆಲವು ದಿನಗಳಿಂದ ಹಾವು–ಏಣಿ ಆಟವಾಡುತ್ತಿದ್ದ ಟೊಮ್ಯಾಟೋ ಬೆಲೆ ಈಗ ದಿಢೀರನೆ ಗಗನಕ್ಕೇರುತ್ತಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ. ಲಾಟರಿ ಬೆಳೆ ಎಂದು ಕರೆಯಲಾಗುವ ಟೊಮ್ಯಾಟೋ ಬೆಲೆ ಯಾವಾಗ ಏರುತ್ತೆ, ಯಾವಾಗ ಪಾತಾಳ ತಲುಪುತ್ತದೆ ಎಂದು ಊಹೆ ಮಾಡುವುದು ಕಷ್ಟ. ಕಳೆದ ವಾರ ಕೆಜಿಗೆ 25 ರೂ.ನಿಂದ 30ರೂ. ಆಸುಪಾಸಿನಲ್ಲಿದ್ದ ಬೆಲೆ ಈಗ ದುಪ್ಪಟ್ಟಾಗಿ 50 ರಿಂದ 70 ರೂ.ಗೆ ತಲುಪಿದೆ. ಈ ಅನಿರೀಕ್ಷಿತ ಬೆಲೆ ಏರಿಕೆ ಕಂಡು ಗ್ರಾಹಕರು ಕಂಗಾಲಾಗಿದ್ದಾರೆ. ರಾಜ್ಯಾದ್ಯಂತ ಉಂಟಾದ ಹವಾಮಾನ ವೈಪರೀತ್ಯ, ರೋಗಬಾಧೆಯಿಂದ ಈ ಬಾರಿ ಇಳುವರಿ ಕುಂಠಿತವಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಹೆಚ್ಚಾದ ಚುಕ್ಕೆರೋಗ, ಕಾಂಡಕೊರೆತ ಹುಳುಗಳ ಹಾವಳಿ ಸೇರಿದಂತೆ ಮತ್ತಿತರ ಕಾರಣಗಳಿಂದ ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಬೆಂಗಳೂರು ಗ್ರಾಮಾಂತರ ಸೇರಿದಂತೆ ಮತ್ತಿತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಬೆಳೆದಿದ್ದ ಬೆಳೆ ಕೈಗೆ ಸಿಗುವ ಮುನ್ನವೇ ಹಾಳಾಗುತ್ತಿದ್ದು, ರೈತರು ತೀವ್ರ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಏಷ್ಯಾದಲ್ಲೇ ದೊಡ್ಡ ಟೊಮ್ಯಾಟೋ ಮಾರುಕಟ್ಟೆಯಾದ ಕೋಲಾರದ ಎಪಿಎಂಸಿ ಮಾರುಕಟ್ಟೆಗೂ ಸಹಮಾಲು ಬರುತ್ತಿಲ್ಲ. ಇಲ್ಲಿಂದ ಅಪಾರ ಪ್ರಮಾಣದಲ್ಲಿ ನೆರಯ ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಿಗೂ ಸಹ ಟೊಮ್ಯಾಟೋ ರಫ್ತಾಗುತ್ತಿತ್ತು. ಆದರೆ, ಇಳುವರಿ ಕುಂಠಿತದಿಂದ ಮಾರುಕಟ್ಟೆಗೆ ನಿಗದಿತ ಪ್ರಮಾದಲ್ಲಿ ಗುಣಮಟ್ಟದ ಮಾಲು ಬರುತ್ತಿಲ್ಲ. ಹೀಗಾಗಿ ಬೇಡಿಕೆ ಹೆಚ್ಚಾಗಿ, ಬೆಲೆಯೂ ಸಹ ದುಪ್ಪಟ್ಟಾಗದೆ. ಕಳೆದ 15 ದಿನಗಳ ಹಿಂದೆ 15 ಕೆಜಿ ತೂಕದ ಒಂದು ಕ್ರೇಟ್ 250 ರೂ. ನಿಂದ 350 ರೂ.ಗೆ ಮಾರಾಟವಾಗುತ್ತಿತ್ತು. ಆದರೆ ನಿನ್ನೆಯಿಂದ ಒಂದು ಕ್ರೇಟ್ 500 ರಿಂದ 600 ರೂ.ಗೆ ತಲುಪಿದೆ. ಮಾರುಕಟ್ಟೆಯಲ್ಲಿ ಒಂದು ಕೆಜಿ ಹಣ್ಣು 50 ರಿಂದ 55 ರೂ.ಗೆ ಮಾರಾಟವಾಗುತ್ತಿದ್ದರೆ, ಚಿಲ್ಲರೆಯಾಗಿ 60 ರಿಂದ 70ರೂ.ಗೆ ತಲುಪಿದೆ. ಇದರಿಂದ ಕೆಜಿ ಖರೀದಿಸುತ್ತಿದ್ದ ಜನರು ಅರ್ಧ ಕೆಜಿ, ಕಾಲು ಕೆಜಿ ಖರೀದಿ ಮಾಡುತ್ತಿದ್ದಾರೆ.

# ಜನಸಂದಣಿ ಪ್ರದೇಶಗಳಲ್ಲಿ 1,000 ಉಕ್ಕಿನ ಕಸ ಸಂಗ್ರಹ ತೊಟ್ಟಿ ಇಡಲು ಮುಂದು!

• **ಉದಯವಾಹಿನಿ, ಬೆಂಗಳೂರು**

ಹೆಚ್ಚಿನ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸಲು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಬಿಎಸ್‌ಡಬ್ಲ್ಯೂಎಂಎಲ್, ಸಿಎಸ್‌ಆರ್ ನಿಧಿಯ ಬೆಂಬಲದೊಂದಿಗೆ ಉಕ್ಕಿನ ಕಸ ಸಂಗ್ರಹ ತೊಟ್ಟಿಗಳನ್ನು ಇಡಲು ಸಿದ್ಧತೆ ನಡೆಸಿದೆ. ಈ ಕುರಿತು TNIE ಜೊತೆಗೆ ಮಾತನಾಡಿದ BSWML CEO ಕರೀ ಗೌಡ, ಸಂಸ್ಥೆಯೊಂದು ನಗರದಾದ್ಯಂತ 1,000 ಕಸದ ತೊಟ್ಟಿಗಳನ್ನು ದಾನ ಮಾಡಲು ಮುಂದಾಗಿದ್ದು, ಇವುಗಳನ್ನು ಇಡಲಾಗುವುದು ಎಂದರು.

ಈ ತೊಟ್ಟಿಗಳ ವಿಶೇಷತೆಯೆಂದರೆ ಅವುಗಳನ್ನು ಸಸ್ಯಗಳ ಮೇಲೂ ಇರಿಸುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಅವರು ಹೇಳಿದರು. ಹಸಿ ಮತ್ತು ಒಣ ತ್ಯಾಜ್ಯಗಳಿಗೆ ಪ್ರತ್ಯೇಕ ಸ್ಥಳವಕಾಶ ಇರಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ನೀರಿನ ಬಾಟಲಿಗಳು, ಚಿಪ್ಸ್, ಚಾಕೊಲೇಟ್ ಕವರ್‌ಗಳು, ಟಿಶ್ಯೂ ಪೇಪರ್ ಮತ್ತಿತರ ಕಸ ಹಾಕುವುದಕ್ಕೆ ಸಮಸ್ಯೆ ಇರುವುದು ಕಂಡುಬಂದಿದೆ. ಬಸ್ ನಿಲ್ದಾಣಗಳು, ವಾಣಿಜ್ಯ ಕೇಂದ್ರಗಳು ಮತ್ತು ರಸ್ತೆಗಳಲ್ಲಿ ನಮಗೆ ಹೆಚ್ಚಿನ ಕಸದ ತೊಟ್ಟಿಗಳು ಬೇಕಾಗುತ್ತವೆ. ಖಾಸಗಿ ಸಂಸ್ಥೆಗಳ ಬೆಂಬಲದೊಂದಿಗೆ ಕಸದ ತೊಟ್ಟಿಗಳನ್ನು ಅವು ಹೆಚ್ಚು ಅಗತ್ಯವಿರುವ ಸ್ಥಳಗಳಲ್ಲಿ ಇರಿಸಲು ಸಜ್ಜಾಗುತ್ತಿದ್ದೇವೆ ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ


**ರಸ್ತೆ ಬದಿಗಳಲ್ಲಿ, ಒದ್ದೆಯಾದ ತ್ಯಾಜ್ಯಕ್ಕಿಂತ ಹೆಚ್ಚು ಒಣ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಆದ್ದರಿಂದ ಹೆಚ್ಚು ಒಣ ತ್ಯಾಜ್ಯವನ್ನು ಇರಿಸಲು ಈ ತೊಟ್ಟಿಗಳನ್ನು ವಿನ್ಯಾಸಗೊಳಿಸಲಾಗಿದೆ. 1,000 ತೊಟ್ಟಿಗಳಿಂದ ಸಂಗ್ರಹಿಸಿದ ಬೇರ್ಪಡಿಸಿದ ತ್ಯಾಜ್ಯವನ್ನು BSWML ನಿಯಮಿತವಾಗಿ ತೆರವುಗೊಳಿಸುತ್ತದೆ. ಕಸದ ತೊಟ್ಟಿ ಮಾದರಿಯನ್ನು ಅಂತಿಮಗೊಳಿಸಿದ್ದು, ಪ್ರತಿ ಬಿನ್‌ನ ವೆಚ್ಚದ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.**

# ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ: ಮನೆ ಬಾಗಿಲಲ್ಲೇ ಉಪಶಮನ ಆರೈಕೆ

• **ಉದಯವಾಹಿನಿ, ಬೆಂಗಳೂರು**

ನಗರದ ಕ್ಯಾನ್ಸರ್ ಪೀಡಿತರಿಗೆ ಮನೆ ಬಾಗಿಲಲ್ಲೇ ಉಪಶಮನ ಆರೈಕೆ (ಪ್ಯಾಲಿಯೇಟಿವ್ ಕೇರ್) ಸೇವೆ ಒದಗಿಸಲು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮುಂದಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರಲು ಸಾಧ್ಯವಾಗ ದವರಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ. ಗೃಹ ಆಧಾರಿತ ಈ ಆರೈಕೆ ಸೌಲಭ್ಯಕ್ಕೆ ಸಂಸ್ಥೆಯು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಬಳಕೆ ಮಾಡಿಕೊಳ್ಳಲು ಮುಂದಾಗಿದೆ.

ತಜ್ಞ ವೈದ್ಯರನ್ನು ಒಳಗೊಂಡ ತಂಡವು ಕ್ಯಾನ್ಸರ್ ಪೀಡಿತರಿಗೆ ಮನೆಯಲ್ಲಿಯೇ ಅಗತ್ಯ ವೈದ್ಯಕೀಯ ಆರೈಕೆ ಒದಗಿಸಲಿದ್ದು, ರೋಗಿಯ ಜೀವನದ ಗುಣಮಟ್ಟ ಸುಧಾರಿಸಲು ಈ ವಿಶೇಷ ವೈದ್ಯಕೀಯ ಚಿಕಿತ್ಸೆ ನೆರವಾಗಲಿದೆ. ನೋವು ಮತ್ತು ರೋಗ ಲಕ್ಷಣಗಳನ್ನು ನಿರ್ವಹಿಸಲು, ದೈಹಿಕ ಹಾಗೂ ಮಾನಸಿಕ ಒತ್ತಡ ಕಡಿಮೆ ಮಾಡಲು ಈ ಆರೈಕೆ ಸಹಕಾರಿಯಾಗಲಿದೆ. ಈ ಆರೈಕೆಯು ಶೀಘ್ರದಲ್ಲಿಯೇ ಪ್ರಾರಂಭಿಸಲು ಸಂಸ್ಥೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ಸೇವೆಯಿಂದ ಹಾಸಿಗೆ ಹಿಡಿದ ಕ್ಯಾನ್ಸರ್ ಪೀಡಿತರನ್ನು ಸಂಸ್ಥೆಗೆ ಕರೆತರುವುದು ತಪ್ಪುವುದರ ಜತೆಗೆ, ಸಂಸ್ಥೆಯಲ್ಲಿ ರೋಗಿಗಳ ದಟ್ಟಣೆ ನಿವಾರಣೆಯೂ ಸಾಧ್ಯವಾಗಲಿದೆ. ವಿವಿಧ ಪ್ರಕಾರದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ, ರೋಗ ಪತ್ತೆ ಸಂಬಂಧ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ದಾಖಲಾತಿ ಹಾಗೂ ಚಿಕಿತ್ಸೆ ವಿಳಂಬವಾದಲ್ಲಿ ರೋಗ ಉಲ್ಬಣ ಗೊಳ್ಳುವ ಸಾಧ್ಯತೆ ಇರುತ್ತದೆ. ಮನೆ ಆಧಾರಿತ ಉಪಶಮನ ಆರೈಕೆಯಿಂದ ಆಸ್ಪತ್ರೆಯಲ್ಲಿ ದಾಖಲಾತಿಯೂ ಕಡಿಮೆಯಾಗಿ, ಒಳರೋಗಿಗಳಿಗೆ ಹಾಸಿಗೆಗಳು ಲಭ್ಯವಾಗಲಿವೆ.



**ಮೊಬೈಲ್ ವ್ಯಾನ್ ಬಳಕೆ:** ಉಪಶಮನ ಆರೈಕೆಗೆ ಸಂಸ್ಥೆಯು ಮೊಬೈಲ್ ವ್ಯಾನ್ ಬಳಸಿಕೊಳ್ಳಲು ಮುಂದಾಗಿದೆ. ಈ ವಾಹನದಲ್ಲಿ ಉಪಶಮನ ಆರೈಕೆಗೆ ಅಗತ್ಯವಿರುವ ತಜ್ಞ ವೈದ್ಯರೊಬ್ಬರು, ಶುಶ್ರೂಷಕರು ಹಾಗೂ ವೈದ್ಯಕೀಯ ಸಿಬ್ಬಂದಿ ಇರಲಿದ್ದಾರೆ. ಈ ತಂಡವು ರೋಗಿ ಹಾಗೂ ಕುಟುಂಬದ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿ, ಅಗತ್ಯ ಉಪಶಮನ ಚಿಕಿತ್ಸೆ ಒದಗಿಸಲಿದೆ. ರೋಗಿಯ ನಿರ್ವಹಣೆ ಬಗ್ಗೆ ಮಾರ್ಗದರ್ಶನವನ್ನೂ ನೀಡಲಿದೆ. ಸಿಎಸ್‌ಆರ್ ಅನುದಾನ, ವಿವಿಧ ಸರ್ಕಾರಿ ಯೋಜನೆಗಳಡಿ ಈ ಸೇವೆಯನ್ನು ಸಂಸ್ಥೆ ಉಚಿತವಾಗಿ ಒದಗಿಸಲು ನಿರ್ಧರಿಸಿದೆ.

**ಮನೆ ವಾತಾವರಣದಲ್ಲಿ ಚಿಕಿತ್ಸೆ ಪಡೆದಾಗ ರೋಗಿಯ ಆತಂಕ, ಭಯ, ನೋವು ಗಣನೀಯವಾಗಿ ಕಡಿಮೆ ಯಾಗುತ್ತದೆ. ಆರೈಕೆಯಲ್ಲಿ ಕುಟುಂಬದ ಸದಸ್ಯರೂ ಪಾಲ್ಗೊಳ್ಳುವುದರಿಂದ ರೋಗಿಗೆ ಚೇತರಿಕೆಯ ಭರವಸೆ ಭದ್ರತೆಯ ಅನುಭವ ದೊರೆಯುತ್ತದೆ. ಆಸ್ಪತ್ರೆಯ ಅಲೆದಾಟದಿಂದ ರೋಗಿಯು ಇನ್ನಷ್ಟು ಬಳಲುವುದು ತಪ್ಪಲಿದೆ' ಎಂದು ಪ್ಯಾಲಿಯೇಟಿವ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಯದುರಾಜ್ ಎಂ.ಕೆ. ತಿಳಿಸಿದರು.**

# ಸುರಕ್ಷತೆ ಇಲ್ಲದ ಹೊರ ರಾಜ್ಯಗಳ ಖಾಸಗಿ, ಸರ್ಕಾರಿ ಬಸ್‌ಗಿಲ್ಲ ಕರ್ನಾಟಕ ಪ್ರವೇಶ

• **ಉದಯವಾಹಿನಿ, ಬೆಂಗಳೂರು**

ಆಂಧ್ರಪ್ರದೇಶದ ಕರ್ನೂಲ್ ಬಳಿ ಬಸ್ ಬೆಂಕಿಗೆ ಆಹುತಿಯಾದ ಘಟನೆಯ ಬಳಿಕ ಬಸ್‌ಗಳಲ್ಲಿ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ತುರ್ತು ನಿರ್ಗಮನ ಬಾಗಿಲು ಇಲ್ಲದ ಹೊರ ರಾಜ್ಯಗಳ ಬಸ್‌ಗಳ ಮೇಲೆ ಕ್ರಮ ಕೈಗೊಳ್ಳಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.ಅಖಿಲ ಭಾರತ ಪರವಾನಗಿ ಹೊಂದಿರುವ ಬಸ್‌ಗಳು ದೇಶದ ವಿವಿಧೆಡೆಯಿಂದ ರಾಜ್ಯಕ್ಕೆ ಬರುತ್ತಿವೆ. ಅವುಗಳಲ್ಲಿ ಪ್ರಯಾಣಿಕರ ಸುರಕ್ಷತಾ ಕ್ರಮಗಳಿರುವುದಿಲ್ಲ. ಕರ್ನಾಟಕದಲ್ಲಿ ಇರುವ ಸುರಕ್ಷತಾ ನಿಯಮಗಳನ್ನು ಆ ಬಸ್‌ಗಳಲ್ಲಿಯೂ ಅಳವಡಿಸಬೇಕು.

ಏಕಾಏಕಿ ಕ್ರಮ ಕೈಗೊಳ್ಳುವ ಬದಲು ಆರಂಭಿಕ ಹಂತದಲ್ಲಿ ತಪಾಸಣೆ ನಡೆಸಿ ಅವರಿಗೆ ಸುರಕ್ಷತಾ ಕ್ರಮಗಳನ್ನು ಅಳವಡಿಸಲು ಸೂಚಿಸಬೇಕು. ನಿಗದಿತ ಸಮಯದ ಒಳಗೆ ಅಳವಡಿಸದೇ ಇದ್ದರೆ ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡಬೇಕು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ ನಿರ್ಧರಿಸಿದೆ. ತಪಾಸಣೆ ನಡೆಸಿ ಎಚ್ಚರಿಕೆ ನೀಡಿದ ಬಳಿಕವೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದ ಬಸ್‌ಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುವುದು, ಪರವಾನಗಿಯನ್ನು ಅಮಾನತು ಮಾಡುವುದು, ಸಂಬಂಧಪಟ್ಟ ಮೂಲ ನೋಂದಣಿ ಪ್ರಾಧಿಕಾರಕ್ಕೆ ಪತ್ರ ಬರೆದು ಕ್ರಮ ವಹಿಸಲು ತಿಳಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಇಲಾಖೆ ಅಧಿಕಾರಿಯೊಬ್ಬರು ಹೇಳಿದರು. ರಾಜ್ಯದಲ್ಲಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ತುರ್ತು ನಿರ್ಗಮನ ದ್ವಾರಗಳಿರುವುದನ್ನು ಖಚಿತಪಡಿಸಿಕೊಂಡ ನಂತರವೇ ವಾಹನ ನೋಂದಣಿ ಮತ್ತು ಅರ್ಹತಾ ಪತ್ರವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ಇದೇ ನಿಯಮ ಹೊರರಾಜ್ಯಗಳ ಬಸ್‌ಗಳಿಗೂ ಅನ್ವಯವಾಗಬೇಕು. ಯಾಕೆಂದರೆ ಆ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೂ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ನಾವು ರಾಜ್ಯದ ಮಾತ್ರವಲ್ಲ, ಹೊರರಾಜ್ಯಗಳ ಬಸ್‌ಗಳನ್ನೂ ತಪಾಸಣೆ ಮಾಡುತ್ತಿದ್ದೇವೆ. ಸುರಕ್ಷತಾ ಕ್ರಮಗಳಿಲ್ಲದ ಹೊರರಾಜ್ಯಗಳ ಬಸ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಿದ್ದೇವೆ. ಇನ್ನೂ ಒಂದೆರಡು ತಿಂಗಳು ಸಮಯ ನೀಡುತ್ತೇವೆ. ಆನಂತರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗುತ್ತೇವೆ' ಎಂದು ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಮಾಹಿತಿ ನೀಡಿದರು.

**ಬೇರೆ ರಾಜ್ಯದ ವಾಹನಗಳಿರಬಹುದು. ಆದರೆ, ರಾಜ್ಯಕ್ಕೆ ಬರುವಾಗ ಸುರಕ್ಷಿತವಾಗಿರಬೇಕು. ಇತ್ತೀಚೆಗೆ ಕರ್ನೂಲ್‌ನಲ್ಲಿ ಬೆಂಕಿಗಾಹುತಿಯಾದ ಬಸ್ ಕೂಡ ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿತ್ತು. ಅಖಿಲ ಭಾರತ ಪರವಾನಗಿ ಆಲ್ ಇಂಡಿಯಾ ಪರ್ಮಿಟ್ ಹೊಂದಿರುವ ಬಸ್‌ಗಳ ಪರ್ಮಿಟ್‌ಗಳನ್ನು ರದ್ದು ಮಾಡುವ ಅಧಿಕಾರ ಇಲ್ಲದೇ ಇದ್ದರೂ ತಾತ್ಕಾಲಿಕವಾಗಿ ಅಮಾನತು ಮಾಡುವ ಅಧಿಕಾರವಿದೆ. ಮೊದಲು ಎಚ್ಚರಿಕೆ ಕೊಡುತ್ತೇವೆ. ಬಸ್ ಮಾಲೀಕರು ಎಚ್ಚೆತ್ತುಕೊಳ್ಳಬೇಕು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ತಿಳಿಸಿದರು.**

# ಜಲಮಂಡಳಿಯ ಸಂಚಾರಿ ಕಾವೇರಿ ಯೋಜನೆ ಯಶಸ್ವಿ

## 24,743 ಟ್ಯಾಂಕರ್ ಬುಕ್ಕಿಂಗ್, 13,842 ಟ್ಯಾಂಕರ್ ಆನ್‌ಲೈನ್ ಮೂಲಕ ಬುಕ್ಕಿಂಗ್

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಜಲಮಂಡಳಿಯು ತನ್ನ ಸಂಚಾರಿ ಕಾವೇರಿ ಕಾರ್ಯಕ್ರಮದಡಿ 99.1 ದಶಲಕ್ಷ ಲೀಟರ್ ಮಾರಾಟ ಮಾಡುವ ಮೂಲಕ 6 ತಿಂಗಳಲ್ಲಿ 2.5 ಕೋಟಿ ರೂ. ಆದಾಯ ಗಳಿಸಿದೆ.

ನಗರದ ಹೊರವಲಯ ಸೇರಿದಂತೆ ಕಾವೇರಿ ಸಂಪರ್ಕ ಹೊಂದಿಲ್ಲದವರ ಖಾಸಗಿ ಟ್ಯಾಂಕರ್ ಮೇಲಿನ ಅವಲಂಬನೆ ತಪ್ಪಿಸಿ, ಕೈಗೆಟುಕುವ ದರದಲ್ಲಿ ಶುದ್ಧ ಕಾವೇರಿ ನೀರು ಒದಗಿಸಬೇಕು ಎಂಬ ಉದ್ದೇಶದಿಂದ ಬೆಂಗಳೂರು ಜಲಮಂಡಳಿ ಮೇ 9ರಂದು 'ಸಂಚಾರಿ ಕಾವೇರಿ' ಉಪಕ್ರಮ ಜಾರಿಗೊಳಿಸಿತ್ತು. ಸದ್ಯ ಕಳೆದ 6 ತಿಂಗಳಲ್ಲಿ (ಮೇ 9 – ನ.20)ರವರೆಗೆ ಈ ಯೋಜನೆಯಡಿ 99.1 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುವ ಮೂಲಕ ಸುಮಾರು 2.5 ಕೋಟಿ ರೂ. ಆದಾಯ ಸಂಗ್ರಹಿಸಿದೆ. 4000 ಲೀ.ಗೆ 660 ರೂ., 5000 ಲೀ.ಗೆ 700 ರೂ., 6000 ಲೀ.ಗೆ 740 ರೂ. ಮತ್ತು 12,000 ಲೀ.ಗೆ 1,290ರೂ. ಬೆಲೆ ನಿಗದಿಪಡಿಸಿ, 250 ಟ್ಯಾಂಕರ್‌ಗಳನ್ನು ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಮತ್ತು ಬ್ರ್ಯಾಂಡಿಂಗ್ ಮೂಲಕ ನೀರು ಸರಬರಾಜಿಗೆ ನಿಯೋಜಿಸಲಾಗಿತ್ತು. ಇದರಲ್ಲಿ ಬೇಡಿಕೆಗೆ ತಕ್ಕಂತೆ ಟ್ಯಾಂಕರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಸದ್ಯ 160 ಟ್ಯಾಂಕರ್ ಕಾರ್ಯಾಚರಣೆಯಲ್ಲಿವೆ. ನ.20ವರೆಗೆ 24,743 ಟ್ಯಾಂಕರ್ ಬುಕ್ಕಿಂಗ್ ಆಗಿದೆ.



ಉದಯವಾಹಿನಿ ಚಿತ್ರ



**ಪೂರ್ವದಲ್ಲಿಯೇ ಹೆಚ್ಚು ಬೇಡಿಕೆ:** ಮಂಡಳಿಯ ಅಂಕಿ–ಅಂಶಗಳ ಪ್ರಕಾರ, ನಗರದ ಪೂರ್ವ ವಲಯದಲ್ಲಿ ಒಟ್ಟು ಬುಕ್ಕಿಂಗ್‌ನ ಶೇ. 50ಕ್ಕಿಂತ ಹೆಚ್ಚು (13,023ಟ್ಯಾಂಕರ್) ಬುಕ್ಕಿಂಗ್ ಆಗಿವೆ. ಈ ವಲಯದಲ್ಲಿ '110 ಹಳ್ಳಿ ಸೇರ್ಪಡೆ' ಯೋಜನೆಯಡಿ ಪಾಲಿಕೆಗೆ ಸೇರ್ಪಡೆಯಾದ ಹೆಚ್ಚಿನ ಪ್ರದೇಶಗಳಿವೆ. ಕೆಲ ಪ್ರದೇಶಗಳಿಗೆ ಕಾವೇರಿ ನೀರಿನ ಸಂಪರ್ಕ ಸಿಕ್ಕಿಲ್ಲ. ಕೆಲವೆಡೆ ಕಾವೇರಿ ನೀರಿನ ಸಂಪರ್ಕ ಜಾಲಕ್ಕೆ ಬಂದರೂ ನಿವಾಸಿಗಳು ಸಂಪರ್ಕ ಪಡೆದಿಲ್ಲ. ಹೀಗಾಗಿ ಟ್ಯಾಂಕರ್ ನೀರಿಗೆ ಬೇಡಿಕೆ ಹೆಚ್ಚಿದೆ.

**''ಖಾಸಗಿ ಟ್ಯಾಂಕರ್ ನೀರು ಶುದ್ಧತೆಯ ಬಗ್ಗೆ ಯಾವುದೇ ಖಾತ್ರಿ ಇರಲಿಲ್ಲ. ಮಂಡಳಿಯ ನೀರು ಪ್ರಮಾಣೀಕೃತವಾಗಿದೆ. ಹಾಗಾಗಿ, ಉತ್ತಮ ಸ್ಪಂದನೆ ಇದೆ. ಈಗಲೂ ನಗರದ ಹೊರವಲಯದ ಸಾಕಷ್ಟು ಅಪಾರ್ಟ್‌ಮೆಂಟ್‌ಗಳು, ಕಂಪನಿ, ಕೈಗಾರಿಕೆ, ಹೋಟೆಲ್‌ಗಳು ಸಂಚಾರಿ ಕಾವೇರಿ ನೀರು ಪಡೆಯುತ್ತಿವೆ. ನಿತ್ಯ 150ರಿಂದ 180 ಲೋಡ್ ನೀರು ಸರಬರಾಜು ಆಗುತ್ತದೆ,'' ಎನ್ನುತ್ತಾರೆ ಮಂಡಳಿಯ ಅಧಿಕಾರಿಯೊಬ್ಬರು.**

ಇದಕ್ಕೆ ವ್ಯತಿರಿಕ್ತವಾಗಿ ಪಶ್ಚಿಮ ವಲಯದಲ್ಲಿ ಕೇವಲ 1,194 ಬುಕ್ಕಿಂಗ್ ದಾಖಲಾಗಿವೆ. ಅಲ್ಲದೆ, ಅಪಾರ್ಟ್‌ಮೆಂಟ್‌ಗಳು, ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಕಂಪನಿಗಳು, ಹೋಟೆಲ್‌ಗಳೂ ಸೇರಿದಂತೆ ವಾಣಿಜ್ಯ ಬಳಕೆದಾರರಿಂದ ಸುಮಾರು 10,901 ಬಲ್ಕ್ ಬುಕ್ಕಿಂಗ್‌ಗಳಾಗಿವೆ. 13,842 ಟ್ಯಾಂಕರ್ ಆನ್‌ಲೈನ್ ಮೂಲಕ ಬುಕ್ಕಿಂಗ್ ಆಗಿವೆ. ಸಂಚಾರಿ ಕಾವೇರಿಯಿಂದ ಖಾಸಗಿ ಟ್ಯಾಂಕರ್‌ಗಳ ಹಾವಳಿ ತಗ್ಗಿದ್ದರೂ ಬುಕ್ಕಿಂಗ್ ಆದ 24 ಗಂಟೆಗಳ ಕಾಲಾವಧಿಯಲ್ಲಿ ಮಂಡಳಿಯ ಟ್ಯಾಂಕರ್ ನೀರು ಪೂರೈಕೆ ಮಾಡುವುದರಿಂದ ನೀರಿನ ತುರ್ತು ಅಗತ್ಯತೆಗಳಿಗೆ ಪರ್ಯಾಯ ಮೂಲಗಳ ಮೊರೆ ಹೋಗಬೇಕಾಗಿದೆ.

**ಅಂತರ್ಜಲ ಮಟ್ಟದಲ್ಲಿಸುಧಾರಣೆ:** ಈ ವರ್ಷ ಮಳೆಯ ಜತೆಗೆ, ಸಂಚಾರಿ ಕಾವೇರಿ ಹಾಗೂ ಕೆರೆಗಳಿಗೆ ಸಂಸ್ಕರಿಸಿದ ತ್ಯಾಜ್ಯ ನೀರು ತುಂಬಿಸಿರುವ ಪರಿಣಾಮ ಅಂತರ್ಜಲ ಮಟ್ಟವು 0.5 ಮೀಟರ್‌ನಿಂದ 1.2 ಮೀಟರ್‌ಗೆ ಏರಿಕೆಯಾಗಿದೆ. ಕೈಗೆಟುಕುವ ದರದಲ್ಲಿ ಕಾವೇರಿ ನೀರು ಸಿಗುತ್ತಿರುವ ಹಿನ್ನೆಲೆಯಲ್ಲಿ ಹಲವರು ತಮ್ಮ ಮನೆಯ ಕೊಳವೆಬಾವಿ ನೀರಿನ ಬಳಕೆಯನ್ನೂ ಕಡಿಮೆ ಮಾಡಿದ್ದಾರೆ.

### ಸಂಚಾರಿ ಕಾವೇರಿ ಸರಬರಾಜು

- ಅಂಕಿ-ಅಂಶಗಳು (ಮೇ 9-ನವೆಂಬರ್ 20)
- ನೀರಿನ ಒಟ್ಟು ಆರ್ಡರ್‌ಗಳು: 24,743
- ಒಟ್ಟು ಆದಾಯ: 2.5 ಕೋಟಿ ರೂ.
- ಬಲ್ಕ್ ಬುಕ್ಕಿಂಗ್: 10,901
- ಆನ್‌ಲೈನ್ ಬುಕ್ಕಿಂಗ್: 13,842
- ಒಟ್ಟು ನೀರು ಸರಬರಾಜು: 99.1 ದಶಲಕ್ಷ ಲೀಟರ್

# ಯಾವ ಶಾಸಕ ಯಾರ ಪರವೊ...!

## ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಮೂವರು ಶಾಸಕರು ಪಕ್ಷೇತರರದ್ದೂ ಬೆಂಬಲ


• **ಉದಯವಾಹಿನಿ, ಚಿಕ್ಕಬಳ್ಳಾಪುರ**

ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ಪಾಳಯದಲ್ಲಿ ಅಧಿಕಾರ ಹಸ್ತಾಂತರ ವಿಚಾರದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ಶಾಸಕರು ಬಣಗಳಾಗಿ ಬಹಿರಂಗವಾಗಿ ಮತ್ತು ಗುಪ್ತವಾಗಿ ಸಭೆಗಳನ್ನೂ ನಡೆಸಿದ್ದಾರೆ. ಕೆಲವು ಶಾಸಕರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರವಾಗಿ ನವದೆಹಲಿ ಯಾತ್ರೆ ಸಹ ಮಾಡಿದ್ದಾರೆ. ಸಿದ್ದರಾಮಯ್ಯ ಅವರೇ ನಾಯಕ ಎನ್ನುವ ಮತ್ತೊಂದಿಷ್ಟು ಶಾಸಕರು ಊಟದ ಹೆಸರಿನಲ್ಲಿ ಕಲೆತಿದ್ದಾರೆ.

**ಅಧಿಕಾರ ಹಸ್ತಾಂತರ ವಿಚಾರದಲ್ಲಿ ತೀವ್ರ ಚರ್ಚೆ**

ಹೀಗೆ ರಾಜ್ಯ ರಾಜಕೀಯದಲ್ಲಿ ಲೆಕ್ಕಾಚಾರ ಬಿರುಸುಗೊಂಡಿದ್ದರೆ ಇತ್ತ ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿರುವ ಮೂವರು ಶಾಸಕರು ಮತ್ತು ಪಕ್ಷೇತರರಾಗಿ ಗೆಲುವು ಸಾಧಿಸಿ ಕಾಂಗ್ರೆಸ್‌ಗೆ ಬೆಂಬಲ ನೀಡಿರುವ ಶಾಸಕರು ಯಾರ ಪರ ನಿಲುವು ಹೊಂದಿದ್ದಾರೆ ಎನ್ನುವ ಚರ್ಚೆಗಳೂ ಗರಿಗೆದರಿವೆ. ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಮೂವರು ಶಾಸಕರು ಇದ್ದಾರೆ.

ಚಿಕ್ಕಬಳ್ಳಾಪುರದ ಕ್ಷೇತ್ರದಲ್ಲಿ ಪ್ರದೀಪ್ ಈಶ್ವರ್, ಬಾಗೇಪಲ್ಲಿಯಲ್ಲಿ ಎಸ್.ಎನ್.ಸುಬ್ಬಾರೆಡ್ಡಿ ಮತ್ತು ಜಿಲ್ಲಾ ಉಸ್ತುವಾರಿ ಹಾಗೂ ಉನ್ನತ ಶಿಕ್ಷಣ ಸಚಿವರೂ ಆದ ಡಾ.ಎಂ.ಸಿ.ಸುಧಾಕರ್ ಚಿಂತಾಮಣಿಯಿಂದ ಗೆಲುವು ಸಾಧಿಸಿದ್ದಾರೆ. ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಪಕ್ಷೇತರ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಅವರು ಕಾಂಗ್ರೆಸ್ ಬೆಂಬಲಿಸಿದ್ದಾರೆ.



ಸಚಿವ ಡಾ.ಎಂ.ಸಿ.ಸುಧಾಕರ್ ಸೇರಿದಂತೆ 'ಕೈ'ನ ಮೂವರು ಮತ್ತು ಪಕ್ಷೇತರ ಶಾಸಕರು ಸದ್ಯಕ್ಕೆ ಯಾರ ಪರವಾಗಿಯೂ ಬಹಿರಂಗವಾಗಿ ಗುರುತಿಸಿಕೊಂಡಿಲ್ಲ. ಯಾರ ಪರವಾಗಿಯೂ ಹೇಳಿಕೆ ನೀಡಿಲ್ಲ. ಇಲ್ಲಿಯವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆ ಎಲ್ಲಾ ಶಾಸಕರೂ ಆತ್ಮೀಯವಾಗಿದ್ದಾರೆ.

ಪುಟ್ಟಸ್ವಾಮಿಗೌಡ ಸೇರಿದಂತೆ ಮೂವರು ಶಾಸಕರು ಒಕ್ಕಲಿಗ ಸಮುದಾಯದವರು. ಪ್ರದೀಪ್ ಈಶ್ವರ್ ಬಲಿಜ ಸಮುದಾಯದವರು. ರಾಜಕಾರಣದಲ್ಲಿ ಈ ಜಾತಿಯ ನೆಲೆಯಲ್ಲಿಯೂ ಶಾಸಕರ ಬೆಂಬಲ ಕ್ರೋಡೀಕರಣ ನಡೆಯುತ್ತಿರುವುದು ಸುಳ್ಳಲ್ಲ. ಆದರೆ ಯಾವ ಶಾಸಕರೂ ಒಳಗುಟ್ಟು ಬಿಟ್ಟುಕೊಡುತ್ತಿಲ್ಲ. ಎಲ್ಲರೂ ಹೈಕಮಾಂಡ್ ನತ್ತ ಬೆರಳು ತೋರುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಮ್ಮ ನಾಯಕರು. ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧ' ಎಂದು ಜಿಲ್ಲಾ ಉಸ್ತುವಾರಿ ಸಚಿವರು ಪದೇ ಪದೇ ಹೇಳುತ್ತಿದ್ದಾರೆ.

ಉಳಿದ ಕಾಂಗ್ರೆಸ್ ಶಾಸಕರು ಸಹ ಹೈಕಮಾಂಡ್‌ನತ್ತ ಬೆರಳು ತೋರುವರು. ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ, ಈ ಶಾಸಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರವಂತೆ ಎಂಬ ಚರ್ಚೆಗಳು ಸಾರ್ವಜನಿಕರು ಹೆಚ್ಚು ಸೇರುವ ಕಡೆ, ಜನರ ನಡುವೆ ನಡೆಯುವ ರಾಜಕೀಯ ಚರ್ಚೆಗಳಲ್ಲಿ ಕೇಳಿ ಬರುತ್ತಿವೆ.

ಜೊತೆಗೆ ಜಾತಿ ಲೆಕ್ಕಾಚಾರ, ಶಾಸಕರ ಮೇಲಿರುವ ಪ್ರಕರಣಗಳು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಜೊತೆ ಇರುವ ಆಪ್ತತೆ, ಹಿಂದೆಲ್ಲಾ ಎಷ್ಟೆಲ್ಲಾ ಒಡನಾಟ ಹೊಂದಿದ್ದರು ಎಂಬುದರ ಕುರಿತಂತೆ ಜನಸಾಮಾನ್ಯರು ಚರ್ಚಿಸುತ್ತಿದ್ದ ಕುತೂಹಲ ಮೂಡಿಸಿದೆ.

### ಸಚಿವ ಸ್ಥಾನದ ಬಯಕೆ

**ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ನನಗೆ ಸಚಿವ ಸ್ಥಾನ ನೀಡುತ್ತೇವೆ ಎಂದು ಈ ಹಿಂದೆ ಭರವಸೆ ನೀಡಿದ್ದರು. ಆ ಪ್ರಕಾರ ಸಚಿವ ಸ್ಥಾನ ನೀಡುವರು' ಎಂದು ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ಮೂರು ಬಾರಿ ಗೆಲುವು ಸಾಧಿಸಿರುವ ಸುಬ್ಬಾರೆಡ್ಡಿ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯೂ ಆಗಿದ್ದಾರೆ. ಮತ್ತೊಂದು ಕಡೆ ಆಗಾಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತಿರುವ ಶಾಸಕ ಪ್ರದೀಪ್ ಈಶ್ವರ್ ಬಲಿಜ ಕೋಟಾದಡಿ ಸಚಿವ ಸ್ಥಾನ ಬಯಸಿದ್ದಾರೆ. ಸಚಿವ ಸ್ಥಾನದ ಆಸೆ ಈ ಹಿಂದೆ ನೀಡಿದ ಭರವಸೆಗಳ ಮೇಲೂ ಯಾರು ಯಾರ ಪರ ಎನ್ನುವ ಲೆಕ್ಕಾಚಾರಗಳು ನಿಂತಿವೆ.**

## ಕಾಂಗ್ರೆಸ್‌ನಲ್ಲಿ ನಾನಿನ್ನೂ ಒಂದು ವರ್ಷದ ಮಗು: ಶಾಸಕ ಯೋಗೇಶ್ವರ್

• **ಉದಯವಾಹಿನಿ, ಚನ್ನಪಟ್ಟಣ**

ನಾನು ಒಂದು ವರ್ಷದ ಹಿಂದೆ ಕಾಂಗ್ರೆಸ್ ಸೇರಿ ಶಾಸಕನಾಗಿರುವವನು. ಪಕ್ಷದಲ್ಲಿ ನಾನಿನ್ನೂ ಒಂದು ವರ್ಷದ ಮಗು. ನನಗೆ ಯಾವ ಬಣವೂ ಇಲ್ಲ. ನಾಯಕತ್ವ ಬದಲಾವಣೆ ಕುರಿತ ಚರ್ಚೆ ನನಗೆ ಗೊತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ನಮ್ಮ ನಾಯಕರು' ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಹೇಳಿದರು.ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಪಟ್ಟಣದಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ವಿಷಯ ಪಕ್ಷದ ಹೈಕಮಾಂಡ್‌ಗೆ ಬಿಟ್ಟದ್ದು. ಈ ವಿಚಾರದಲ್ಲಿ ನನ್ನನ್ನು ಎಳೆದು ತಂದು ಚರ್ಚೆಗೆ ಆಸ್ಪದ ಕೊಡಬೇಡಿ. ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಿ. ಈ ವಿಷಯದಲ್ಲಿ ಪಕ್ಷದ ನಾಯಕರು ಸಭೆ ಕರೆದು ಅಭಿಪ್ರಾಯ ಕೇಳಿದರೆ ಹೇಳುತ್ತೇನೆ' ಎಂದರು.



ಸಹಕಾರ ಇಲಾಖೆಯ ಕೆಲಸವೊಂದರ ವಿಷಯವಾಗಿ ಸಹಕಾರ ಕೇಳುವುದಕ್ಕಾಗಿ ಮುಖ್ಯಮಂತ್ರಿ ಅವರನ್ನು ನಾನು ಭೇಟಿಯಾಗಿದ್ದೆ. ಈಗಲೂ ಆ ಕುರಿತು ಕರೆ ಮಾಡಿ ಮಾತನಾಡಿದೆ.

ನೀರಾವರಿಗೆ ಸಂಬಂಧಿಸಿದ ಕೆಲಸಗಳ ಬಗ್ಗೆ ಉಪ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಮಾತನಾಡಿದ್ದೇನೆ.

ಅಭಿವೃದ್ಧಿ ದೃಷ್ಟಿಯಿಂದ ಇಬ್ಬರ ಬಳಿಯೂ ಮಾತನಾಡುತ್ತೇನೆಯೇ ಹೊರತು, ರಾಜಕೀಯ ವಿಚಾರವಾಗಿ ಏನನ್ನೂ ಚರ್ಚಿಸಿಲ್ಲ' ಎಂದು ಸ್ಪಷ್ಟಪಡಿಸಿದರು. 'ಸದ್ಯದ ಬೆಳವಣಿಗೆಗಳ ಕುರಿತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈಗಾಗಲೇ ಪ್ರತಿಕ್ರಿಯಿಸಿದ್ದಾರೆ. ಗೊಂದಲವನ್ನು ಬಗೆಹರಿಸುವುದಾಗಿ ಅವರೇ ಹೇಳಿದ್ದಾರೆ. ಹಾಗಾಗಿ, ನಮ್ಮ ಅಭಿಪ್ರಾಯವನ್ನು ಮಾಧ್ಯಮದ ಮುಂದೆ ಹೇಳಲು ಸಾಧ್ಯವಿಲ್ಲ' ಎಂದು ತಿಳಿಸಿದರು. ಕಾಂಗ್ರೆಸ್‌ನ ಕೆಲ ಶಾಸಕರ ದೆಹಲಿ ಭೇಟಿ ಕುರಿತು ಪ್ರಶ್ನೆಗೆ, 'ಆ ಬಗ್ಗೆಯೂ ನನಗೆ ಗೊತ್ತಿಲ್ಲ. ಮಾಗಡಿ ಶಾಸಕ ಬಾಲಕೃಷ್ಣ ಅವರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ನಮ್ಮ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ಬೇಕಿದೆ. ಹಾಗಾಗಿ, ಅದನ್ನು ಕೇಳಲು ದೆಹಲಿಗೆ ಹೋಗಿರಬಹುದು' ಎಂದರು.

# ಗ್ಯಾರಂಟಿ, ಗ್ಯಾರಂಟಿ ಅಂತಾರೆ, ಅದನ್ನೂ ಸರಿಯಾಗಿ ಕೊಟ್ಟಿಲ್ಲ: ಕಾಂಗ್ರೆಸ್ ಸರ್ಕಾರದ ವಿರುದ್ಧ ನಿಖಿಲ್ ವ್ಯಂಗ್ಯ

• **ಉದಯವಾಹಿನಿ, ಮದ್ದೂರು**

ರಾಜ್ಯದ ಇತಿಹಾಸದಲ್ಲಿ ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲಬೇಕು. ಕಳೆದ ಎರಡೂವರೆ ವರ್ಷದಲ್ಲಿ ಐದು ಲಕ್ಷ ಕೋಟಿ ಹೆಚ್ಚು ಸಾಲ ಮಾಡಿದೆ. ಇದು ಕಾಂಗ್ರೆಸ್ ಆಡಳಿತ ಎಂದು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ದೇವೇಗೌಡನ ದೊಡ್ಡಿ ಗ್ರಾಮದ ಜೆಡಿಎಸ್ ಪಕ್ಷದ ಕಾರ್ಯಕರ್ತ ಮಹದೇವ್ ಅವರು ಇತ್ತೀಚೆಗೆ ನಿಧನರಾದ ಹಿನ್ನೆಲೆಯಲ್ಲಿ ಅವರ ನಿವಾಸಕ್ಕೆ ಭೇಟಿ ನೀಡಿ, ಸಾಂತ್ವನ ಹೇಳಿದ ಬಳಿಕ ಮಾಧ್ಯಮಗಳ ಜತೆ ಅವರು ಮಾತನಾಡಿದರು.

ರಾಜ್ಯದ ಇತಿಹಾಸದಲ್ಲಿ ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲಬೇಕು. ಗ್ಯಾರಂಟಿ, ಗ್ಯಾರಂಟಿ ಅಂತಾರೆ, ಅದನ್ನು ಕೂಡ ಸರಿಯಾಗಿ ಕೊಟ್ಟಿಲ್ಲ. ಯುವನಿಧಿ


ಉದಯವಾಹಿನಿ ಚಿತ್ರ

ಕೊಟ್ಟಿದ್ದೀರಾ ಚುನಾವಣೆ ಸಂದರ್ಭದಲ್ಲಿ ಮಾತ್ರ ದುಡ್ಡು ಬಿಡುಗಡೆ ಮಾಡ್ತಾರೆ. ಈ ಸರ್ಕಾರದಲ್ಲಿ ಬಡವರು ಬದುಕಲು ಆಗುತ್ತಿಲ್ಲ ಎಂದು ಕಿಡಿಕಾರಿದರು.

**ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನಾಯ್ತು:** ನಮ್ಮ ಪಕ್ಷದ ಬಗ್ಗೆ ಕಲಾಪದಲ್ಲಿ ಕೀಳಾಗಿ ಮಾತನಾಡಿದ್ರು. ಜೆಡಿಎಸ್ 18 ಸೀಟ್ ಮುಂದೆ ಸಿಂಗಲ್ ಡಿಜಿಟ್‌ಗೆ ಬರುತ್ತೆ, ಅಸ್ತಿತ್ವ ಇಲ್ಲ ಅಂತ ಲೇವಡಿ ಮಾಡಿದ್ರು. ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನಾಯ್ತು ಅಲ್ಲಿನ ಜನರು ಕಾಂಗ್ರೆಸ್ ಪರಿಸ್ಥಿತಿ ತೋರಿಸಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

**ಎನ್‌ಡಿಎ ಜತೆ ಯಾವುದೇ ಕಾರಣಕ್ಕೂ ಮೈತ್ರಿ ಕಡಿದುಕೊಳ್ಳಲ್ಲ: ಎಚ್.ಡಿ. ದೇವೇಗೌಡ:** ಮದ್ದೂರು ತಾಲ್ಲೂಕಿನಲ್ಲಿ ಪೊಲೀಸ್ ಠಾಣೆ ಇವರಪ್ಪನ ಮನೆನಾ ಇಲ್ಲಿರುವ ಶಾಸಕರ ನಡವಳಿಕೆ ಸರಿಯಿಲ್ಲ. ಜಿಲ್ಲೆಯ ಶಾಸಕರು ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಲು ಹೊರಟಿದ್ದಾರೆ. ಮಂಡ್ಯ ಜಿಲ್ಲೆಗೆ ಅವರು ಏನು ಬಿರುದ್ದು ಕೊಟ್ಟರು ಛತ್ರಿಗಳು ಅಂದ್ರು, ಅದರ ಅರ್ಥ ತಿಳಿದಿಕೊಳ್ಳಬೇಕು. ಜೆಡಿಎಸ್ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ತಾರೆ ಎಂದು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

### ನಮ್ಮ ಪಕ್ಷ ಮೇಲೆ ಚಲುವರಾಯಸ್ವಾಮಿಗೆ ಯಾಕೆ ಚಿಂತೆ

**ಬಂಡವಾಳ ಇದ್ದಿದ್ದಕ್ಕೆ ಕುಮಾರಸ್ವಾಮಿಗೆ ರೆಡ್ ಕಾರ್ಪೆಟ್ ಹಾಕಿ ಎನ್‌ಡಿಎಗೆ ಸೇರಿಸಿಕೊಂಡಿದ್ದಾರೆ. ಕುಮಾರಸ್ವಾಮಿ ಅವರಪ್ಪನಾಣೆ ಗೆಲ್ಲಲ್ಲ ಅಂತ ಕಾಂಗ್ರೆಸ್‌ನವರು ಭಾಷಣ ಬಿಗಿದ್ರು. ಆದರೆ ಮಂಡ್ಯ ಜನರ ಆಶೀರ್ವಾದದಿಂದ ದಾಖಲೆ ಗೆಲುವು ಸಿಕ್ತು. ಬಂಡವಾಳ ಇರೋದಕ್ಕೆ ಕುಮಾರಣ್ಣನ ಗೆಲ್ಲಿಸಿರೋದು, ಚುನಾವಣೆಯಲ್ಲಿ ಗೆದ್ದಾಗ ತಲೆ ಎತ್ತಿ ಮೆರೆಯಲ್ಲ, ಸೋತಾಗ ಕೈ ಕಟ್ಟಿ ಮನೆಯಲ್ಲಿ ಕೂರಲಿಲ್ಲ ಎಂದು ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ಅವರು ಟಾಂಗ್ ನೀಡಿದರು.**

## ನಗರಸಭೆ ಆಡಳಿತಕ್ಕೆ ಬಿಸಿ ಮುಟ್ಟಿಸಿದ ಆಡಳಿತಾಧಿಕಾರಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಾಮರಾಜನಗರ**

ಸಾರ್ವಜನಿಕರಿಂದ ನಿರಂತರ ಟೀಕೆಗೆ ಗುರಿಯಾಗಿದ್ದ ಚಾಮರಾಜನಗರ ನಗರಸಭೆ ಆಡಳಿತ ವ್ಯವಸ್ಥೆಗೆ ನೂತನ ಆಡಳಿತಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಬಿಸಿ ಮುಟ್ಟಿಸಿದ್ದಾರೆ.ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಚೆಗೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದು, ಅದರಂತೆ ಚಾಮರಾಜನಗರ ಹಾಗೂ ಕೊಳ್ಳೇಗಾಲ ನಗರಸಭೆ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುವ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆಡಳಿತ ವ್ಯವಸ್ಥೆಯ ಚಿತ್ರಣ ಬದಲಿಸಲು ಮುಂದಾಗಿದ್ದಾರೆ.

**ತೆರಿಗೆ ಸಂಗ್ರಹಕ್ಕೆ ಒತ್ತು:** ಚಾಮರಾಜನಗರ ನಗರಸಭೆ ತೆರಿಗೆ ಸಂಗ್ರಹದಲ್ಲಿ ತೀರಾ ಹಿಂದುಳಿದಿದ್ದು, ಪ್ರಸ್ತುತ ವಾರ್ಷಿಕ ಸಂಗ್ರಹವಾಗುವ ತೆರಿಗೆಯು ಅಲ್ಲಿನ ಸಿಬ್ಬಂದಿಗೆ ವೇತನ ಹಾಗೂ ಖರ್ಚುಗಳನ್ನು ನಿಭಾಯಿಸಲು ಸಾಲುತ್ತಿಲ್ಲ. ಪರಿಣಾಮ ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕೊರತೆ ಎದುರಾಗಿರುವ ಹಿನ್ನೆಲೆಯಲ್ಲಿ ಬಾಕಿ ತೆರಿಗೆ ಸಂಗ್ರಹಕ್ಕೆ ಒತ್ತು ನೀಡಲಾಗಿದೆ. ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ ಮಳಿಗೆಗಳು ಹಾಗೂ ಉದ್ದಿಮೆದಾರರಿಗೆ ತಕ್ಷಣ ತೆರಿಗೆ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಅತಿ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳನ್ನು ಪಟ್ಟಿಯನ್ನು ಸಿದ್ದಪಡಿಸಿ ತತ್ ಕ್ಷಣದಲ್ಲಿ ಶೇ 50 ತೆರಿಗೆ ಪಾವತಿಸಬೇಕು ಎಂದು ನೋಟಿಸ್ ನೀಡಲಾಗುತ್ತಿದೆ.

ಬಾಕಿ ತೆರಿಗೆ ಪಾವತಿಸಲು ವಿಫಲವಾದರೆ ಉದ್ದಿಮೆ ಪರವಾನಗಿ ರದ್ದುಗೊಳಿಸಿ ಎಂದು ಜಿಲ್ಲಾಧಿಕಾರಿ ಎಚ್ಚರಿಕೆ ಸಂದೇಶವನ್ನು ರವಾನಿಸಿದ್ದಾರೆ. ಅದರಂತೆ, ತೆರಿಗೆ ಸುಸ್ತಿದಾರರಿಗೆ ನೋಟಿಸ್ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ಹಂತದಲ್ಲಿ ಸರ್ಕಾರಿ ಕಚೇರಿಗಳಿಂದಲೂ ತೆರಿಗೆ ಬಾಕಿ ವಸೂಲಿ ಮಾಡಲಾಗುವುದು ಎಂದು ನಗರಸಭೆಯ ಪ್ರಭಾರ ಪೌರಾಯುಕ್ತ ಪ್ರಕಾಶ್ ಮಾಹಿತಿ ನೀಡಿದರು.

**ಕಳ್ಳಾಟಕ್ಕೆ ಬ್ರೇಕ್:** ನಗರಸಭೆಯಲ್ಲಿ ಧೀರ್ಘಕಾಲೀನ ರಜೆಯಲ್ಲಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಕಚೇರಿಗೆ ಕರೆಸಿಕೊಂಡು ಶಿಸ್ತು ಕ್ರಮದ ಎಚ್ಚರಿಕೆ ನೀಡಲಾಗಿದೆ. ಎಚ್ಚೆತ್ತುಕೊಳ್ಳದ ಅಧಿಕಾರಿಗಳಿಗೆ 'ವರ್ಗಾವಣೆ ಹಾಗೂ ಅಮಾನತು ಶಿಕ್ಷೆ ಕಾದಿದೆ. ಪ್ರತಿಯೊಬ್ಬರೂ ಕಚೇರಿಗೆ ಬಂದು ಬಯೋಮೆಟ್ರಿಕ್ ಹಾಜರಾತಿ ನೀಡುವಂತೆ ಸೂಚನೆ ನೀಡಲಾಗಿದೆ ಎಂದು ನಗರಸಭೆಯ ಹಿರಿಯ ಅಧಿಕಾರಿಗಳು ತಿಳಿಸಿದರು.

## ಪ್ರತಿಷ್ಠಾಪಿಸಿದ್ದ ಸತ್ಯಗಣಪತಿ ವಿಸರ್ಜನೆಗೆ ಸಾವಿರಾರು ಮಂದಿ ಭಾಗಿ

• **ಉದಯವಾಹಿನಿ, ತಿಪಟೂರು**

ನಗರದ ಸತ್ಯಗಣಪತಿ ಆ ಸ್ಥಾನ ಮಂಟಪದಲ್ಲಿ ಗಣೇಶ ಚತುರ್ಥಿಯಂದು ಪ್ರತಿಷ್ಠಾಪಿಸಿದ್ದ ಸತ್ಯಗಣಪತಿ ವಿಸರ್ಜನಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ರಾತ್ರಿ ಆಸ್ಥಾನ ಮಂಟಪದಿಂದ ಹೊರಟ ಮೆರವಣಿಗೆ ದೊಡ್ಡಪೇಟೆ, ಕನ್ನಿಕಾ ಪರಮೇಶ್ವರಿ ದೇವಾಸ್ಥಾನ ರಸ್ತೆ, ಕೋಟೆ, ನೀಲಕಂಠಸ್ವಾಮಿ ಸರ್ಕಲ್ ಮೂಲಕ ಸಾಗಿತು. ಮುಂಜಾನೆ ಗಾಂಧಿನಗರ, ಕಾರ್ಪೊರೇಷನ್ ರಸ್ತೆ, ರಾಮಮಂದಿರ ರಸ್ತೆ, ರೈಲ್ವೆ ನಿಲ್ದಾಣದ ರಸ್ತೆಯಲ್ಲಿ ಸಾಗಿ ಸಿಂಗ್ರಿ ನಂಜಪ್ಪ ವೃತ್ತದಿಂದ ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಅಮಾನಿಕೆರೆಯ ಬಳಿವರೆಗೆ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಸತ್ಯಗಣಪತಿಗೆ ಕೊಬ್ಬರಿ, ಕಿತ್ತಳೆ, ಸೇಬು, ಕಜ್ಜಾಯ, ಸೇವಂತಿಗೆ, ಚಕ್ಕುಲಿ, ಕರಿಕಡುಬು, ಕರಿದ ಪದಾರ್ಥಗಳಿಂದ ಮಾಡಿದ ಭಾರಿ ಗಾತ್ರದ


ಉದಯವಾಹಿನಿ ಚಿತ್ರ

ಹಾರಗಳು ಸೇರಿದಂತೆ ವಿವಿಧ ಬಗೆಯ ದೊಡ್ಡ ಹಾರಗಳನ್ನು ಭಕ್ತರು ಸಮರ್ಪಸಿದರು. ಪ್ರತಿ ಅಂಗಡಿಗಳ ಮುಂದೆ ಮಾವಿನ ತೋರಣ, ಬಾಳೆಗಿಡಗಳ ಅಲಂಕಾರದೊಂದಿಗೆ ಅನ್ನದಾನ. ಫಲಹಾರ, ಮಜ್ಜಿಗೆ, ಪಾಯಸ ನೀಡಲಾಯಿತು. ನೂರಾರು ತೆಂಗಿನ ಕಾಯಿ ಈಡುಗಾಯಿ, ನಗರದ ರಸ್ತೆಯ ಮೇಲೆ ವಿವಿಧ ಬಣ್ಣದ ರಂಗೋಲಿ ಹಾಕಲಾಗಿತ್ತು.. ಗಣೇಶೋತ್ಸವದಲ್ಲಿ ಕೋಲಾಟ, ವೀರಗಾಸೆ, ನಂದಿಧ್ವಜ, ಚಂಡೆ, ಹುಲಿ ಕುಣಿತ, ಭದ್ರ ಕಾಳಿ ಕುಣಿತ, ಕೀಲು ಕುದುರೆ, ಕುದುರೆ ಸವಾರಿ, ಡೊಳ್ಳು ಕುಣಿತ, ನಾದಸ್ವರ ಭಕ್ತರ ಮನ ತಣಿಸಿತು. ಡಿ.ಜೆ.. ಸಿಡಿಮದ್ದಿನ ನಡುವೆ ಮೆರವಣಿಗೆ ನಡೆಯಿತು. ನಗರದೆಲ್ಲೆಡೆ ದೀಪಾಲಂಕಾರ, ಕೇಸರಿ ಧ್ವಜ, ಗೋಡೆ ಅಲಂಕಾರವಿತ್ತು.

ಈ ಬಾರಿ 55 ಅಡಿ ಎತ್ತರ, 22 ಅಡಿ ಅಗಲದ ಬೃಹತ್ ಹನುಮ ದ್ವಾರ ಎಲ್ಲರ ಗಮನ ಸೆಳೆಯಿತು.

ಡಿ.ಜೆ. ಸದ್ದಿಗೆ ಯುವಕ, ಯುವತಿಯರು ಸೇರಿದಂತೆ ಎಲ್ಲರೂ ಕುಣಿದು ಕುಪ್ಪಳಿಸಿದರು. ಆಟದ ಸಾಮಗ್ರಿ, ಸಿಹಿತಿಂಡಿ ಅಂಗಡಿಗಳು ಎಲ್ಲರನ್ನು ಆಕರ್ಷಿಸಿತು. 1,500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

## ಅವ್ಯವಸ್ಥೆಗಳ ಆಗರ ರಾಷ್ಟ್ರೀಯ ಹೆದ್ದಾರಿ 75

• **ಉದಯವಾಹಿನಿ, ಮುಳಬಾಗಿಲು**

ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75 ದೇಶದಲ್ಲೇ ಅತಿದೊಡ್ಡ ಹೆದ್ದಾರಿಗಳಲ್ಲಿ ಒಂದಾಗಿದ್ದು, ಅವ್ಯವಸ್ಥೆಗಳ ಆಗರವಾಗಿ ನಲಗುತ್ತಿದೆ.

ಬೆಂಗಳೂರಿನ ಕೆ.ಆರ್.ಪುರಂನಿಂದ ಮುಳಬಾಗಿಲು ತಾಲ್ಲೂಕಿನ ನಂಗಲಿ ಗಡಿಯ ಮೂಲಕ ನೆರೆಯ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 75ರ ಉದ್ದಕ್ಕೂ ಅನೇಕ ಸಮಸ್ಯೆಗಳನ್ನು ಹೊದ್ದು ಮಲಗಿದೆ. ಹೆಸರಿಗೆ ಹೆದ್ದಾರಿಯಾದರೂ ಮೂಲ ಸೌಲಭ್ಯಗಳಿಲ್ಲದೆ ವಾಹನ ಸವಾರರು ನರಳುವಂತಾಗಿದೆ. ರಾಜ್ಯದ ಮೆಟ್ರೋಪಾಲಿಟನ್ ಸಿಟಿ ಬೆಂಗಳೂರು ಹಾಗೂ ತಮಿಳುನಾಡಿನ ಪ್ರಸಿದ್ಧ ಮಾರುಕಟ್ಟೆಗಳ ಸಮೀಪವಿರುವ ಕಾರಣ ರಾಷ್ಟ್ರೀಯ ಹೆದ್ದಾರಿ 75ಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತಲೇ ಇರುತ್ತವೆ. ಆದರೆ, ಹೆದ್ದಾರಿಗಳಲ್ಲಿ ಮೂಲ ಸೌಲಭ್ಯಗಳಿಲ್ಲದೆ ಸವಾರರು ವಂಚಿತರಾಗಿದ್ದಾರೆ.

ತಾಲ್ಲೂಕಿನ ನಂಗಲಿ, ಎನ್.ವಡ್ಡಹಳ್ಳಿ, ತಾಯಲೂರು ವೃತ್ತ, ಕೆಜಿಎಫ್ ವೃತ್ತ, ವಿರುಪಾಕ್ಷಿ, ಮದರಸ ಸಮೀಪದ ವೃತ್ತ, ಕೆ.ಬೈಯಪ್ಪನಹಳ್ಳಿ, ನಂಗಲಿ ಗಡಿ ಮತ್ತಿತರ ಕಡೆ ಮೂರು ವರ್ಷಗಳಿಂದ ಹೆದ್ದಾರಿಯ ನಾನಾ ಕಾಮಗಾರಿಗಳು ನಡೆಯುತ್ತಿವೆ. ಹಾಗಾಗಿ ಹೆದ್ದಾರಿ ಪ್ರಾಧಿಕಾರ ಅಥವಾ ಗುತ್ತಿಗೆದಾರರು ಸೂಕ್ತ ರಸ್ತೆ ನಿರ್ಮಿಸಿ ಕಾಮಗಾರಿ ನಡೆಸಬೇಕಿತ್ತು. ಆದರೆ, ಸರ್ವಿಸ್ ರಸ್ತೆಯಲ್ಲಿ ವಾಹನ ಓಡಾಟಕ್ಕೆ ಅವಕಾಶ ಕಲ್ಪಿಸಿದ್ದು. ಕೆಲವೆಡೆ


ಉದಯವಾಹಿನಿ ಚಿತ್ರ

ಡಾಂಬರು ರಸ್ತೆ ಮಣ್ಣು ಹಾಗೂ ಜಲ್ಲಿ ಕಲ್ಲಿನ ರಸ್ತೆಯಾಗಿದ್ದರೆ, ಇನ್ನೂ ಕೆಲವೆಡೆ ಭಾರೀ ಗಾತ್ರದ ಗುಂಡಿಗಳಿವೆ. ಸ್ವಲ್ಪ ಯಮಾರಿದರೂ ಅಪಘಾತ ಗ್ಯಾರಂಟಿ. ಹೆದ್ದಾರಿಯ ಎನ್. ವಡ್ಡಹಳ್ಳಿ ಬಳಿ ಬಿದ್ದಿರುವ ಗುಂಡಿಗಳು

**ರಾತ್ರೋ ರಾತ್ರಿ ಹೆದ್ದಾರಿ ಇಕ್ಕೆಲದ ಮರಗಳು ಕಟಾವು:** ಹೆದ್ದಾರಿಯ ಉದ್ದಕ್ಕೂ ರಸ್ತೆ ನಿರ್ಮಾಣದ ಸಮಯದಲ್ಲಿ ನಾಟಿ ಮಾಡಿದ್ದ ಸಸಿಗಳು ಮರಗಳಾಗಿ ಬೆಳೆದಿವೆ. ಆದರೆ, ಹೋಟೆಲ್, ಬಾರ್, ರೆಸ್ಟೋರೆಂಟ್, ಡಾಬಾ, ಪೆಟ್ರೋಲ್ ಬಂಕ್, ಮಾರುಕಟ್ಟೆ ಮತ್ತಿತರ ನಿರ್ಮಾಣದ ನೆಪದಲ್ಲಿ ರಾತ್ರೋ ರಾತ್ರಿ ಮರಗಳನ್ನು ಕಟಾವು ಮಾಡುತ್ತಿದ್ದಾರೆ. ಹೆದ್ದಾರಿಯ ತಾತಿಕಲ್ಲು ಬಳಿ ತಾಲ್ಲೂಕಿನ ಆದರ್ಶ ಶಾಲೆಯಿದೆ. ಆದರೆ, ಅಲ್ಲಿ ಪೈ ವಾಕ್, ಬ್ಯಾರಿಕೇಡ್, ಸಿಗ್ನಲ್ ದೀಪ ಹಾಗೂ ಯಾವುದೇ ಸುರಕ್ಷತಾ ಕ್ರಮಗಳಿಲ್ಲದೆ ನೂರಾರು ಮಂದಿ ಆ ರಸ್ತೆಯಲ್ಲಿ ಸಂಚರಿಸಬೇಕಿದೆ.

### ಹೆದ್ದಾರಿ ಪಕ್ಕದಲ್ಲೇ ಸರಕು ಸಾಗಾಣೆ ವಾಹನಗಳ ನಿಲುಗಡೆ

**ತಮಿಳುನಾಡು, ಆಂಧ್ರಪ್ರದೇಶ, ವಿಶಾಕಪಟ್ಟಣ ಮತ್ತಿತರ ಕಡೆ ತರಕಾರಿ, ಹೂ ಸಾಗಿಸುವ ವಾಹನಗಳು ರಸ್ತೆಯಲ್ಲಿ ಗಂಟೆಗಟ್ಟಲೆ ನಿಂತಿದ್ದು, ವಾಹನ ಓಡಾಟಕ್ಕೆ ತೊಂದರೆಯಾಗುತ್ತಿದೆ. ಈ ಬಗ್ಗೆ ಯಾವ ಅಧಿಕಾರಿಯೂ ಕ್ರಮ ಕೈಗೊಂಡಿಲ್ಲ ಎಂಬುದು ಸಾರ್ವಜನಿಕರ ಅಭಿಪ್ರಾಯ.**

### ಹೆದ್ದಾರಿಯ ಇಕ್ಕೆಲಗಳಲ್ಲಿ ಕಸದ ರಾಶಿ


**ಹೆದ್ದಾರಿ ಉದ್ದಕ್ಕೂ ನಂಗಲಿ, ಎನ್. ವಡ್ಡಹಳ್ಳಿ, ತಾಯಲೂರು, ಮುಳಬಾಗಿಲು ನಗರದ ಹೊರವಲಯ, ಕಪ್ಪಲಮಡಗು ಮುಂತಾದ ಕಡೆ ವ್ಯಾಪಾರಿಗಳು ಕಸ, ಕೋಳಿ ರೆಕ್ಕೆ ಪುಕ್ಕ. ಪ್ಲಾಸ್ಟಿಕ್ ತ್ಯಾಜ್ಯ ಸುರಿಯುತ್ತಿದ್ದು ಕೊಳೆತು ದುರ್ನಾತ ಬೀರುತ್ತಿದೆ. ಜೊತೆಗೆ ತ್ಯಾಜ್ಯವೆಲ್ಲಾ ರಸ್ತೆಗೆ ಬರುವ ಮೂಲಕ ವಾಹನ ಸವಾರರಿಗೆ ಕಿರಿಕಿರಿಯಾಗುತ್ತಿದೆ.**

# ಕಮಾಂಡ್, ಕಂಟ್ರೋಲ್ ಸೆಂಟರ್ ತೆರೆಯಲು ಚಿಂತನೆ: ಸಿ ಎಫ್ ಪ್ರಭಾಕರನ್

## ಆಧುನಿಕ ತಂತ್ರಜ್ಞಾನದಿಂದ ವನ್ಯಜೀವಿ ಸಂರಕ್ಷಣೆ ನಿರ್ವಹಣೆ ಸೇರಿದಂತೆ ಕಾರ್ಯಾಚರಣೆ

• **ಉದಯವಾಹಿನಿ, ಗುಂಡ್ಲುಪೇಟೆ**

ಮಾನವ ವನ್ಯಜೀವಿ ಸಂಘರ್ಷಕ್ಕೆ ಇತಿಶ್ರೀ ಹಾಡಲು ಶೀಘ್ರದಲ್ಲೇ ಕಮಾಂಡ್ ಕಂಟ್ರೋಲ್ ಸೆಂಟರ್ ತೆರೆಯಲು ಚಿಂತನೆ ನಡೆಸಲಾಗಿದೆ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್ ತಿಳಿಸಿದ್ದಾರೆ. ಆಧುನಿಕ ತಂತ್ರಜ್ಞಾನದಿಂದ ವನ್ಯಜೀವಿ ಸಂರಕ್ಷಣೆ ನಿರ್ವಹಣೆ ಸೇರಿದಂತೆ ಕಾರ್ಯಾಚರಣೆಗೆ ಇದರಿಂದ ಸಹಾಯಕವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ವ್ಯಾಪ್ತಿಯಲ್ಲಿ ಉಲ್ಬಣಗೊಂಡಿರುವ ವನ್ಯಜೀವಿ ಮಾನವ ಸಂಘರ್ಷವನ್ನ ನಿಯಂತ್ರಿಸಲು ಅಡ್ವಾನ್ಸ್ ಟೆಕ್ನಾಲಜಿಯನ್ನ ಬಳಕೆ ಮಾಡಲು ಚಿಂತನೆ ನಡೆಸಲಾಗಿದೆ ಮತ್ತು ಶೀಘ್ರದಲ್ಲೇ ಕಣ್ಗಾವಲು ಮತ್ತು ಮೇಲ್ವಿಚಾರಣೆ ಕೇಂದ್ರ ತೆರೆಯಲಾಗುವುದು ಎಂಬ ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ



**ಕಮಾಂಡ್ ಕಂಟ್ರೋಲ್ ಸೆಂಟರ್ ವಿಶೇಷತೆ :** ಈ ಕೇಂದ್ರವು ಎಚ್ಚರಿಕೆ ಮತ್ತು ಕಣ್ಗಾವಲಾಗಿ ಸಮನ್ವಯತೆಯಿಂದ ಕಾರ್ಯನಿರ್ವಹಿಸುತ್ತದೆ, ನುರಿತ ತಾಂತ್ರಿಕ ಸಿಬ್ಬಂದಿ ಹಾಗೂ ಅಧಿಕಾರಿಗಳು ಇಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಅರಣ್ಯದೊಳಗೆ ಥರ್ಮಲ್ ಕ್ಯಾಮಾರಗಳನ್ನ ಅಳವಡಿಸಿ ನಿಗಾವಹಿಸಲಾಗುತ್ತದೆ. ಅದರಂತೆ ಸೆಂಟರ್ ನಲ್ಲಿ ಕ್ಯಾಮೆರಾ ಸಂವೇದಕಗಳನ್ನ ಅಳವಡಿಸಲಾಗಿರುತ್ತದೆ, ಇತರ ಪ್ರದೇಶಗಳಿಂದ ಬಂದಂತಹ ಮಾಹಿತಿಯನ್ನ ಪರಿಪೂರ್ಣವಾಗಿ ಸಂಗ್ರಹಿಸಿ ಪ್ರಸ್ತುತ ಪ್ರದೇಶದ ಸ್ಥಿತಿಗತಿಯನ್ನ ವಿಶ್ಲೇಷಿಸುತ್ತದೆ.

ಇದರಿಂದ ಅರಣ್ಯ ಪ್ರದೇಶದಲ್ಲಿನ ಚಟುವಟಿಕೆಗಳ ಮೇಲೆ ನಿಗಾವಹಿಸಲು ಹಾಗೂ ಅಕ್ರಮ ಚಟುವಟಿಕೆಗಳು, ವಿಪತ್ತುಗಳಿಂದ ಸಂರಕ್ಷಿಸಲು ಕ್ಷಣಾರ್ಧದಲ್ಲಿ ಮಾಹಿತಿ ನೀಡುವಂತ ಕ್ರಿಯೆಯನ್ನ ಹೊಂದಿರುವುದರಿಂದ ಸಹಕಾರಿಯಾಗಿದೆ ಎಂದರು.

**ಕ್ಷಿಪ್ರ ಕಾರ್ಯಪಡೆಗೆ ಸಂಪರ್ಕ ಸೇತು:** ವಿಪತ್ತುಗಳ ನಿರ್ವಹಣೆ, ವನ್ಯಜೀವಿಗಳ ಗಡಿದಾಟುವ ಕ್ರಿಯೆಯನ್ನ ತಪ್ಪಿಸಲು ಹಾಗೂ ಕಳ್ಳಭೇಟೆಗಳಂತ ಪ್ರಕರಣವನ್ನ ಹತ್ತಿಕ್ಕಲು ಸಹಾಯಮಾಡುತ್ತದೆ, ವಿವಿಧ ಭಾಗಗಳಿಂದ ಪರಿಪೂರ್ಣ ಚಲನವಲನದ ದೃಶ್ಯಾವಳಿಗಳನ್ನ ಒದಗಿಸುತ್ತದೆ, ಸ್ಥಳದ ಸ್ಪಷ್ಟತೆ ಮೇರೆಗೆ ಕಾರ್ಯಾಚರಣೆ ನಡೆಸಬಹುದಾಗಿದೆ.

### ರಕ್ಷಣಾ ನಿರ್ವಹಣೆ

**ಅರಣ್ಯದ ಗಡಿಭಾಗದಲ್ಲಿ ಕಾರ್ಯಾಚರಣೆ ನಿರ್ವಹಿಸಲು, ರೈತಾಪಿ ವರ್ಗದ ದೈನಂದಿನ ಚಟುವಟಿಕೆಗಳನ್ನ ಸುಗಮವಾಗಿರಿಸಲು ಸಹಾಯ ಮಾಡುತ್ತದೆ, ಥರ್ಮಲ್ ಕ್ಯಾಮರಾಗಳಿಂದ ವಿವಿಧ ಸಂವೇದಕಗಳ ಮಾಹಿತಿಯನ್ನ ತತಕ್ಷಣ ರವಾನಿಸುವುದರಿಂದ ಪರಿಣಾಮಕಾರಿಯಾಗಿ ಕಾರ್ಯಾಚರಣೆ ನಡೆಸಬಹುದು ಆದುದರಿಂದ ಶೀಘ್ರದಲ್ಲೇ ಕಮಾಂಡ್ ಕಂಟ್ರೋಲ್ ಸೆಂಟರ್ ತೆರೆದು ಮಾನವ ವನ್ಯಜೀವಿ ಸಂಘರ್ಷಕ್ಕೆ ಕಡಿವಾಣ ಹಾಕಲಾಗುವುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.**

### ಆಧುನಿಕ ತಂತ್ರಜ್ಞಾನದ ವಿಶೇಷತೆ

**ವಸ್ತುಸ್ಥಿತಿ ಮತ್ತು ಸೂಕ್ಷ್ಮ ಕಣ್ಗಾವಲು ಕೇಂದ್ರವಾಗಿಯೂ ಸಮನ್ವಯವಾಗಿ ಕಾರ್ಯನಿರ್ವಹಿಸುತ್ತದೆ, ಇದರಿಂದ ಅರಣ್ಯ ಪ್ರದೇಶದಲ್ಲಿನ ಆಂತರಿಕ ವಿಪತ್ತು, ವನ್ಯಜೀವಿಗಳ ಚಲನವಲನದ ಮೇಲೆ ನಿಗಾವಹಿಸಲು ಉಪಯುಕ್ತಕಾರಿಯಾಗಿದೆ, ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ನಲ್ಲಿ ನುರಿತ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಕರ್ತವ್ಯ ನಿರ್ವಹಿಸಲಿದ್ದು ಪ್ರಾಣಿಗಳು ಗಡಿದಾಟಿದ ಕ್ಷಣದಲ್ಲೇ ಎಚ್ಚರವಹಿಸಿ ಸೂಕ್ತ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ. ಅರಣ್ಯದೊಳಗಿನ ಸಮಗ್ರ ಚಿತ್ರಣವನ್ನ ಕ್ರೂಡಿಕರಿಸಿ ಸಮಗ್ರ ಮಾಹಿತಿ ಒದಗಿಸುತ್ತದೆ ನಂತರ ಪರಿಶೀಲನೆ ನಡೆಸಿ ಸೂಕ್ತ ಕ್ರಮಕ್ಕೆ ಮುಂದಾಗಬಹುದಾಗಿದೆ.**

## ಮಿನಿ ನ್ಯೂಸ್


### ರೂ.1 ಕೋಟಿ ವೆಚ್ಚದಲ್ಲಿ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಪುತ್ಥಳಿ ನಿರ್ಮಾಣ

• **ಉದಯವಾಹಿನಿ, ತುಮಕೂರು**

ನಗರದ ಸಿದ್ದಗಂಗಾ ಮಠದಲ್ಲಿ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಪುತ್ಥಳಿ ಪ್ರತಿಷ್ಠಾಪನಾ ಕಾರ್ಯಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು. ಸಿದ್ದಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ 60 ವರ್ಷ ಯಶಸ್ವಿಯಾಗಿ ಮುಂದುವರಿದಿದೆ. ಇದರ ಪ್ರಯುಕ್ತ 8 ಅಡಿ ಎತ್ತರದ ಪುತ್ಥಳಿ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಕೃಷಿ, ಕೈಗಾರಿಕಾ ವಸ್ತು ಪ್ರದರ್ಶನದ ಟ್ರಸ್ಟ್ ವತಿಯಿಂದ ರೂ.1 ಕೋಟಿ ವೆಚ್ಚ ಮಾಡಲಾಗುತ್ತಿದೆ. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಪೂಜೆ ನೆರವೇರಿಸಿ ಮಾತನಾಡಿ, 'ಪುತ್ಥಳಿ ಜತೆಗೆ ವಿಶೇಷವಾಗಿ ಉದ್ಯಾನವನ ನಿರ್ಮಿಸಲಾಗುತ್ತದೆ. ಇದಕ್ಕೆ ಮಠದ ಹಳೇ ವಿದ್ಯಾರ್ಥಿಗಳು ಸಹ ಕೈಜೋಡಿಸಿದ್ದಾರೆ' ಎಂದರು.

'ಪುತ್ಥಳಿ ಪ್ರತಿಷ್ಠಾಪನೆಗೆ ತಲಾ ರೂ.10 ಲಕ್ಷ ನೀಡಲಾಗುವುದು' ಎಂದು ಶಾಸಕರಾದ ಬಿ.ಸುರೇಶ್‌ಗೌಡ, ಜಿ.ಬಿ.ಜ್ಯೋತಿಗಣೇಶ್ ಭರವಸೆ ನೀಡಿದರು. ಮಠದ ಆಡಳಿತಾಧಿಕಾರಿ ವಿಶ್ವನಾಥಯ್ಯ, ವಸ್ತು ಪ್ರದರ್ಶನದ ಕಾರ್ಯದರ್ಶಿ ಜಿ.ಗಂಗಾಧರಯ್ಯ, ಜಂಟಿ ಕಾರ್ಯದರ್ಶಿಗಳಾದ ಕೆಂ.ಬ.ರೇಣುಕಯ್ಯ, ಎಸ್.ಶಿವಕುಮಾರ್, ಸಿದ್ದಗಂಗಾ ವಿದ್ಯಾಸಂಸ್ಥೆ ನಿರ್ದೇಶಕ ಜಯವಿಭವಸ್ವಾಮಿ, ಎಸ್‌ಐಟಿ ಸಿಇಒ ಶಿವಕುಮಾರಯ್ಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ, ಪತ್ರಕರ್ತ ಎಸ್.ನಾಗಣ್ಣ, ಮಠದ ಹಳೇ ವಿದ್ಯಾರ್ಥಿ ವೆಂಕಟೇಗೌಡ ಮೊದಲಾದವರು ಭಾಗವಹಿಸಿದ್ದರು.

### ಕನಕದಾಸ ಜಯಂತಿ ಆಚರಣೆ: ವಿವಿಧ ಕಲಾತಂಡಗಳ ಮೆರುಗು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ದಾಸಶ್ರೇಷ್ಠ ಕನಕದಾಸರ ಜಯಂತಿಯನ್ನ ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಕನಕದಾಸರ ಭಾವಚಿತ್ರವನ್ನ ಹೂವಿನಿಂದ ಅಲಂಕೃತಗೊಂಡ ಟ್ರ್ಯಾಕ್ಟರ್ ಮೇಲಿರಿಸಿ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಕನಕ ಜಯಂತಿ ಹಿನ್ನೆಲೆ ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆಮಾಡಿತ್ತು, ದಾಸಶ್ರೇಷ್ಠರ ಭಾವಚಿತ್ರಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಸಮುದಾಯದ ಮುಖಂಡರು ಸಾಮಾಜಿಕವಾಗಿ ಸಮಾನತೆಯಿಂದ ಬದುಕಲು ಅಡಿಗಲ್ಲಾಕಿದ ಪರಿವರ್ತನಾ ಹರಿಕಾರ ನಮ್ಮೆಲ್ಲರ ಆದರ್ಶವಾಗಿದ್ದಾರೆ ಎಂದು ತಿಳಿಸಿದರು.

**ಮೆರವಣಿಗೆಗೆ ಕಲಾ ತಂಡಗಳ ಮೆರುಗು:** ದಾಸ ಶ್ರೇಷ್ಠರ ಸ್ಮರಣಾ ದಿನದಂದು ಮೆರವಣಿಗೆಗೆ ವಿವಿಧ ಕಲಾತಂಡಗಳು ಮೆರುಗು ನೀಡಿದವು, ನಂದಿಧ್ವಜ, ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ವಾದ್ಯಗೋಷ್ಠಿ ವೃಂದ ನೆರೆದಿದ್ದವರ ಕಣ್ಮನ ಸೆಳೆದವು. ಪ್ರತಿ ವರ್ಷದಂತೆ ಈ ಬಾರಿಯೂ ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಯಿತು. ಈ ವೇಳೆ ಗೌಡಿಕೆ ರಾಜುಗೌಡ, ಪಾಪಣ್ಣ, ಬಸವೇಗೌಡ, ಬಸವರಾಜು, ಸ್ಥಳೀಯ ಸಮುದಾಯದ ಮುಖಂಡರು, ಯುವಕರು, ಸುತ್ತಲಿನ ಗ್ರಾಮಗಳ ಕುರುಬ ಸಮುದಾಯದ ಯುವಕರು ಹಿರಿಯರು ಹಾಜರಿದ್ದರು

### ಜನರ ಬದುಕು ಬದಲಾಯಿಸಿದ ಗ್ಯಾರಂಟಿ: ಸಚಿವ ಕೆ.ವೆಂಕಟೇಶ್

• **ಉದಯವಾಹಿನಿ, ಪಿರಿಯಾಪಟ್ಟಣ**

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕ ಬಲವನ್ನು ತುಂಬಿವೆ ಎಂದು ಹಲವು ಸಮೀಕ್ಷೆಗಳಿಂದ ಸಾಬೀತಾಗಿದೆ ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.ಪಟ್ಟಣದಲ್ಲಿ ಸಾರ್ವಜನಿಕ ಗ್ರಂಥಾಲಯ ಮತ್ತು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ರೈತರ, ದೀನ ದಲಿತರ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಹಾಗೂ ರಕ್ಷಣೆಗೆ ಕಾಂಗ್ರೆಸ್ ಪಕ್ಷ ಬದ್ಧವಿದೆ. ಯಾವ ಸರ್ಕಾರ ಕೂಡ ಇಷ್ಟೆಲ್ಲಾ ಅಭಿವೃದ್ಧಿ ಯೋಜನೆ ನೀಡಿಲ್ಲ, ಆದರೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಕ್ಕೆ ಟೀಕೆ ಮಾಡುವುದೊಂದೆ ದುರುದ್ದೇಶವಾಗಿದೆ ಎಂದು ದೂರಿದರು. ಇದರೊಂದಿಗೆ ಮಾಧ್ಯಮಗಳು ಕೂಡ ಸೇರಿವೆ, ಅಭಿವೃದ್ಧಿ ಯೋಜನೆಗೆ ಅನುದಾನ ಕೊರತೆ ಇಲ್ಲ, ಈ ಸುಳ್ಳು ಆರೋಪಗಳಿಗೆ ಯಾರು ಕೂಡ ತಲೆ ಕೆಡಿಸಿಕೊಳ್ಳಬೇಡಿ ಎಂದರು.

### ಮೂಲಸೌಕರ್ಯಕ್ಕೆ ಕ್ರಮ: ಶಾಸಕ ಎಂ.ಆರ್.ಮಂಜುನಾಥ್ ಭರವಸೆ

• **ಉದಯವಾಹಿನಿ, ಹನೂರು**

ನಾಗಣ್ಣನಗರ ಗ್ರಾಮಕ್ಕೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸಲಾಗುವುದು' ಎಂದು ಶಾಸಕ ಎಂ.ಆರ್.ಮಂಜುನಾಥ್ ಹೇಳಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ನಾಗಣ್ಣ ನಗರ ಗ್ರಾಮಸ್ಥರೊಂದಿಗೆ ಮಾತನಾಡಿದ ಅವರು, 'ಕಂದಾಯ ಗ್ರಾಮವಾದರೆ ಜನರಿಗೆ ಸರ್ಕಾರದ ಸವಲತ್ತು ಮತ್ತಷ್ಟು ಸಿಗಲಿದೆ. ಇಲ್ಲಿಯ ಜನರಿಗೆ ಡಿಮ್ಯಾಂಡ್, ರಿಜಿಸ್ಟರ್, ಇ ಸ್ವತ್ತು ಸಿಗುತ್ತಿಲ್ಲ ಎಂಬ ಸಮಸ್ಯೆ ತಲೆದೂರಿದೆ. ಅಂಗನವಾಡಿ, ಶಾಲಾ ಕಟ್ಟಡ ಶಿಥಿಲವಾಗಿದೆ. ಈ ಸಮಸ್ಯೆಗಳನ್ನು ಸರಿಪಡಿಸಲು ಹಾಗೂ ಜನರಿಗೆ ಅನುಕೂಲ ಕಲ್ಪಿಸಿ ಗ್ರಾಮ ಅಭಿವೃದ್ಧಿ ಪಡಿಸಲು ಶ್ರಮಿಸಲಾಗುತ್ತಿದೆ' ಎಂದರು.

ನಾಗಣ್ಣನಗರ ಗ್ರಾಮ ಅಭಿವೃದ್ಧಿಗೆ ಹಾಗೂ ಜನರಿಗೆ ಅಗತ್ಯವಾಗಿ ಬೇಕಾದಂತಹ ಚರಂಡಿ ಕುಡಿಯುವ ನೀರು ಹಾಗೂ ವಿದ್ಯುತ್ ಸೇರಿದಂತೆ ಇನ್ನಿತರ ಕಾಮಗಾರಿ ಕೈಗೆತ್ತಿಕೊಳ್ಳಲು ಈಗಾಗಲೇ ಸಿದ್ಧತೆ ನಡೆಸಲಾಗಿದೆ ಎಂದು ತಿಳಿಸಿದರು. ಸದ್ಯಕ್ಕೆ ಪಡಿತರ ಚೀಟಿ, ವಿದ್ಯುತ್, ಕುಡಿಯುವ ನೀರು, ರಸ್ತೆ, ಚರಂಡಿ ಹಾಗೂ ಇನ್ನಿತರ ಸೌಕರ್ಯ ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಲಾಗಿದ್ದು, ಅಗತ್ಯ ಕ್ರಮ ವಹಿಸಲಿದ್ದಾರೆ. ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲು ಶ್ರನಿಸಲಾಗುತ್ತಿದೆ ಎಂದರು. ರಾಮಪುರದಿಂದ ನಾಗಣ್ಣನಗರ ಮಾರ್ಗವಾಗಿ ಬೆಳಿಗ್ಗೆ ಶಾಲೆಗೆ ತೆರಳಲು ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಮನವಿಯನ್ನು ಮಾಡಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಸಾರಿಗೆ ವ್ಯವಸ್ಥಾಪಕರನ್ನು ಸ್ಥಳಕ್ಕೆ ಕರೆಸಿ ಶಾಲಾ ಮಕ್ಕಳಿಗೆ ಹಾಗೂ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಸೂಚನೆ ನೀಡಿದರು. ನಾಗಣ್ಣನಗರದ ಜನರಿಗೆ ಶೌಚಗೃಹ ಹಾಗೂ ಪಡಿತರ ಚೀಟಿ ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಒದಗಿಸಬೇಕು.

ಅಂತರಾಳದಿಂದ.. EDITORIAL

# ಬಾಲಾಪರಾಧಿಗಳ ಬದುಕಿನಲ್ಲಿ ಸುಧಾರಣೆಯಾಗಲಿ

ವಿಚಾರಣಾ ಕೈದಿಗಳಲ್ಲಿ ದಲಿತರು ಮತ್ತು ಹಿಂದುಳಿದವರ್ಗದ ಜನರು ಶೇ. 66ರಷ್ಟಿದ್ದಾರೆ. ನಿಧಾನಗತಿಯ ನ್ಯಾಯಾಂಗ ವ್ಯವಸ್ಥೆಯೂ ವಿಚಾರಣಾಧೀನ ಕೈದಿಗಳ ಇಂದಿನ ಸ್ಥಿತಿಗೆ ಮುಖ್ಯ ಕಾರಣವಾಗಿದೆ. ಇದೇ ಸಂದರ್ಭದಲ್ಲಿ ಈ ದೇಶದಲ್ಲಿ 55 ಕೈದಿಗಳಿಗೆ ಒಬ್ಬ ಉಚಿತ ಕಾನೂನು ನೆರವು ವಕೀಲರು ಲಭ್ಯವಿದ್ದಾರೆ ಎಂದು ಅಂಕಿಅಂಶ ಹೇಳುತ್ತದೆ. ರಾಜಕೀಯ ದುರುದ್ದೇಶಗಳು ನ್ಯಾಯ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿ ನಡೆಸುವ ಹಸ್ತಕ್ಷೇಪಗಳೂ ಆರೋಪಿಗಳು ಅನ್ಯಾಯವಾಗಿ ಮಾಡದ ತಪ್ಪಿಗೆ ಜೈಲು ಶಿಕ್ಷೆ ಅನುಭವಿಸಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದೆ.ಇದೇ ಸಂದರ್ಭದಲ್ಲಿ ನಿಧಾನಗತಿಯ ನ್ಯಾಯಾಂಗ ವ್ಯವಸ್ಥೆಯಿಂದಾಗಿ 362 ಬಾಲ ನ್ಯಾಯ ಮಂಡಳಿಗಳಲ್ಲಿ ಬಾಲಾಪರಾಧಕ್ಕೆ ಸಂಬಂಧಿಸಿದ 50,000ಕ್ಕೂ ಅಧಿಕ ಮಕ್ಕಳ ಪ್ರಕರಣಗಳು ವಿಚಾರಣೆಗೆ ಬಾಕಿಯಿದೆ ಎನ್ನುವ ಅಂಶವನ್ನು ನ್ಯೂ ಇಂಡಿಯಾ ಜಸ್ಟಿಸ್ ರಿಪೋರ್ಟ್ ಸಂಸ್ಥೆಯು ತನ್ನ ವರದಿಯಲ್ಲಿ ಬಹಿರಂಗಪಡಿಸಿದೆ. ಬಾಲನ್ಯಾಯ ಕಾಯ್ದೆ ಜಾರಿಗೆ ಬಂದು ಹತ್ತು ವರ್ಷಗಳಾದರೂ ನ್ಯಾಯಾಧೀಶರ ಕೊರತೆ, ಬಾಲಸುಧಾರಣಾ ಗೃಹಗಳ ಅವ್ಯವಸ್ಥೆ ದತ್ತಾಂಶಗಳ ಅಲಭ್ಯತೆ ನ್ಯಾಯದಾನಗಳ ಮೇಲೆ ತೀವ್ರ ಪರಿಣಾಮವನ್ನು ಬೀರಿವೆ ಎಂದು ವರದಿ ಆರೋಪಿಸುತ್ತಿದೆ. 2023ರ ಅಕ್ಟೋಬರ್ 31ರವರೆಗೆ, ಬಾಲ ನ್ಯಾಯ ಮಂಡಳಿಗಳ ಮುಂದಿರುವ 1,00,904 ಪ್ರಕರಣಗಳ ಪೈಕಿ ಶೇ. 55ರಷ್ಟು ವಿಚಾರಣೆಗೆ ಬಾಕಿಯುಳಿದಿದೆ. ಒಡಿಶಾದಲ್ಲಿ ಶೇ. 83ರಷ್ಟು ಬಾಕಿಯಿದ್ದರೆ ಕರ್ನಾಟಕದಲ್ಲಿ ಶೇ. 35 ಪ್ರಕರಣಗಳು ವಿಚಾರಣೆಗೆ ಬಾಕಿಯಿವೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಭಾರತದ 765 ಜಿಲ್ಲೆಗಳ ಪೈಕಿ ಶೇ. 92ರಲ್ಲಿ ಬಾಲ ನ್ಯಾಯ ಮಂಡಳಿಗಳು ರಚನೆಯಾಗಿವೆ. ಆದರೆ ಪ್ರತೀ ನಾಲ್ಕು ಮಂಡಳಿಗಳ ಪೈಕಿ ಒಂದು ಪೂರ್ಣ ಪೀಠವನ್ನು ಹೊಂದಿಲ್ಲ. ಶೇ.30ರಷ್ಟು ಜೆಜೆಬಿಗಳು, ಕಾನೂನು ಸೇವಾ ಘಟಕವನ್ನು ಹೊಂದಿಲ್ಲ. 14 ರಾಜ್ಯಗಳು ಹಾಗೂ ಜಮ್ಮು-ಕಾಶ್ಮೀರದಲ್ಲಿನ ಬಾಲಸುಧಾರಣಾ ಗೃಹಗಳು ಸುರಕ್ಷತೆಯ ಕೊರತೆಯನ್ನು ಎದುರಿಸುತ್ತಿವೆ.

ಹೆಣ್ಣು ಮಕ್ಕಳಿಗಾಗಿ ಕೇವಲ 40 ಪಾಲನಾ ಗೃಹಗಳಿವೆ ಎನ್ನುವ ಅಂಶವನ್ನು ವರದಿ ಉಲ್ಲೇಖಿಸಿದೆ.

**ಭಾರತದ 5.6 ಲಕ್ಷ ಕೈದಿಗಳಲ್ಲಿ ಸುಮಾರು ನಾಲ್ಕು ಲಕ್ಷ ಮಂದಿ ವಿಚಾರಣಾಧೀನ ಕೈದಿಗಳಾಗಿದ್ದಾರೆ. ಅಂದರೆ, ಮಾಡಿದ ಅಪರಾಧ ಸಾಬೀತಾಗದೆಯೇ ಭಾಗಶಃ ಶಿಕ್ಷೆ ಅನುಭವಿಸುತ್ತಿರುವ ಶೇ. 70ರಷ್ಟು ಕೈದಿಗಳು ಭಾರತದ ಜೈಲಿನಲ್ಲಿದ್ದಾರೆ ಎಂದು ವರದಿ ಹೇಳುತ್ತದೆ. ತಾವು ಮಾಡಿದ ಅಪರಾಧಗಳಿಗೆ ನಿಗದಿ ಪಡಿಸಿದ ಶಿಕ್ಷೆಗಿಂತ ಅಧಿಕ ಶಿಕ್ಷೆಯನ್ನು ವಿಚಾರಣೆಯ ಹೆಸರಿನಲ್ಲಿ ಇವರು ಜೈಲಿನಲ್ಲಿ ಅನುಭವಿಸುತ್ತಿದ್ದಾರೆ. ಶೇ. 25ರಷ್ಟು ಕೈದಿಗಳು ಜಾಮೀನಿಗೆ ಬೇಕಾದ ಹಣದ ಕೊರತೆಯಿಂದಾಗಿ ಜೈಲಿನಲ್ಲೇ ಉಳಿದಿದ್ದರೆ, ಶೇ. 60ಕ್ಕಿಂತ ಹೆಚ್ಚಿನ ಕೈದಿಗಳಿಗೆ ಉಚಿತ ಕಾನೂನು ನೆರವು ಪಡೆಯುವ ಹಕ್ಕಿನ ಅರಿವೇ ಇಲ್ಲ ಎನ್ನುತ್ತದೆ ವರದಿ.**

ಈ ದೇಶದಲ್ಲಿ ಪ್ರತೀ ನಾಲ್ಕು ಗಂಟೆಗೆ ಒಬ್ಬನಂತೆ ಅಪ್ರಾಪ್ತ ವಯಸ್ಸಿನ ಅತ್ಯಾಚಾರಿಯನ್ನು ಬಂಧಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವಾಲಯದ ಅಂಕಿಅಂಶಗಳೇ ಹೇಳುತ್ತದೆ. ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 5,906 ಬಾಲಾಪರಾಧಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಅತಿ ಹೆಚ್ಚು ಬಾಲಾಪರಾಧಿಗಳ ಪ್ರಕರಣಗಳು ದಾಖಲಾಗಿರುವುದು ಬೆಂಗಳೂರಿನಲ್ಲಿ ಎಂದು ಸರಕಾರಿ ಅಂಕಿಅಂಶಗಳು ಹೇಳುತ್ತವೆ. 2022-23ರಲ್ಲಿ ರಾಜ್ಯದಲ್ಲಿ ಒಟ್ಟು 2,010 ಬಾಲಾಪರಾಧಿಗಳ ವಿರುದ್ಧ ಕೇಸ್ ದಾಖಲಾಗಿದ್ದರೆ,

2023-24ರಲ್ಲಿ 2, 132 ಹಾಗೂ 2024-25ರಲ್ಲಿ 1,764ರಷ್ಟು ಬಾಲಾಪರಾಧಿಗಳ ವಿರುದ್ಧ ಕೇಸ್ ದಾಖಲಾಗಿವೆ ಎಂದು ಸರಕಾರ ಹೇಳುತ್ತಿದೆ. ಮಕ್ಕಳ ವಿರುದ್ಧ ಪ್ರಕರಣ ದಾಖಲಾದ ಬೆನ್ನಿಗೇ ಅದರ ವಿಚಾರಣೆ ನಡೆಯುವುದು ಅತ್ಯಗತ್ಯ. ಯಾಕೆಂದರೆ ಮಕ್ಕಳ ಮನಸ್ಸು ಅತ್ಯಂತ ಸೂಕ್ಷ್ಮವಾದುದು. ಅಪರಾಧ ಪ್ರಕರಣಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಇವರು ಪ್ರಬುದ್ಧರಾಗಿರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ತಪ್ಪು ಕಾರಣಗಳಿಂದ ಇವರು ಅಪರಾಧ ಪ್ರಕರಣಗಳಲ್ಲಿ ಸಿಲುಕಿಕೊಳ್ಳಬಹುದು. ಇವರ ಮೇಲಿರುವ ಆರೋಪಗಳ ವಿಚಾರಣೆ ತಡವಾದಷ್ಟು ಇವರು ಬಾಲ ಸುಧಾರಣಾ ಗೃಹಗಳಲ್ಲಿ ಕಳೆಯಬೇಕಾಗುತ್ತದೆ. ಅಲ್ಲಿ ಬರುವ ಸಂಪರ್ಕಗಳು ಇವರನ್ನು ಪೂರ್ಣ ಪ್ರಮಾಣದಲ್ಲಿ ಅಪರಾಧಿಗಳನ್ನಾಗಿ ಪರಿವರ್ತಿಸಬಹುದು. ಬಾಲಾಪರಾಧಿಗಳನ್ನು ಶಿಕ್ಷಿಸುವ ಬದಲಿಗೆ ಅವರಲ್ಲಿ ಸುಧಾರಣೆಗಳನ್ನು ತರುವ ಮಹತ್ ಉದ್ದೇಶವನ್ನು ಸುಧಾರಣಾ ಗೃಹಗಳು ಹೊಂದಿರುತ್ತವೆ. ಆದರೆ ವಿಚಾರಣೆಗಳು ತಡವಾದಷ್ಟು ಬಾಲಾಪರಾಧಿಗಳ ಮೇಲೆ ಇಂತಹ ಗೃಹಗಳಲ್ಲಿ ದೌರ್ಜನ್ಯಗಳು ನಡೆಯುತ್ತವೆ. ಸುಧಾರಣಾ ಗೃಹದ ಸಿಬ್ಬಂದಿಯಿಂದಲೇ ಈ ದೌರ್ಜನ್ಯಗಳು ಆರಂಭವಾಗುತ್ತವೆ. ಸಹ ಬಾಲಾಪರಾಧಿಗಳು ಉಳಿದ ಬಾಲಕರನ್ನು ಅಪರಾಧ ಜಗತ್ತಿಗೆ ತಳ್ಳುವ ಸಾಧ್ಯತೆಗಳಿರುತ್ತವೆ. ಬಾಲಾಪರಾಧಿ ಕೇಂದ್ರಗಳು ಆರೋಪಿಗಳನ್ನು ಸುಧಾರಣೆ ಮಾಡುವುದಕ್ಕಿಂತ, ಕ್ರಿಮಿನಲ್‌ಗಳಾಗಿ ಭಡ್ತಿ ಕೊಡುವುದೇ ಅಧಿಕ. ಈ ಕಾರಣದಿಂದಲೇ, ವಿಚಾರಣೆ ತಡವಾದಷ್ಟು ಬಾಲಾಪರಾಧಿಗಳ ಬದುಕು ಬಾಣಲೆಯಿಂದ ಬೆಂಕಿಗೆ ಬಿದ್ದ ಸ್ಥಿತಿಯಾಗುತ್ತದೆ. ಸುಧಾರಣಾ ಕೇಂದ್ರಗಳು ಆರೋಪಿಗಳ ಬದುಕನ್ನು ಬದಲಾಯಿಸಲು ಪ್ರಯತ್ನಿಸಬೇಕು. ಅರ್ಧದಲ್ಲೇ ವಿದ್ಯಾಭ್ಯಾಸ ಮೊಟಕುಗೊಂಡವರಲ್ಲಿ ಓದಿನ ಆಸಕ್ತಿಯನ್ನು ಬೆಳೆಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸುಧಾರಣಾ ಗೃಹದಿಂದ ಹೊರಜಗತ್ತಿಗೆ ಕಾಲಿಟ್ಟಾಗ ಅವರು ಸಭ್ಯ ನಾಗರಿಕರಾಗಿ ಬದುಕುವುದಕ್ಕೆ ಬೇಕಾದ ಶಿಕ್ಷಣವನ್ನು ಈ ಸುಧಾರಣಾ ಕೇಂದ್ರಗಳು ನೀಡಬೇಕು. ಆದರೆ, ಬಾಲಾಪರಾಧಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಅವರನ್ನು ಸುಧಾರಣೆ ಮಾಡುವ ಸಿಬ್ಬಂದಿ ಪ್ರಯತ್ನಕ್ಕೆ ಹಿನ್ನಡೆಯಾಗುತ್ತದೆ. ಇಂದು ನಾಗರಿಕ ಸಮಾಜದಲ್ಲೇ ಬಡವರು, ದುರ್ಬಲ ಸಮುದಾಯದ ಜನರು ಶಿಕ್ಷಿತರಾಗುವುದಕ್ಕೆ ಇರುವ ಅವಕಾಶಗಳು ಕಿರಿದಾಗುತ್ತಿವೆ. ಸರಕಾರಿ ಶಾಲೆಗಳು ಒಂದೊಂದಾಗಿ ಮುಚ್ಚುತ್ತಿವೆ. ಹೀಗಿರುವಾಗ ಅಪರಾಧದ ಆರೋಪ ಹೊತ್ತ ಬಾಲಕರಿಗೆ ಉತ್ತಮ ಶಿಕ್ಷಣ ಸವಲತ್ತುಗಳನ್ನು ನೀಡಲು ನಮ್ಮ ವ್ಯವಸ್ಥೆ ಎಷ್ಟರಮಟ್ಟಿಗೆ ಯಶಸ್ವಿಯಾಗಬಹುದು? ಅದರೊಳಗಿರುವ ಮೂಲಭೂತ ಸೌಕರ್ಯಗಳ ಸ್ಥಿತಿ ಹೇಗಿರಬಹುದು ಸುಧಾರಣಾ ಗೃಹಗಳು ಕನಿಷ್ಠ ಬಾಲಕರನ್ನು ಸುಧಾರಣೆ ಮಾಡದೇ ಇದ್ದರೂ ಚಿಂತಿಲ್ಲ, ಅವರನ್ನು ಅಪರಾಧಿಗಳಾಗಿ ಪರಿವರ್ತಿಸದಂತೆ ನೋಡಿಕೊಳ್ಳಬೇಕು.

# ಕಣ್ಣು ಮಂಜಾಗುವುದು ಕಿಡ್ನಿ ಡ್ಯಾಮೇಜ್‌ನ ಲಕ್ಷಣ!



### ಕಣ್ಣುಗಳ ದೃಷ್ಟಿ ಮಂಜಾಗುವುದು

**ಹಠಾತ್ ಮಸುಕಾದ ದೃಷ್ಟಿ ಮೂತ್ರಪಿಂಡದ ಸಮಸ್ಯೆಗಳ ಗಂಭೀರ ಲಕ್ಷಣವೂ ಆಗಿರಬಹುದು. ಇದರ ಹಿಂದೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದಾಗಿ, ಮೂತ್ರಪಿಂಡದ ಕಾಯಿಲೆ ಹೆಚ್ಚಾಗಿ ಅಧಿಕ ರಕ್ತದೊತ್ತಡದೊಂದಿಗೆ ಸಂಬಂಧಿಸಿದೆ. ಅಧಿಕ ರಕ್ತದೊತ್ತಡವು ಕಣ್ಣುಗಳಲ್ಲಿನ ನರಗಳನ್ನು ಹಾನಿಗೊಳಿ ಸುತ್ತದೆ, ಇದು ರೆಟಿನೋಪತಿ ಮತ್ತು ಮಸುಕಾದ ದೃಷ್ಟಿಗೆ ಕಾರಣವಾಗುತ್ತದೆ. ಎರಡನೆಯದಾಗಿ, ಮೂತ್ರಪಿಂಡದ ವೈಫಲ್ಯದಲ್ಲಿ, ಕೆಲವು ವಿಷಗಳು ದೇಹದಲ್ಲಿ ಸಂಗ್ರಹವಾಗುತ್ತವೆ, ಇದು ಆಪ್ಟಿಕ್ ನರಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ, ದೃಷ್ಟಿ ಸಮಸ್ಯೆಗಳನ್ನು ಉಂಟುಮಾಡುತ್ತದೆ.**

ಮೂತ್ರಪಿಂಡಗಳು ದೇಹದ ಪ್ರಮುಖ ಅಂಗವಾಗಿದ್ದು, ರಕ್ತವನ್ನು ಶೋಧಿಸುತ್ತವೆ. ಅವು ದೇಹದಿಂದ ವಿಷಕಾರಿ ಅಂಶಗಳನ್ನು ಸಹ ತೆಗೆದುಹಾಕುತ್ತವೆ. ಮೂತ್ರಪಿಂಡಗಳು ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ, ಕೈಗಳು, ಕಾಲುಗಳಲ್ಲಿ ಮಾತ್ರವಲ್ಲದೆ ಕಣ್ಣುಗಳಲ್ಲಿಯೂ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಈ ಲಕ್ಷಣಗಳನ್ನು ನಿರ್ಲಕ್ಷಿಸಬಾರದು.

ನಮ್ಮ ದೇಹವು ಒಂದು ಯಂತ್ರದಂತೆ, ದಿನದ 24ಗಂಟೆಯೂ ತನ್ನ ಪಾಡಿಗೆ ತಾನು ಕಾರ್ಯ ನಿರ್ವಹಿಸುತ್ತಾ ಇರುತ್ತದೆ. ಒಂದು ವೇಳೆ ಇಲ್ಲಿ ಸಮಸ್ಯೆಗಳು ಕಾಣಿಸಿಕೊಂಡರೆ, ಇದಕ್ಕೆ ಸಂಬಂಧಪಟ್ಟ ಕೆಲವೊಂದು ಸಂಕೇತಗಳನ್ನು ಆಕೂಡಲೇ ಕಳುಹಿಸುತ್ತದೆ! ನಾವು ಈ ಸಂಕೇತಗಳನ್ನು ಮೊದಲೇ ಗುರುತಿಸಿದರೆ, ಗಂಭೀರ ಕಾಯಿಲೆಗಳನ್ನು ತಡೆಗಟ್ಟಲು ಸಾಧ್ಯವಿದೆ. ಅದೇ ರೀತಿ, ಮೂತ್ರಪಿಂಡದ ಸಮಸ್ಯೆ ಇದ್ದರೆ, ನಮ್ಮ ದೇಹವು ನಮಗೆ ಕೆಲವೊಂದು ಎಚ್ಚರಿಕೆಗಳನ್ನು ನೀಡಲು ಪ್ರಾರಂಭಿಸುತ್ತದೆ, ಅಂತಹ ಎಚ್ಚರಿಕೆಗಳನ್ನು ನಿರ್ಲಕ್ಷ್ಯ ಮಾಡಲು ಹೋಗದೆ ಕೂಡಲೇ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡರೆ, ಮುಂದೆ ಆಗಬಹುದಾದ ಆಪತ್ತಿನಿಂದ ಪಾರಾಗಬಹುದಾಗಿದೆ.

**ಕಿಡ್ನಿಯ ರೋಗಲಕ್ಷಣಗಳು ಹೇಗಿರುತ್ತವೆ:** ಸಾಮಾನ್ಯವಾಗಿ ಕಿಡ್ನಿಗಳಲ್ಲಿ ಸಮಸ್ಯೆ ಕಾಣಿಸಿಕೊಂಡಾಗ, ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳುವುದು, ಬೆಳಗ್ಗೆ ಎದ್ದಾಗ ಸದಾ ವಾಕರಿಕೆ ಮತ್ತು ವಾಂತಿ ಬಂದಂತೆ ಆಗುವುದು, ಇದ್ದಕ್ಕಿದಂತೆ ಕಾಲುಗಳ ಪಾದಗಳಲ್ಲಿ ಊತ ಕಾಣಿಸಿಕೊಳ್ಳುವುದು ಹಾಗೂ ಹೊಟ್ಟೆ ಅಥವಾ ಕೆಳ ಬೆನ್ನಿನ ಭಾಗದಲ್ಲಿ ನೋವು ಬರುವುದು, ಇವೆಲ್ಲಾದರ ಜೊತೆಗೆ, ಕಣ್ಣುಗಳಲ್ಲಿ ಕೂಡ ಕೆಲವೊಂದು ಬಗೆಯ ಲಕ್ಷಣಗಳು ಕಾಣಿಸಿಕೊಳ್ಳಲು ಶುರವಾಗುತ್ತದೆ. ಇವೆಲ್ಲಾ ಲಕ್ಷಣಗಳನ್ನು ಮೊದಲೇ ಗುರುತಿಸಿಕೊಂಡು, ವೈದ್ಯರ ಬಳಿಗೆ ಹೋಗಿ ಸರಿಯಾದ ಚಿಕಿತ್ಸೆ ಪಡೆದುಕೊಂಡರೆ, ಮುಂದೆ ಕಿಡ್ನಿಗಳಿಗೆ ಆಗುವ ಹಾನಿಯಿಂದ ತಪ್ಪಿಸಬಹುದು.

**ಕಣ್ಣುಗಳ ಸುತ್ತ ಊತ :** ಇದು ಮೂತ್ರಪಿಂಡ ವೈಫಲ್ಯದ ಅತ್ಯಂತ ಸಾಮಾನ್ಯ ಮತ್ತು ಆರಂಭಿಕ ಲಕ್ಷಣ ವಾಗಿದೆ. ಬೆಳಗ್ಗೆ ಎದ್ದ ನಂತರ ನಿಮ್ಮ ಕಣ್ಣುಗಳ ಸುತ್ತಲೂ, ವಿಶೇಷವಾಗಿ ನಿಮ್ಮ ಕಣ್ಣುರೆಪ್ಪೆಗಳ ಕೆಳಗೆ ಅಸಾಮಾನ್ಯ ಊತವನ್ನು ನೀವು ಗಮನಿಸಿದರೆ, ಅದನ್ನು ಹಗುರವಾಗಿ ಪರಿಗಣಿಸಬೇಡಿ.

ಆರೋಗ್ಯಕರ ಮೂತ್ರಪಿಂಡಗಳು ದೇಹದಿಂದ ಹೆಚ್ಚುವರಿ ದ್ರವ ಮತ್ತು ಉಪ್ಪನ್ನು ಫಿಲ್ಟರ್ ಮಾಡಿ ಮೂತ್ರದ ಮೂಲಕ ಹೊರಹಾಕುತ್ತವೆ. ಮೂತ್ರಪಿಂಡಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡಲು ವಿಫಲವಾದಾಗ, ಈ ಹೆಚ್ಚುವರಿ ದ್ರವವು ದೇಹದ ಅಂಗಾಂಶಗಳಲ್ಲಿ ಸಂಗ್ರಹಗೊಳ್ಳಲು ಪ್ರಾರಂಭಿಸುತ್ತದೆ. ಕಣ್ಣುಗಳ ಸುತ್ತಲಿನ ಚರ್ಮವು ತುಂಬಾ ಸೂಕ್ಷ್ಮವಾಗಿರುತ್ತದೆ, ಆದ್ದರಿಂದ ಊತವು ಇಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ.

**ಕಣ್ಣುಗಳಲ್ಲಿ ಶುಷ್ಕತೆ ಮತ್ತು ತುರಿಕೆ:** ಕಣ್ಣುಗಳಲ್ಲಿ ನಿರಂತರ ಶುಷ್ಕತೆ, ಉರಿ ಅಥವಾ ತುರಿಕೆ ಮೂತ್ರಪಿಂಡದ ಅಪ ಸಾಮಾನ್ಯ ಕ್ರಿಯೆಯನ್ನು ಸೂಚಿಸುತ್ತದೆ.

ಮೂತ್ರಪಿಂಡಗಳು ರಕ್ತವನ್ನು ಸರಿಯಾಗಿ ಫಿಲ್ಟರ್ ಮಾಡಲು ಸಾಧ್ಯವಾಗದಿದ್ದಾಗ, ದೇಹದಲ್ಲಿ ರಂಜಕದ ಮಟ್ಟಗಳು ಹೆಚ್ಚಾಗಲು ಪ್ರಾರಂಭಿಸುತ್ತವೆ, ಇದನ್ನು ಹೈಪರ್ ಫಾಸ್ಫೇಟೀಮಿಯಾ ಎಂದು ಕರೆಯಲಾಗುತ್ತದೆ. ದೇಹದಲ್ಲಿ ರಂಜಕ ಮತ್ತು ಕ್ಯಾಲ್ಸಿಯಂ ಸಮತೋಲನವು ತೊಂದರೆಗೊಳಗಾಗುತ್ತದೆ, ಇದು ಚರ್ಮ ಮತ್ತು ಕಣ್ಣುಗಳಲ್ಲಿ ತುರಿಕೆ ಮತ್ತು ಕಿರಿಕಿರಿಯನ್ನು ಉಂಟುಮಾಡಬಹುದು.


ಇದ್ದಕ್ಕಿದ್ದಂತೆ ಕಣ್ಣು ಕಾಣದಿರುವುದು ಅಥವಾ ತಲೆತಿರುಗುವಿಕೆ ಎದ್ದಾಗ ಇದ್ದಕ್ಕಿದ್ದಂತೆ ಕಣ್ಣು ಕಾಣದಿರುವುದು ಅಥವಾ ತಲೆತಿರುಗುವಿಕೆ ಕಂಡುಬಂದರೆ, ಅದು ಮೂತ್ರಪಿಂಡದ ಕಾಯಿಲೆಯಿಂದ ಉಂಟಾಗುವ ರಕ್ತಹೀನತೆಯ ಲಕ್ಷಣವಾಗಿರಬಹುದು. ಆರೋಗ್ಯಕರ ಮೂತ್ರಪಿಂಡಗಳು ಎರಿಥ್ರೋಪೊಯೆಟಿನ್ ಎಂಬ ಹಾರ್ಮೋನ್ ಅನ್ನು ಉತ್ಪಾದಿಸುತ್ತವೆ, ಇದು ದೇಹವು ಕೆಂಪು ರಕ್ತ ಕಣಗಳನ್ನು ಉತ್ಪಾದಿಸಲು ಸಹಾಯ ಮಾಡುತ್ತದೆ.

ಮೂತ್ರಪಿಂಡಗಳು ಹಾನಿಗೊಳಗಾದಾಗ, ಈ ಹಾರ್ಮೋನ್ ಸಾಕಷ್ಟು ಪ್ರಮಾಣದಲ್ಲಿ ಉತ್ಪತ್ತಿಯಾಗುವುದಿಲ್ಲ, ಇದು ರಕ್ತಹೀನತೆಗೆ ಕಾರಣ ವಾಗುತ್ತದೆ. ರಕ್ತಹೀನತೆ ತಲೆತಿರುಗುವಿಕೆ, ಮಂಕಾಗುವಿಕೆ ಮತ್ತು ಆಯಾಸದಂತಹ ಲಕ್ಷಣಗಳನ್ನು ಉಂಟುಮಾಡಬಹುದು.

### ರಕ್ತದೊತ್ತಡದ ಸಂಕೇತ

**ಹಠಾತ್ ಮಸುಕಾದ ದೃಷ್ಟಿ ಅಂದರೆ ಕಣ್ಣಿನ ದೃಷ್ಟಿ ಮಂಜಾಗುವುದು ಅಧಿಕ ರಕ್ತದೊತ್ತಡದ ಸಂಕೇತವಾಗಿರಬಹುದು. ಮೂತ್ರಪಿಂಡದ ಹಾನಿಯು ರಕ್ತ ದೊತ್ತಡದ ಸಮಸ್ಯೆಗಳಿಗೂ ಕಾರಣವಾಗಬಹುದು. ಅಧಿಕ ರಕ್ತದೊತ್ತಡವು ಕಣ್ಣುಗಳಲ್ಲಿನ ನರಗಳಿಗೆ ಹಾನಿ ಮಾಡುತ್ತದೆ, ಇದು ರೆಟಿನೋಪತಿಗೆ ಕಾರಣ ವಾಗಬಹುದು, ಇದು ದೃಷ್ಟಿ ಮಸುಕಾಗಲು ಕಾರಣವಾಗಬಹುದು.**

# ಕಲ್ಪವೃಕ್ಷ ವಾಹನ ಸೇವೆ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

2025ರ ಪದ್ಮಾವತಿ ಅಮ್ಮಾವರಿ ಬ್ರಹ್ಮೋತ್ಸವದ ಅಂಗವಾಗಿ ಶ್ರೀ ಪದ್ಮಾವತಿ ಅಮ್ಮಾವಾರಿ ದೇವಾಲಯ, ತಿರುಚಾನೂರು (ಅಲಿಮೇಲು ಮಂಗಾಪುರಂ), ತಿರುಪತಿ, ಹಾಗೂ ಆಂಧ್ರಪ್ರದೇಶದಲ್ಲಿ ನಡೆದ ಕಲ್ಪವೃಕ್ಷ ವಾಹನ ಸೇವೆಯಲ್ಲಿ, ಖ್ಯಾತ ಭರತನಾಟ್ಯ ಕಲಾವಿದೆ ಮೇಘನಾ ರೇವಣಕರ್ ಅವರು ಪದ್ಮಾವತಿಯ ರೂಪದಲ್ಲಿ ಅದ್ಭುತ, ಮನೋಜ್ಞ ಪ್ರದರ್ಶನ ನೀಡಿ ಪ್ರೇಕ್ಷಕರ ಮನಸೆಳೆದರು. ಇವರ ಜೊತೆಗೆ ಚರಣ್ ಮತ್ತು ಅಂಬರೀಣಿ ಸಹಕರಿಸಿದರು.

ಮೇಘನಾ ರೇವಣಕರ್ ಅವರ ಭಾವಪೂರ್ಣ ಅಭಿವ್ಯಕ್ತಿ, ನೃತ್ಯನೈಪುಣ್ಯ ಮತ್ತು ಸಾಂಪ್ರದಾಯಿಕ ಶೈಲಿಯ ನಿಖರ ನಿರೂಪಣೆ ದೈವಿಕ ಸತ್ವವನ್ನು ಜೀವಂತವಾಗಿ ಮೂಡಿಸಿತು. ಅವರ ಪ್ರದರ್ಶನವು ವೇದಿಗಳನ್ನು ತುಂಬಿದ ಭಕ್ತರಲ್ಲಿ ಆನಂದ, ಭಕ್ತಿ ಮತ್ತು ವಿಸ್ಮಯದ ಅನುರಣನವನ್ನು ಹುಟ್ಟಿಸಿತು. ಈ ಕಲಾ ಅವಕಾಶವನ್ನು ಕಲಾವಿದರು ಪ್ರದರ್ಶಿಸಲು ಒದಗಿಸಿದ ದಾಸ ಸಾಹಿತ್ಯ ಯೋಜನೆ ಮತ್ತು ಗೋಪಿಕಾ ಭಜನಾ ಮಂಡಳಿಗೆ ವಿಶೇಷ ಕೃತಜ್ಞತೆ ವ್ಯಕ್ತಪಡಿಸಲಾಯಿತು.

# ಮಹಾಮಾಯ, ಶ್ರೀ ನಾಟ್ಯಾಂಜಲಿ ಕಲಾ ಅಕಾಡೆಮಿ ವಿಶಿಷ್ಟ ಕಲೋತ್ಸವ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಬೆಂಗಳೂರಿನ ಪ್ರಸಿದ್ಧ ನೃತ್ಯ ದಂಪತಿಗಳಾದ ಸೂರ್ಯ ಎನ್. ರಾವ್ ಮತ್ತು ಪ್ರಥಮಾ ಪ್ರಸಾದ್ ರಾವ್ ನೇತೃತ್ವದ ಮಹಾ ಮಾಯಾ ಆರ್ಟ್ಸ್ ಫೌಂಡೇಶನ್ಸ್' ಮತ್ತು ಸುರತ್ಕಲ್ಲಿನ ಖ್ಯಾತ ನೃತ್ಯಗುರು ವಿದ್ವಾನ್. ಕೆ. ಚಂದ್ರಶೇಖರ ನಾವಡ ಅವರ ಶ್ರೀ ನಾಟ್ಯಾಂಜಲಿ ಕಲಾ ಅಕಾಡೆಮಿ ಸಂಸ್ಥೆಯ 40ರ ಸಂಭ್ರಮಕ್ಕಾಗಿ ಮಲ್ಲೇಶ್ವರದ ಸೇವಾಸದನದಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ತಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನೆಯನ್ನು ಕರ್ನಾಟಕ ಕಲಾಶ್ರೀ ನೃತ್ಯಗುರು ಶ್ರೀಮತಿ ನಿರ್ಮಲಾ ಮಂಜುನಾಥ್ ನೆರವೇರಿಸಿದರು.

ಶುಭಾರಂಭಕ್ಕೆ ವಿದುಷಿ. ಪ್ರಥಮಾ ಪ್ರಸಾದ್ ರಾವ್ ಅವರಿಂದ ಏಕವ್ಯಕ್ತಿ ಕಥಕ್ ನೃತ್ಯ ಪ್ರದರ್ಶನ, ಚಂದ್ರಶೇಖರ ನಾವಡ ಅವರ ಮೋಹಕ ನಿರ್ದೇಶನದಲ್ಲಿ ಅವರ ಶಿಷ್ಯೆಯರಿಂದ ಸಂಭವಾಮಿ ಯುಗೇ ಯುಗೇ ಡಿ.ಎನ್. ಶ್ರೀವತ್ಸ ವಿರಚಿತ ದಶಾವತಾರ ಅನನ್ಯ ನೃತ್ಯರೂಪಕ

**ಧೃವ ಅತ್ಯದ್ಭುತ ನೃತ್ಯ ಝೇಂಕಾರ ಕಾರ್ಯಕ್ರಮ**

ಮತ್ತು ಅಯನಾ ಡ್ಯಾನ್ಸ್ ಕಂಪೆನಿ ಬೆಂಗಳೂರು ಇವರಿಂದ ಧ್ರುವ ಅತ್ಯದ್ಭುತ ನೃತ್ಯ ಝೇಂಕಾರ ಕಾರ್ಯಕ್ರಮಗಳು ಕಣ್ಣನ ತಣಿಸುವಂತೆ ಸುಮನೋಹರವಾಗಿ ಮೂಡಿ ಬಂದು ಸೇವಾಸದನ ಸಭಾಂಗಣ ತುಂಬಿ ತುಳುತ್ತಿದ್ದ ಕಲಾರಸಿಕರ ಅಪಾರ ಮೆಚ್ಚುಗೆ ಗಳಿಸಿತು. ಮೂರು ಬಗೆಯ ವಿಭಿನ್ನ ನೃತ್ಯವೈಭವ ಸ್ಮರಣೀಯ ಅನುಭವ ನೀಡಿತೆಂದರೆ ಅತಿಶಯೋಕ್ತಿಯಲ್ಲ.

# ಬಿಸಿಲಿಗೆ ಕೈ ಕಪ್ಪಗಾಗಿದ್ಯಾ ಬೆಳ್ಳಗಾಗಿಸಲು ಇದನ್ನು ಟ್ರೈ ಮಾಡಿ



ನಿಮ್ಮ ಕೈ ಕಪ್ಪಗಾಗಿದ್ಯಾ ಯಾವುದೇ ದುಬಾರಿ ಉತ್ಪನ್ನಗಳನ್ನು ಬಳಸದೇ, ಕೇವಲ ಈ ಮನೆಮದ್ದಿನಿಂದ ನೀವು ನಿಮ್ಮ ಕೈಗಳ ಚರ್ಮವನ್ನು ಕ್ರಮೇಣ ಬೆಳ್ಳಗಾಗಿಸಬಹುದು. ಈ ನೈಸರ್ಗಿಕ ಪದಾರ್ಥಗಳು ಕೈಗಳಲ್ಲಿನ ಕಪ್ಪು ಕಲೆಯನ್ನು ನಿವಾರಿಸುತ್ತದೆ. ಮುಖದ ಹೊಳಪಿಗಾಗಿ, ಮುಖದ ಸೌಂದರ್ಯವನ್ನು ಹೆಚ್ಚಿಸಲು ನಾವು ಅನೇಕ ಉತ್ಪನ್ನಗಳು ಮನೆಮದ್ದುಗಳನ್ನು ಪ್ರಯತ್ನಿಸುತ್ತೇವೆ. ಆದರೆ ನೀವು ಎಂದಾದರೂ ಕೈಗಳ ಬಣ್ಣಗಳತ್ತ ಗಮನಹರಿಸಿದ್ದೀರಾ ದಿನವಿಡೀ ಧೂಳು, ಬಿಸಿಲು ಮತ್ತು ರಾಸಾಯನಿಕ ಉತ್ಪನ್ನಗಳಿಗೆ ಒಡ್ಡಿಕೊಳ್ಳುವುದರಿಂದ ಕೈಗಳ ಚರ್ಮವು ಕಪ್ಪಾಗುತ್ತದೆ ಮತ್ತು ಡ್ರೈ ಆಗಲಾರಂಭಿಸುತ್ತದೆ. ಇದಕ್ಕಾಗಿ, ಕೈಗಳ ಚರ್ಮದ ಆರೈಕೆಯು ಮುಖದಷ್ಟೇ ಮುಖ್ಯವಾಗಿದೆ.

**ನಿಂಬೆ ಮತ್ತು ಜೇನುತುಪ್ಪದ ಪ್ಯಾಕ್ :** ನಿಂಬೆ ನೈಸರ್ಗಿಕ ಬ್ಲೀಚಿಂಗ್ ಏಜೆಂಟ್ ಅನ್ನು ಹೊಂದಿದೆ. ಇದು ಚರ್ಮದ ಕಪ್ಪು ಕಲೆಗಳನ್ನು ಹಗುರಗೊಳಿಸುತ್ತದೆ. ಜೇನುತುಪ್ಪವು ಚರ್ಮವನ್ನು ತೇವಗೊಳಿಸುತ್ತದೆ. 1 ಟೀಚಮಚ ನಿಂಬೆ ರಸ ಮತ್ತು 1 ಟೀಚಮಚ ಜೇನುತುಪ್ಪವನ್ನು ಮಿಶ್ರಣ ಮಾಡಿ. ಇದನ್ನು 10 ರಿಂದ 15 ನಿಮಿಷಗಳ ಕಾಲ ಕೈಗಳ ಮೇಲೆ ಹಚ್ಚಿ ಕೈಗಳಿಂದ ಉಜ್ಜಿಕೊಳ್ಳಿ. ನಂತರ ಅದನ್ನು ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ.

**ಆಲೂಗಡ್ಡೆ ರಸ:** ಆಲೂಗಡ್ಡೆ ರಸವು ನೈಸರ್ಗಿಕವಾಗಿ ಚರ್ಮವನ್ನು ಹಗುರಗೊಳಿಸುತ್ತದೆ. ಹಸಿ ಆಲೂಗಡ್ಡೆಯನ್ನು ತುರಿದು ಅದರ ರಸವನ್ನು ತೆಗೆಯಿರಿ. ಈ ರಸವನ್ನು ಕೈಗಳಿಗೆ ಹಚ್ಚಿ 15 ನಿಮಿಷಗಳ ನಂತರ ತೊಳೆಯಿರಿ. ನಿಯಮಿತ ಬಳಕೆಯಿಂದ ಪರಿಣಾಮಕಾರಿಯಾಗಬಲ್ಲದು.

**ಕಡಲೆ ಹಿಟ್ಟು, ಮೊಸರಿನ ಸ್ಕಬ್:** ಕಡಲೆ ಹಿಟ್ಟು ಸ್ಕಬ್ ಆಗಿ ಕಾರ್ಯನಿರ್ವಹಿಸುತ್ತದೆ ಮತ್ತು ಮೊಸರು ಚರ್ಮವನ್ನು ಮೃದುಗೊಳಿಸುತ್ತದೆ. 2 ಟೀ ಚಮಚ ಕಡಲೆ ಹಿಟ್ಟಿನಲ್ಲಿ 1 ಚಮಚ ಮೊಸರು ಮತ್ತು ಒಂದು ಚಿಟಿಕೆ ಅರಿಶಿನವನ್ನು ಬೆರೆಸಿ. ಕೈಗಳಿಗೆ ಹಚ್ಚಿ ಒಣಗಿದ ನಂತರ ಉಜ್ಜಿಕೊಳ್ಳಿ. ಇದು ಕೈಯಲ್ಲಿನ ಕಂದು ಬಣ್ಣವನ್ನು ತೆಗೆದುಹಾಕುವಲ್ಲಿ ಪರಿಣಾಮಕಾರಿಯಾಗಿದೆ.

# ಶಾಸಕರ ಖರೀದಿ, ಕುದುರೆ ವ್ಯಾಪಾರ ಬಿಜೆಪಿ ಸಂಸ್ಕೃತಿ; ಸಿಎಂ ಮಾತು ನಮಗೆ ವೇದವಾಕ್ಯ


• ಉದಯವಾಹಿನಿ, ಬೆಂಗಳೂರು

ಶಾಸಕರ ಖರೀದಿ, ಕುದುರೆ ವ್ಯಾಪಾರ ಬಿಜೆಪಿ ಸಂಸ್ಕೃತಿ ಎಂದು ಡಿಸಿಎಂ ಡಿಕೆಶಿ ಅವರು ತಿರುಗೇಟು ನೀಡಿದರು. ಶಿಡ್ಲಘಟ್ಟದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿದರು. ಕಾಂಗ್ರೆಸ್ ಶಾಸಕರನ್ನು ಕಾಂಗ್ರೆಸ್ ಪಕ್ಷದ ನಾಯಕರೇ ಖರೀದಿ ಮಾಡುವ ಪರಿಸ್ಥಿತಿ ಬಂದಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಕೇಳಿದಾಗ, ಈ ಹಿಂದೆ ಬಿಜೆಪಿ ಸರ್ಕಾರ ರಚನೆಯಾದಾಗ ಅವರು ಎಷ್ಟು ಸಾವಿರ ಕೋಟಿ ಖರ್ಚು ಮಾಡಿದ್ದರು. ಸಿಎಂ ಹುದ್ದೆಗೆ ಎಷ್ಟು ಹಣ ನೀಡಬೇಕಾಗಿತ್ತು, ಮಂತ್ರಿ ಹುದ್ದೆಗೆ ಎಷ್ಟು ಹಣ ನೀಡಲಾಗಿದೆ ಎಂದು ಅವರದೇ ಪಕ್ಷದ ನಾಯಕರು ಬಹಿರಂಗ ಹೇಳಿಕೆ ನೀಡಿದ್ದಾರೆ. ಅವರು ಎಷ್ಟು ಹಣ ಆಮಿಷ ಒಡ್ಡಿದ್ದರು ಎಂದು ವಿಧಾನಸಭೆಯಲ್ಲೂ ಪ್ರಸ್ತಾಪವಾಗಿದ್ದು, ದಾಖಲೆಗಳಲ್ಲಿ ಸೇರಿವೆ.



ಈಗ ಬಿಜೆಪಿಯವರು ತಮ್ಮ ಪ್ರವೃತ್ತಿಯನ್ನು ನೆನೆಸಿಕೊಳ್ಳುತ್ತಿದ್ದಾರೆ ಎಂದು ಹರಿಹಾಯ್ದರು. ಹೈಕಮಾಂಡ್ ಹೇಳಿದ್ದನ್ನು ನಾನು, ಶಿವಕುಮಾರ್ ಸೇರಿದಂತೆ ಎಲ್ಲರೂ ಒಪ್ಪಬೇಕು ಎಂಬ ಸಿಎಂ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರು ಹೇಳಿದ ಮೇಲೆ ಅದೇ ನಮಗೆ ವೇದವಾಕ್ಯ ಎಂದು ತಿಳಿಸಿದರು.

# ರಾಮಾಯಣ



ಶ್ರೀ ರಾಮನ ವಿರಹ ಸಂತಾಪ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಆಶ್ರಮದ ಕಡೆಗೆ ಧಾವಿಸುತ್ತ ಬಂದನು. ಆಶ್ರಮಕ್ಕೆ ಬಂದು ಸುತ್ತಲೂ ನೋಡುತ್ತ ಅಲೆಯುತ್ತ ಪರ್ಣಶಾಲೆಯನ್ನು ಪ್ರವೇಶಿಸಿ ಸೀತೆಯು ಇಲ್ಲದ್ದನ್ನು ಕಂಡು ಹುಚ ನಂತಾದನು. ಹೇಮಂತ ಋತುವಿನಲ್ಲಿ ಕಮಲಪಿಲ್ಲದ ತಾವರೆಯಬಳ್ಳಿಯಂತೆ ಸೀತಾಪಿಯುಕ್ತವಾದ ಪರ್ಣಶಾಲೆಯು ಶೋಭಾಹೀನವಾಗಿತ್ತು, ಮರಗಳಲ್ಲಿದ್ದ ಹೂವುಗಳು ಬಾಡಿದ್ದವು. ಪಕ್ಷಿಗಳು ನಿಶಬ್ದವಾಗಿದ್ದವು.

ಎಡಬಲವೆಲ್ಲವೂ ಕಾಂತಿಹೀನವಾಗಿ ಅಳುತ್ತಿರುವಂತೆ ಭಾಸವಾಯಿತು. ಆಶ್ರಮದಲ್ಲಿ ಕುಳಿತು ಕೊಳ್ಳುವ ಚರ್ಮಗಳೂ, ಚಾಪೆಗಳೂ, ದರ್ಭೆಗಳೂ ಚಲ್ಲಾಪಿಲ್ಲಿಯಾಗಿ ಹರಡಿದ್ದವು. ಶ್ರೀರಾಮನಿಗೆ ದುಃಖವು ಉಕ್ಕಿಬಂದು ಅಯ್ಯೋ! ಸೀತೆ ಇಲ್ಲ. ಅವಳನ್ನು ಯಾರಾದರೂ ಅಪಹರಿಸಿರಬಹುದೆ ಅವಳು ಮೃತಳಾಗಿರಬಹುದೆ ರಾಕ್ಷಸರೇನಾದರೂ ತಿಂದುಹಾಕಿರಬಹುದೆ ಅಥವಾ ಭಯದಿಂದ ಎಲ್ಲಾದರೂ ಅಡಗಿಕೊಂಡಿರಬಹುದೆ ಅಥವಾ ಸರೋವರಕ್ಕೆ ವಿನೋದಾರ್ಥವಾಗಿ ಹೋಗಿರಬಹುದೆ ಇಲ್ಲವೆ, ನೀರನ್ನು ತರಲು ನದಿಗೆ ಹೋಗಿರಬೇಕು ಎಂದು ಹೇಳಿಕೊಳ್ಳುತ್ತ ಸಕಲ ಪ್ರದೇಶ ಗಳನ್ನೂ ಹುಡುಕಿದನು. ಸೀತೆಯು ಕಾಣಲಿಲ್ಲ. ಅತ್ತು ಅತ್ತು ಕಣ್ಣು ಕೆಂಪಾಯಿತು. ಮರದಿಂದ ಇನ್ನೊಂದು ಮರದ ಬಳಿಗೆ, ಬೆಟ್ಟದಿಂದ ಇನ್ನೊಂದು ಬೆಟ್ಟದ ಬಳಿಗೆ, ನದಿಯಿಂದ ಇನ್ನೊಂದು ನದಿಯ ಸಮೀಪಕ್ಕೆ ಓಡುತ್ತ ಹುಡುಕುತ್ತ ಶ್ರೀರಾಮನು ಶೋಕಸಮುದ್ರದಲ್ಲಿ ಮುಳುಗಿಹೋದನು. ಆತನು ಕಂಡ ಕಂಡ ವೃಕ್ಷಗಳನ್ನು ಉದ್ದೇಶಿಸಿ ನೀವು ಸೀತೆಯನ್ನು ಕಂಡಿರಾ ಎಂದು ಎಲೈ ಕದಂಬವೃಕ್ಷವೆ, ನಿನ್ನನ್ನು ಪ್ರೀತಿಸುತ್ತಿದ್ದ ನನ್ನ ಉನ್ಮತ್ತನಂತೆ ವಿಚಾರಿಸತೊಡಗಿದನು. ಜಾನಕಿಯನ್ನು ಕಂಡೆಯಾ ಬಿಲ್ವವೃಕ್ಷವೆ, ನಿನ್ನ ಚಿಗುರಿನಂತೆ ಹೊಳೆಯುವ ಶರೀರಕಾಂತಿಯುಳ್ಳ ನನ್ನ ಸೀತೆಯನ್ನು ನೋಡಿದೆಯಾ ಅವಳು ಹಳದಿಯ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟಿದ್ದಳು. ಎಲೈ ಮತ್ತಿಯಮರವೆ, ಜನಕಪುತ್ರಿಯನ್ನು ನೋಡಿದೆಯಾ ಅವಳು ಜೀವಿಸಿದ್ದಾಳೆಯೆ ಹೇಳು. ಲಕ್ಷ್ಮಣ, ಈ ತಿಲಕವೃಕ್ಷದ ಬಳಿ ದುಂಬಿಗಳು ಆನಂದದಿಂದ ಹಾಡುತ್ತಿವೆ. ಈ ವೃಕ್ಷಕ್ಕೆ ಸೀತೆಯ ಸುದ್ದಿ ಗೊತ್ತಿರಬೇಕು. ಅಶೋಕವೃಕ್ಷವೆ, ಸೀತೆಯ ವೃತ್ತಾಂತವನ್ನು ಹೇಳಿ ನನ್ನನ್ನೂ ಅಶೋಕನನ್ನಾಗಿ ಮಾಡುವೆಯಾ ಓ ತಾಳೆಯಮರವೆ, ತಾಳೆಯ ಹಣ್ಣಿನಂತೆ ಸ್ತನಗಳುಳ್ಳ ನನ್ನ ಸೀತೆಯನ್ನು ನೋಡಿದ್ದರೆ ದಯವಿಟ್ಟು ಅವಳ ಸುದ್ದಿಯನ್ನು ಹೇಳು. ಓ ಜಂಬುನೇರಿಳೆಯ ಮರವೆ. ಜಾಂಬೂನದ ವರ್ಣದ ವೈದೇಹಿಯನ್ನು ನೋಡಿದೆಯಾ ಹೀಗೆ ಶ್ರೀರಾಮನು ಮಾವು ಹಲಸು ದಾಳಿಂಬೆ ಮೊದಲಾದ ಮರಗಳನ್ನು ಕೇಳಿದನು. ಯಾವ ಮರವೂ ಉತ್ತರವನ್ನು ಕೊಡಲಿಲ್ಲ. ಇವುಗಳನ್ನು ವಿಚಾರಿಸಿ ಪ್ರಯೋಜನವಿಲ್ಲವೆಂದು ರಘುನಾಥನು ಮೃಗಗಳ ಕಡೆಗೆ ತಿರುಗಿ ಕೇಳತೊಡಗಿದನು : ಎಲೈ ಜಿಂಕೆ, ನಿನ್ನ ಕಣ್ಣಿನಂತೆಯೇ ನನ್ನ ಸೀತೆಯ ಕಣ್ಣು ಚಂಚಲವಾಗಿ ಸುಂದರವಾಗಿದ್ದಿತು.

ಮುಂದುವರಿಯುವುದು...

# ಈ ತಪ್ಪುಗಳಿಂದ ಶುಗರ್ ಲೆವೆಲ್ ಹೆಚ್ಚು ಕಡಿಮೆ ಆಗುತ್ತೆ!

ಇತ್ತೀಚಿನ ದಿನಗಳಲ್ಲಿ ಮಧುಮೇಹದ ಸಮಸ್ಯೆ ತುಂಬಾ ಹೆಚ್ಚುತ್ತಿದೆ. ಭಾರತದಲ್ಲಿಯೂ ಸಹ ಮಧುಮೇಹ ಪ್ರಕರಣಗಳು ಬಹಳ ವೇಗವಾಗಿ ಹೆಚ್ಚುತ್ತಿವೆ.

ಮಧುಮೇಹದಲ್ಲಿ ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ನೀವು ಈ ಸಮಸ್ಯೆಯಿಂದ ಮುಕ್ತರಾಗಬಹುದು. ಮಧುಮೇಹವು ದೀರ್ಘಕಾಲದ ಕಾಯಿಲೆಯಾಗಿದ್ದು, ಹಾಗೂ ಇದನ್ನು ಮೂಲದಿಂದಲೇ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಆದರೆ ಜೀವನಶೈಲಿಯನ್ನು ಬದಲಾಯಿಸುವ ಮೂಲಕ ಅದನ್ನು ನಿಯಂತ್ರಣದಲ್ಲಿಡಬಹುದು. ಮೇದೋಜ್ಜೀರಕ ಗ್ರಂಥಿಯು ಇನ್ಸುಲಿನ್ ಉತ್ಪಾದಿಸಲು ಸಾಧ್ಯವಾಗದಿದ್ದಾಗ ಅಥವಾ ದೇಹವು ಇನ್ಸುಲಿನ್ ಅನ್ನು ಸರಿಯಾಗಿ ಬಳಸಲು ಸಾಧ್ಯವಾಗದಿದ್ದಾಗ ಮಧುಮೇಹದ ಸಮಸ್ಯೆ ಎದುರಾಗುತ್ತದೆ. ದೇಹದಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟ ಅಂದರೆ ಹೈಪರ್‌ಗ್ಲೈಸೀಮಿಯಾ ಹೆಚ್ಚಾಗಲು ಆಹಾರ ಪದ್ಧತಿ ಮಾತ್ರ ಕಾರಣವಲ್ಲ, ಆದರೆ ಅದಕ್ಕೆ ಇನ್ನೂ ಹಲವು ಕಾರಣಗಳಿವೆ. ಅವುಗಳ ಬಗ್ಗೆ ತಿಳಿದುಕೊಳ್ಳೋಣ....

**ನಿದ್ರೆ:** ನಿಮ್ಮ ನಿದ್ರೆಯ ಚಕ್ರವು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಜೊತೆಗೆ ಅನೇಕ ದೈಹಿಕ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುತ್ತದೆ. ಅಧ್ಯಯನದ ಪ್ರಕಾರ, ನಿದ್ರೆಯ ಕೊರತೆಯು ಮಧುಮೇಹ ಹೊಂದಿರುವ ಜನರಲ್ಲಿ ಗ್ಲೂಕೋಸ್ ನಿಯಂತ್ರಣ ಮತ್ತು ಇನ್ಸುಲಿನ್ ಪ್ರತಿರೋಧದ ಮೇಲೆ ಪರಿಣಾಮ ಬೀರುತ್ತದೆ.

ನಿದ್ರೆಯ ಕೊರತೆಯಿಂದಾಗಿ, ನೀವು ಒತ್ತಡವನ್ನು ಎದುರಿಸ ಬೇಕಾಗಬಹುದು, ಇದು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನೀವು ಕನಿಷ್ಠ 8 ಗಂಟೆಗಳ ನಿದ್ದೆ ಮಾಡುವುದು ಮುಖ್ಯ.

**ಒತ್ತಡದ ಮಟ್ಟ:** ಒತ್ತಡವು ನಿಮ್ಮ ಆರೋಗ್ಯಕ್ಕೆ ತುಂಬಾ ಹಾನಿಕಾರಕವಾಗಿದೆ. ಇದರಿಂದಾಗಿ ನೀವು ಅನೇಕ ರೀತಿಯ ಕಾಯಿಲೆಗಳನ್ನು ಎದುರಿಸಬೇಕಾಗಬಹುದು. ಒತ್ತಡವು ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಒತ್ತಡದಿಂದಾಗಿ, ಹಾಗೂ ನಮ್ಮ ದೇಹದಲ್ಲಿ ಕಾರ್ಟಿಸೋಲ್ ಹಾರ್ಮೋನ್ ಉತ್ಪತ್ತಿಯಾಗುತ್ತದೆ, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸುತ್ತದೆ.

**ದೈಹಿಕ ಚಟುವಟಿಕೆಯ ಮಟ್ಟ :** ದೈಹಿಕ ಚಟುವಟಿಕೆಗಳನ್ನು ಮಾಡದಿರುವುದು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸಬಹುದು. ನಿಯಮಿತ ವ್ಯಾಯಾಮದಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡಬಹುದು ಎಂಬುದು ಇದಕ್ಕೆ ಕಾರಣ. ಆದರೆ ಮಧುಮೇಹದಲ್ಲಿ ವ್ಯಾಯಾಮ ಮಾಡುವಾಗ, ಕೆಲವು ವಿಷಯಗಳ ಬಗ್ಗೆ ಕಾಳಜಿವಹಿಸುವುದು ಬಹಳ ಮುಖ್ಯ. ಮಧುಮೇಹ ತಜ್ಞರಿಲ್ಲದೆ ಭಾರೀ ವ್ಯಾಯಾಮ ಮಾಡುವುದರಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವು ಹಠಾತ್ತನೆ ಇಳಿಯಬಹುದು.

**ನಿರ್ಜಲೀಕರಣ :** ಕಡಿಮೆ ನೀರು ಕುಡಿಯುವುದರಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟಕ್ಕೆ ಹಾನಿಕಾರಕವಾಗಬಹುದು. ನೀವು ಕಡಿಮೆ ನೀರು ಕುಡಿದಾಗ, ಅದು ನಿಮ್ಮ ದೇಹದಲ್ಲಿ ಗ್ಲೂಕೋಸ್ ಪ್ರಮಾಣವನ್ನು ಹೆಚ್ಚಿಸಲು ಪ್ರಾರಂಭಿಸುತ್ತದೆ, ಇದನ್ನು ಹೈಪೊಗ್ಲಿಸಿಮಿಯಾ ಎಂದು ಕರೆಯಲಾಗುತ್ತದೆ.

ಅಂತಹ ಪರಿಸ್ಥಿತಿಯಲ್ಲಿ, ಮಧುಮೇಹ ರೋಗಿಗಳು ಸಾಧ್ಯವಾದಷ್ಟು ಹೆಚ್ಚು ನೀರು ಕುಡಿಯುವುದು ಮುಖ್ಯ.

**ಔಷಧಿ:** ಹಲವು ಬಾರಿ ಔಷಧಿಗಳು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಮಧುಮೇಹ ರೋಗಿಗಳು ಯಾವುದೇ ಔಷಧಿಯನ್ನು ತೆಗೆದುಕೊಳ್ಳುವ ಮೊದಲು ಒಮ್ಮೆ ವೈದ್ಯರನ್ನು ಸಂಪರ್ಕಿಸುವುದು ಮುಖ್ಯ.

**ಬೆಳಗ್ಗೆ ಖಾಲಿ ಹೊಟ್ಟೆಗೆ ಟೀ-ಕಾಫಿ ಕುಡಿಯುವುದು**

ಬೆಳಗ್ಗೆ ಎದ್ದ ತಕ್ಷಣ ನೀರು ಕುಡಿಯದೆ ಚಹಾ ಅಥವಾ ಕಾಫಿ ಕುಡಿಯುವುದು, ಉಪಾಹಾರವನ್ನು ಬಿಟ್ಟುಬಿಡುವುದು ಅಥವಾ ತಡವಾಗಿ ತಿನ್ನುವುದು, ದೀರ್ಘಕಾಲ ಹಸಿವಿನಿಂದ ಇರುವುದು, ದೈಹಿಕ ಚಟುವಟಿಕೆ ಮಾಡದಿರುವುದು, ಈ ಎಲ್ಲಾ ಅಭ್ಯಾಸಗಳು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಣದಲ್ಲಿಡುವುದಿಲ್ಲ.



# ಹೊಸ ಉದ್ಯಮಕ್ಕೆ ಕಾಲಿಟ್ಟ ನಟ ಮಂಚು



ಪ್ಯಾರ್ ಮೇ ಪಡಿಪೋಯಾ

ತೆಲುಗು ನಟ ಮಂಚು ಮನೋಜ್ ಮಿರಾಯ್ ಸಕ್ಸಸ್ ಖುಷಿಯಲ್ಲಿದ್ದಾರೆ. ಈ ಚಿತ್ರದಲ್ಲಿ ಸೂಪರ್ ಹೀರೋಗಳ ಎದುರು ಸೂಪರ್ ವಿಲನ್ ರೀತಿನೇ ಮಂಚು ಮನೋಜ್ ಅಬ್ಬರಿಸಿದ್ದರು. ಬ್ಲಾಕ್ ಸ್ವೋರ್ಡ್ ತಂಡದ ನಾಯಕನಾಗಿಯೇ ಮಂಚು ಮನೋಜ್ ಇಲ್ಲಿ ಕತ್ತಿಯನ್ನ ಝಳಪಿಸಿ ಪ್ರೇಕ್ಷಕರಿಂದ ಚಪ್ಪಾಳೆ ಪಡೆದಿದ್ದರು. ಮಿರಾಯ್ ಹಾಗೂ ತಮ್ಮ ಪಾತ್ರಕ್ಕೆ ಸಿಕ್ಕ ಪ್ರೀತಿ ಬೆನ್ನಲ್ಲೇ ಮಂಚು ಮನೋಜ್ ಹೊಸ ಉದ್ಯಮ ಆರಂಭಿಸಿದ್ದಾರೆ. ಮಂಚು ಮನೋಜ್ ಮ್ಯೂಸಿಕ್‌ನತ್ತ ಮುಖ ಮಾಡಿದ್ದಾರೆ. ಹೊಸ ಸಂಗೀತ ಕಂಪನಿ ಆರಂಭಿಸಿದ್ದಾರೆ. ಅದಕ್ಕೆ ಮೋಹನ ರಾಗ ಸಂಗೀತ ಎಂದು ಹೆಸರಿಡಲಾಗಿದೆ. ಮಂಚು ಮನೋಜ್ ನಟನೆ ಮಾತ್ರವಲ್ಲದೆ ಸಂಗೀತದಲ್ಲಿಯೂ ಒಲವು ಹೊಂದಿದ್ದಾರೆ. ಸಂಗೀತ ಯಾವಾಗಲೂ ಮಂಚು ಮನೋಜ್ ಅವರ ಜೀವನದ ಭಾಗವಾಗಿದೆ. ಅವರು ಪೋಟುಗಾಡುನಲ್ಲಿ ''ಪ್ಯಾರ್ ಮೇ ಪಡಿಪೋಯಾ'' ಗೀತೆ ಹಾಡುವ ಮೂಲಕ ತಮ್ಮ ಸಂಗೀತ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಕೋವಿಡ್ ಸಮಯದಲ್ಲಿ ''ಅಂಥಾ ಬಾಗುಂತಮ್ರ'' ಗೀತೆಗೆ ಧ್ವನಿಯಾಗಿ ನಟಿಸಿದ್ದರು. ಮಿಸ್ಟರ್ ನೂಕಯ್ಯ ಚಿತ್ರಕ್ಕೆ ''ಪಿಸ್ತ ಪಿಸ್ತಾ'' ಎಂಬ ಹಾಡಿಗೆ ಸಾಹಿತ್ಯವನ್ನು ಬರೆಯುತ್ತಾರೆ. ಅವರು ನೇನು ಮೀಕು ತೇಲುಸಾ ಸಿನಿಮಾಗೆ ''ಯೆನ್ನೋ ಯೆನ್ನೋ'' ಮತ್ತು ಮಿಸ್ಟರ್ ನೂಕಯ್ಯ ಚಿತ್ರಕ್ಕೆ ''ಪ್ರಣಾಮ್ ಪೋಯೆ ಬಾಧ'' ಹಾಡಿಗೆ ಸಾಹಿತ್ಯವನ್ನು ಬರೆದಿದ್ದಾರೆ. ಹಿನ್ನೆಲೆ ಗಾಯನದ ಹೊರತಾಗಿ, ಅವರು ತೆರೆಮರೆಯಲ್ಲಿ ಮಂಚು ಮನೋಜ್ ಗಣನೀಯ ಕೊಡುಗೆ ನೀಡಿದ್ದಾರೆ. ಮನೋಜ್ ತಮ್ಮ ವೃತ್ತಿ ಜೀವನದ ಆರಂಭದಿಂದಲೂ ತಮ್ಮ ತಂದೆ ಡಾ. ಮಂಚು ಮೋಹನ್ ಬಾಬು, ಸಹೋದರ ಮಂಚು ವಿಷ್ಣು ಮತ್ತು ಸಹೋದರಿ ಲಕ್ಷ್ಮಿ ಮಂಚು ಅವರ ಹಲವಾರು ಚಿತ್ರಗಳಲ್ಲಿ ಸಂಗೀತ ಮತ್ತು ಸಾಹಸ ದೃಶ್ಯಗಳನ್ನು ನಿರ್ದೇಶಿಸಿದ್ದಾರೆ.

# ರೆಬೆಲ್ ಸ್ಟಾರ್ ಅಂಬರೀಶ್ ಪುಣ್ಯಸ್ಮರಣೆ



ಸಮಾಧಿಗೆ ಕುಟುಂಬಸ್ಥರಿಂದ ಪೂಜೆ


ರೆಬೆಲ್ ಸ್ಟಾರ್ ಅಂಬರೀಶ್ ಅವರ 7ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆ ನ.24 ಕಂಠೀರವ ಸ್ಟುಡಿಯೋಗೆ ಆಗಮಿಸಿ ಅಂಬರೀಶ್ ಸಮಾಧಿಗೆ ಕುಟುಂಬಸ್ಥರು ಪೂಜೆ ಸಲ್ಲಿಸಿದ್ದಾರೆ. ಸುಮಲತಾ ಅಂಬರೀಶ್ , ಅಭಿಷೇಕ್ ಅಂಬರೀಶ್ ಆಗಮಿಸಿ ಪೂಜೆ ಸಲ್ಲಿಸಿದ್ದಾರೆ.

ಬಳಿಕ ಕಂಠೀರವ ಸ್ಟುಡಿಯೋದಲ್ಲಿ ಅಭಿಮಾನಿಗಳು ಅನ್ನದಾನ ಹಾಗೂ ಅಖಿಲ ಭಾರತ ಡಾ.ಅಂಬರೀಶ್ ಅಭಿಮಾನಿಗಳ ಸಂಘದ ಉದ್ಘಾಟನೆ ನೆರವೇರಿಸಲಾಯ್ತು.

ಅಂಬರೀಶ್ ಅವರ 7ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆ ರಾಜ್ಯದ ಮೂಲೆ ಮೂಲೆಗಳಿಂದ ಅಭಿಮಾನಿಗಳು ಆಗಮಿಸಿ ಭಾಗಿಯಾಗಿದ್ದರು. ಹಿರಿಯ ನಟ ದೊಡ್ಡಣ್ಣ, ಅಂಬರೀಷ್ ಪುತ್ರ ಅಭಿಷೇಕ್ ಅಂಬರೀಶ್ ಸಹ ಪೂಜೆಯಲ್ಲಿ ಭಾಗಿಯಾಗಿದ್ದಾರೆ. ಈ ವೇಳೆ ಹಲವಾರು ವಿಚಾರಗಳ ಬಗ್ಗೆ ಸುಮಲತಾ ಅಂಬರೀಶ್ ಮಾತನಾಡಿದ್ದಾರೆ. ಮೊಮ್ಮಗನ ಜೊತೆ ಕಳೆದ ಸಮಯ, ಅವನ ತೊದಲು ನುಡಿ ಬಗ್ಗೆ ಹೇಳಿಕೊಂಡಿದ್ದಾರೆ. ಸಕ್ರೀಯ ರಾಜಕಾರಣದಿಂದ ಅಂತರದ ಬಗ್ಗೆ, ಉತ್ತರಿಸಿರುವ ಅವರು ಕ್ಷೇತ್ರದ ಜನರ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದಿದ್ದಾರೆ.

# ಮತ್ತೊಮ್ಮೆ ಯಶಸ್ಸು ಕಂಡ ರಾಜ್ ಬಿ.ಶೆಟ್ಟಿ

ಇಕೋ ಕೂಡ ಭರ್ಜರಿ ಪ್ರದರ್ಶನ



ನಟ, ನಿರ್ದೇಶಕ, ನಿರ್ಮಾಪಕ ರಾಜ್ ಬಿ. ಶೆಟ್ಟಿ ಅವರು ಚಿತ್ರರಂಗದಲ್ಲಿ ಆಕ್ಟೀವ್ ಆಗಿದ್ದಾರೆ. ಸಿನಿಮಾ ವಿತರಣೆಯಲ್ಲೂ ಅವರು ಸಕ್ರಿಯರಾಗಿದ್ದಾರೆ. ರಾಜ್ ಬಿ. ಶೆಟ್ಟಿ ಒಡೆತನದ 'ಲೈಟರ್ ಬುದ್ಧ ಫಿಲ್ಮ್ಸ್' ಸಂಸ್ಥೆ ಈಗಾಗಲೇ ಯಶಸ್ಸು ಕಂಡಿದೆ. ಕನ್ನಡ ಸಿನಿಮಾಗಳ ನಿರ್ಮಾಣ ಮಾತ್ರವಲ್ಲದೇ ಪರಭಾಷೆ ಸಿನಿಮಾಗಳ ವಿತರಣೆಯಲ್ಲೂ ಈ ಸಂಸ್ಥೆ ಸೈ ಎನಿಸಿಕೊಂಡಿದೆ. ಈ ಮೊದಲು ಮಲಯಾಳಂ ಭಾಷೆಯ 'ಲೋಕಃ' ಸಿನಿಮಾವನ್ನು ಕರ್ನಾಟಕದಲ್ಲಿ ವಿತರಣೆ ಮಾಡಿ ರಾಜ್ ಬಿ. ಶೆಟ್ಟಿ ಲಾಭ ಮಾಡಿಕೊಂಡಿದ್ದರು. ಈಗ ಇನ್ನೊಂದು ಮಲಯಾಳಂ ಸಿನಿಮಾ 'ಇಕೋ' ಕೂಡ ಭರ್ಜರಿಯಾಗಿ ಪ್ರದರ್ಶನ ಕಾಣುತ್ತಿದೆ. ಈ ಸಿನಿಮಾವನ್ನು ಕೂಡ ರಾಜ್ ಬಿ. ಶೆಟ್ಟಿ ಅವರ 'ಲೈಟರ್ ಬುದ್ಧ ಫಿಲ್ಮ್ಸ್' ಸಂಸ್ಥೆಯೇ ವಿತರಣೆ ಮಾಡಿದೆ. ಈ ಮೂಲಕ ಮಲಯಾಳಂ ಸಿನಿಮಾ ವಿತರಣೆಯಲ್ಲಿ ರಾಜ್ ಬಿ ಶೆಟ್ಟಿ ಅವರ 'ಲೈಟರ್ ಬುದ್ಧ ಫಿಲ್ಮ್ಸ್' ಸಂಸ್ಥೆ ಮತ್ತೊಂದು ದಾಖಲೆ ಮಾಡುತ್ತಿದೆ. ನವೆಂಬರ್ 21ರಂದು 'ಇಕೋ' ಸಿನಿಮಾ ಬಿಡುಗಡೆ ಆಯಿತು. ಈ ಸಿನಿಮಾಗೆ ಅತ್ಯುತ್ತಮ ವಿಮರ್ಶೆಗಳು ಸಿಕ್ಕಿವೆ. 'ಲೋಕಃ' ಸಿನಿಮಾ ರೀತಿಯೇ 'ಇಕೋ' ಸಿನಿಮಾ ಕೂಡ ಭರ್ಜರಿಯಾಗಿ ಕಲೆಕ್ಷನ್ ಮಾಡುವತ್ತ ಮುನ್ನುಗ್ಗುತ್ತಿದೆ. ವಾರಾಂತ್ಯದಲ್ಲಿ ಕರ್ನಾಟಕದಲ್ಲಿ ಈ ಸಿನಿಮಾ ಹೌಸ್‌ಫುಲ್ ಪ್ರದರ್ಶನ ಕಂಡಿದೆ.

ಒಟ್ಟಿನಲ್ಲಿ ರಾಜ್ ಬಿ. ಶೆಟ್ಟಿ ಅವರ 'ಲೈಟರ್ ಬುದ್ಧ ಫಿಲ್ಮ್ಸ್' ಸಂಸ್ಥೆಯು ಮುಟ್ಟಿದ್ದೆಲ್ಲ ಚಿನ್ನವಾಗುತ್ತಿದೆ. ಈ ಸಂಸ್ಥೆಯ ಪಾಲಿಗೆ 2025 ಭಾರಿ ಸಕ್ಸಸ್ ತಂದುಕೊಟ್ಟಿರುವ ವರ್ಷ.


# ರೂಮರ್ ಬಾಯ್‌ಫ್ರೆಂಡ್ ಬರ್ತ್‌ಡೇ ಆಚರಿಸಿದ ಶ್ರೀಲೀಲಾ



ನಟಿ ಶ್ರೀಲೀಲಾ ತಮ್ಮ ರೂಮರ್ ಗೆಳೆಯನ ಗೆಳೆಯನ ಹುಟ್ಟುಹಬ್ಬವನ್ನು ಖುಲ್ಲಂಖುಲ್ಲಾ ಆಚರಿಸಿದ್ದಾರೆ. ಕನ್ನಡದ ಕಿಸ್ ಬೆಡಗಿ ಶ್ರೀಲೀಲಾ ಬಾಲಿವುಡ್ ನಟ ಕಾರ್ತಿಕ್ ಆರ್ಯನ್ ಜೊತೆ ಪ್ರೀತಿಯಲ್ಲಿ ಬಿದ್ದ ವಿಚಾರ ಈಗ ರಹಸ್ಯವಾಗಿ ಉಳಿದಿಲ್ಲ. ಇದಕ್ಕೆ ಸಾಕ್ಷಿ ಎನ್ನುವಂತೆ ಮುಂಬೈನಲ್ಲಿ ಶ್ರೀಲೀಲಾ ಅಭಿಮಾನಿಗಳ ಜೊತೆ ಕಾರ್ತಿಕ್ ಆರ್ಯನ್ ಹುಟ್ಟುಹಬ್ಬ ಆಚರಿಸಿಕೊಳ್ಳುವ ವೇಳೆ ಹಾಜರಿದ್ದರು.

ಕಾರ್ತಿಕ್ ಆರ್ಯನ್ ಹಾಗೂ ಶ್ರೀಲೀಲಾ 'ಆಶಿಕಿ 3 ಚಿತ್ರದಲ್ಲಿ ಜೋಡಿಯಾಗಿ ನಟಿಸಿದ್ದಾರೆ. ಬಳಿಕ ಇಬ್ಬರ ನಡುವೆ ಪ್ರೀತಿಯ ವದಂತಿ ಹುಟ್ಟಿಕೊಂಡಿತ್ತು. ಸಾಕ್ಷಿ ಎನ್ನುವಂತೆ ಶ್ರೀಲೀಲಾ , ಕಾರ್ತಿಕ್ ಆರ್ಯನ್ ನಡವಳಿಕೆ ಇತ್ತು. ಈಗ ಕಾರ್ತಿಕ್ ಆರ್ಯನ್ ಫ್ಯಾನ್ಸ್ ಜೊತೆಯಾದ ಶ್ರೀಲೀಲಾ ವದಂತಿ ಪ್ರೇಮಿಯ ಹುಟ್ಟುಹಬ್ಬ ಆಚರಿಸಿದ್ದಾರೆ. ಕಾರ್ತಿಕ್ ಆರ್ಯನ್ ಹಾಗೂ ಶ್ರೀಲೀಲಾ ಟ್ವಿನ್ ಕಲರ್ ಡ್ರೆಸ್ ಧರಿಸಿದ್ದರು. ಬ್ಲರ್ ಆಗಿರುವ ಪೋಟೋವನ್ನು ಇನ್‌ಸ್ಟಾದಲ್ಲಿ ಅಪ್ಲೋಡ್ ಮಾಡಿರುವ ಶ್ರೀಲೀಲಾ ಹ್ಯಾಪಿ ಬರ್ತ್‌ಡೇ ಸ್ಟೀಟೆಸ್ಟ್ ಎಂದು ಶುಭ ಕೋರಿದ್ದಾರೆ.

# ಸ್ಟಾರ್ ನಟ ಧರ್ಮೇಂದ್ರ ವಿಧಿವಶ



ದೀರ್ಘ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಬಾಲಿವುಡ್‌ನ ಹಿರಿಯ ನಟ, ಎವರ್‌ಗ್ರೀನ್ ಸ್ಟಾರ್, ಆಕ್ಷನ್ ಕಿಂಗ್ ಧರ್ಮೇಂದ್ರ, ಅವರು 89ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ. ಇದೇ ಡಿಸೆಂಬರ್ 8ರಂದು ಅವರು 90ನೇ ವಸಂತಕ್ಕೆ ಕಾಲಿಡಬೇಕಿತ್ತು. ಕಳೆದ ಕೆಲವು ತಿಂಗಳಿನಿಂದಲೂ ದೀರ್ಘ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದ ಧರ್ಮೇಂದ್ರ, ಅವರು ಮುಂಬೈನ ನಿವಾಸದಲ್ಲಿ ನಿಧನ ಹೊಂದಿದ್ದಾರೆ.

**ಬಾಲಿವುಡ್ ಆಳಿದ ದಿಗ್ಗಜ:** ಹಲವು ವರ್ಷಗಳ ಕಾಲ ಬಾಲಿವುಡ್ ಚಿತ್ರರಂಗವನ್ನ ಆಳಿದ ಧರ್ಮೇಂದ್ರ, 1935ರ ಡಿಸೆಂಬರ್ 8ರಂದು ಪಂಜಾಬ್‌ನ ಲುಧಿಯಾನದ ಸಣ್ಣ ಹಳ್ಳಿಯಲ್ಲಿ ಜನಿಸಿದ್ರು. ಕಿರಿಯ ವಯಸ್ಸಿನಲ್ಲೇ ಪ್ರಕಾಶ್ ಕೌರ್ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಚಿಕ್ಕ ವಯಸ್ಸಿನಿಂದಲೇ ಸಿನಿಮಾ ರಂಗದಲ್ಲಿ ಮಿಂಚಬೇಕು, ನಟನಾಗಬೇಕು ಎಂಬ ಹಂಬಲ ಹೊಂದಿದ್ದ ಧರ್ಮೇಂದ್ರ ನಟಿಸುವುದಕ್ಕಾಗಿಯೇ ಮನೆ ಬಿಟ್ಟು ಬಂದರು. 1960ರಲ್ಲಿ ದಿಲ್ ಬಿ ತೇರಾ ಹಮ್ ಬಿ ತೇರೆ ಸಿನಿಮಾ ಮೂಲಕ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದರಲ್ಲದೇ ಶೋಲೆ ಸಿನಿಮಾ ಮೂಲಕ ಕರ್ನಾಟಕದೊಂದಿಗೆ ನಂಟು ಹೊಂದಿದ್ದರು. ಇವರ ಕಲಾ ಸೇವೆಗೆ 2012ರಲ್ಲಿ ಪದ್ಮ ಭೂಷಣ ಪ್ರಶಸ್ತಿಯೂ ಒಲಿದುಬಂದಿತು.

ಕೆಲ ದಿನಗಳ ಹಿಂದೆ ಉಸಿರಾಟ ತೊಂದರೆಯಿಂದ ಬಳಲುತ್ತಿದ್ದ ಧರ್ಮೇಂದ್ರ, ಅವರನ್ನ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಆಸ್ಪತ್ರೆಗೆ ದಾಖಲಾಗುತ್ತಿದ್ದಂತೆ ಅನೇಕ ಬಾಲಿವುಡ್ ತಾರೆಯರು ಅವರನ್ನ ಭೇಟಿ ಮಾಡಲು ಆಸ್ಪತ್ರೆಗೆ ಧಾವಿಸಿದ್ದರು. ಸಲ್ಮಾನ್ ಖಾನ್, ಶಾರುಖ್ ಖಾನ್, ಗೋವಿಂದ, ರಿತೇಶ್ ದೇಶ್‌ಮುಖ್, ಜೆನಿಲಿಯಾ ದೇಶ್‌ಮುಖ್, ಅಮೀಷಾ ಪಟೇಲ್ ಸೇರಿದಂತೆ ಮುಂತಾದ ಸ್ಟಾರ್ ನಟ-ನಟಿಯರು ಮುಂಬೈನ್ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಭೇಟಿ ನೀಡಿ ಧರ್ಮೇಂದ್ರ, ಅವರ ಆರೋಗ್ಯವನ್ನ ವಿಚಾರಿಸಿದ್ದರು. ಇದಾದ ಬಳಿಕ ಧರ್ಮೇಂದ್ರ, ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದರಿಂದ ಆಸ್ಪತ್ರೆಯಿಂದ ಡಿಶ್ಚಾರ್ಜ್ ಮಾಡಿಸಿ, ಮನೆಯಲ್ಲೇ ಚಿಕಿತ್ಸೆ ಮುಂದುವರಿಸಲು ಕುಟುಂಬ ನಿರ್ಧರಿಸಿತ್ತು.

**ಹಿರಿಯ ಪತ್ನಿ ಜೊತೆಗಿದ್ದ ಧರ್ಮೇಂದ್ರ:** ಧರ್ಮೇಂದ್ರ, ಅವರ ಕಿರಿಯ ಮಗ, ನಟ ಬಾಬಿ ಡಿಯೋಲ್, ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ, ಮುಂಬೈ ಸಮೀಪದ ಖಂಡಾಲಾದಲ್ಲಿರುವ ಫಾರ್ಮ್ ಹೌಸ್‌ನಲ್ಲಿ ತಮ್ಮ ಮೊದಲ ಪತ್ನಿ ಪ್ರಕಾಶ್ ಕೌರ್ ಅವರೊಂದಿಗೆ ತಂದೆ ಧರ್ಮೇಂದ್ರ, ಅವರು ವಾಸಿಸುತ್ತಿದ್ದಾರೆ ಎಂದು ಬಹಿರಂಗಪಡಿಸಿದ್ದರು.

# ಟೀಮ್ ಇಂಡಿಯಾಗೆ ಫಾಲೋಆನ್ ಹೇರಿಲ್ಲ!

ಗುವಾಹಟಿಯಲ್ಲಿ ನಡೆಯುತ್ತಿರುವ ಭಾರತ ಮತ್ತು ಸೌತ್ ಆಫ್ರಿಕಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್ ಮುಗಿದಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 489 ರನ್ ಕಲೆಹಾಕಿದರೆ, ಟೀಮ್ ಇಂಡಿಯಾ ಕೇವಲ 201 ರನ್‌ಗಳಿಸಿ ಆಲೌಟ್ ಆಗಿದೆ.

ಇತ್ತ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 288 ರನ್‌ಗಳ ಹಿನ್ನಡೆ ಅನುಭವಿಸಿದರೂ ಸೌತ್ ಆಫ್ರಿಕಾ ತಂಡ ಫಾಲೋಆನ್ ಹೇರಿಲ್ಲ. ಸಾಮಾನ್ಯವಾಗಿ 200 ರನ್‌ಗಳ ಹಿನ್ನಡೆ ಅನುಭವಿಸಿದರೆ ಎದುರಾಳಿಯ ತಂಡವನ್ನು ಮತ್ತೆ ಬ್ಯಾಟಿಂಗ್‌ಗೆ ಆಹ್ವಾನಿಸಲಾಗುತ್ತದೆ. ಅದರಂತೆ ಆಲೌಟ್ ಆದ ಬೆನ್ನಲ್ಲೇ ಎದುರಾಳಿ ತಂಡ ದ್ವಿತೀಯ ಇನಿಂಗ್ಸ್ ಆರಂಭಿಸಬೇಕಾಗುತ್ತದೆ.

ಟೀಮ್ ಇಂಡಿಯಾ ಮೇಲೆ ಫಾಲೋಆನ್ ಹೇರುವ ಉತ್ತಮ ಅವಕಾಶ ಹೊಂದಿದ್ದರೂ ಟೆಂಬಾ ಬವುಮಾ ಮತ್ತೆ ಬ್ಯಾಟಿಂಗ್ ಮಾಡುವ ನಿರ್ಧಾರ ತೆಗೆದುಕೊಂಡಿದ್ದಾರೆ. ಅದರಂತೆ ಇದೀಗ ಸೌತ್ ಆಫ್ರಿಕಾ ತಂಡವು ದ್ವಿತೀಯ ಇನಿಂಗ್ಸ್ ಆರಂಭಿಸಿದೆ.

**ಫಾಲೋಆನ್ ಹೇರಿಲ್ಲ ಏಕೆ:** ಸೌತ್ ಆಫ್ರಿಕಾ ತಂಡವು ಫಾಲೋಆನ್ ಹೇರದೇ ಇರಲು ಮುಖ್ಯ ಕಾರಣ ಸರಣಿಯಲ್ಲಿ ಮುನ್ನಡೆ ಹೊಂದಿರುವುದು. ಅಂದರೆ 2 ಮ್ಯಾಚ್‌ಗಳ ಸರಣಿಯಲ್ಲಿ ಸೌತ್ ಆಫ್ರಿಕಾ ಒಂದು ಪಂದ್ಯವನ್ನು ಗೆದ್ದುಕೊಂಡಿದೆ. ಇದೀಗ ದ್ವಿತೀಯ ಪಂದ್ಯದಲ್ಲಿ ಡ್ರಾ ಸಾಧಿಸಿದರೂ 1-0 ಅಂತರದಿಂದ ಸರಣಿ ಜಯಿಸಬಹುದು.

ಇದೇ ಪ್ಲ್ಯಾನ್‌ನೊಂದಿಗೆ ಸೌತ್ ಆಫ್ರಿಕಾ ತಂಡ ದ್ವಿತೀಯ ಇನಿಂಗ್ಸ್ ಆಡಲು ನಿರ್ಧರಿಸಿದೆ. ಅದರಂತೆ ನಾಲ್ಕನೇ ದಿನದಾಟದ ಮೂರನೇ ಸೆಷನ್‌ವರೆಗೂ ಸೌತ್ ಆಫ್ರಿಕಾ ಬ್ಯಾಟಿಂಗ್ ಮುಂದುವರೆಸುವ ಸಾಧ್ಯತೆಯಿದೆ. ಇದರ ನಡುವೆ ಕನಿಷ್ಠ 250 ರನ್ ಕಲೆಹಾಕಿದರೂ ಸೌತ್ ಆಫ್ರಿಕಾ ತಂಡದ ಒಟ್ಟು ಸ್ಕೋರ್ 538 ರನ್ ಆಗಲಿದೆ.

ಈ ಮೂಲಕ ಟೀಮ್ ಇಂಡಿಯಾಗೆ ಕೊನೆಯ ಇನಿಂಗ್ಸ್‌ನಲ್ಲಿ ಕನಿಷ್ಠ 539 ರನ್‌ಗಳ ಗುರಿ ನೀಡಬಹುದು. ಈ ಬೃಹತ್ ಮೊತ್ತವನ್ನು ಚೇಸ್ ಮಾಡಿ ಗೆಲ್ಲೋದು ಅಸಾಧ್ಯ. ಈ ಅಸಾಧ್ಯತೆಯ ನಡುವೆ ಟೀಮ್ ಇಂಡಿಯಾ ಮುಂದಿರುವುದು ಎರಡು ಆಯ್ಕೆಗಳು ಮಾತ್ರ. ಒಂದು ಪಂದ್ಯವನ್ನು ಡ್ರಾ ಮಾಡಿಕೊಳ್ಳುವುದು ಅಥವಾ ಬೃಹತ್ ಮೊತ್ತವನ್ನು ಬೆನ್ನತ್ತಲು ಪ್ರಯತ್ನಿಸುವುದು. ಆದರೆ ಬೃಹತ್ ಮೊತ್ತದ ಚೇಸಿಂಗ್‌ಗೆ ಕೈ ಹಾಕಿದರೆ ಟೀಮ್ ಇಂಡಿಯಾ ಆಲೌಟ್ ಆಗುವ ಸಾಧ್ಯತೆ ಹೆಚ್ಚು. ಏಕೆಂದರೆ ಮೊದಲ ಇನಿಂಗ್ಸ್‌ನಲ್ಲೇ ಭಾರತ ತಂಡವನ್ನು 201 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಸೌತ್ ಆಫ್ರಿಕಾ ಬೌಲರ್‌ಗಳು ಯಶಸ್ವಿಯಾಗಿದ್ದಾರೆ. ಹೀಗಾಗಿ ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ ಗೆಲ್ಲಬಹುದು. ಇಲ್ಲ ಈ ಮ್ಯಾಚ್ ಡ್ರಾನಲ್ಲಿ ಅಂತ್ಯಗೊಳ್ಳಬಹುದು.

ಇಲ್ಲಿ ಸೌತ್ ಆಫ್ರಿಕಾ ತಂಡ ಗೆದ್ದರೆ 2-0 ಅಂತರದಿಂದ ಸರಣಿ ಜಯಿಸಲಿದೆ. ಇನ್ನು ಟೀಮ್ ಇಂಡಿಯಾ ಪಂದ್ಯವನ್ನು ಡ್ರಾ ಮಾಡಿಕೊಂಡರೆ 1-0 ಅಂತರದಿಂದ ಸೌತ್ ಆಫ್ರಿಕಾ ಸರಣಿಯನ್ನು ಗೆಲ್ಲಲಿದೆ. ಈ ಎಲ್ಲಾ ಲೆಕ್ಕಾಚಾರಗಳೊಂದಿಗೆ ಟೆಂಬಾ ಬವುಮಾ ಟೀಮ್ ಇಂಡಿಯಾ ಮೇಲೆ ಫಾಲೋಆನ್ ಹೇರಿಲ್ಲ.



201 ರನ್‌ಗಳಿಸಿ ಟೀಂ ಇಂಡಿಯಾ ಆಲೌಟ್

# ಸ್ಲಿಪ್‌ನಿಂದ ಗಲ್ಲಿಯತ್ತ ಐಡೆನ್ ಮಾರ್ಕ್ರಾಮ್ ಸ್ಟನ್ನಿಂಗ್ ಕ್ಯಾಚ್



ಗುವಾಹಟಿಯಲ್ಲಿ ನಡೆಯುತ್ತಿರುವ ಭಾರತದ ವಿರುದ್ಧ 2ನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ ತಂಡದ ಆಟಗಾರ ಐಡೆನ್ ಮಾರ್ಕ್ರಾಮ್ ಅದ್ಭುತ ಕ್ಯಾಚ್ ಹಿಡಿದಿದ್ದಾರೆ. ಮಾರ್ಕೊ ಯಾನ್ಸೆನ್ ಎಸೆದ ಈ ಪಂದ್ಯದ 44ನೇ ಓವರ್‌ನ 3ನೇ ಎಸೆತವನ್ನು ನಿತೀಶ್ ಕುಮಾರ್ ರೆಡ್ಡಿ ರಕ್ಷಣಾತ್ಮಕವಾಗಿ ಆಡಲು ಯತ್ನಿಸಿದ್ದರು. ಆದರೆ ನಿರೀಕ್ಷಿತವಾಗಿ ಮೂಡಿಬಂದ ಬೌನ್ಸರ್‌ನಿಂದಾಗಿ ಚೆಂಡು ಬ್ಯಾಟ್‌ನ ಬದಿಗೆ ತಗುಲಿ ಗಲ್ಲಿಯತ್ತ ಚಿಮ್ಮಿತು. ಈ ವೇಳೆ ಸ್ಲಿಪ್‌ನಲ್ಲಿ ಫೀಲ್ಡಿಂಗ್‌ನಲ್ಲಿದ್ದ ಐಡೆನ್ ಮಾರ್ಕ್ರಾಮ್ ಓಡಿ ಹೋಗಿ ಅದ್ಭುತ ಫ್ಲೈಯಿಂಗ್ ಕ್ಯಾಚ್ ಹಿಡಿದರು.

ಇದೀಗ ಐಡೆನ್ ಮಾರ್ಕ್ರಾಮ್ ಅವರ ಸ್ಟನ್ನಿಂಗ್ ಕ್ಯಾಚ್ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಕ್ರಿಕೆಟ್ ಪ್ರೇಮಿಗಳಿಂದ ಭಾರೀ ಮೆಚ್ಚುಗೆಗಳು ವ್ಯಕ್ತವಾಗುತ್ತಿದೆ.

ಇನ್ನು ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ ತಂಡವು 489 ರನ್ ಕಲೆಹಾಕಿದರೆ, ಟೀಮ್ ಇಂಡಿಯಾ 66 ಓವರ್‌ಗಳ ಮುಕ್ತಾಯದ ವೇಳೆಗೆ 7 ವಿಕೆಟ್ ನಷ್ಟಕ್ಕೆ 170 ರನ್‌ಗಳಿಸಿದೆ. ಸದ್ಯ ಕ್ರೀಸ್‌ನಲ್ಲಿ ವಾಷಿಂಗ್ಟನ್ ಸುಂದರ್ ಹಾಗೂ ಕುಲ್ದೀಪ್ ಯಾದವ್ ಬ್ಯಾಟಿಂಗ್ ಮಾಡುತ್ತಿದ್ದಾರೆ.

# ರಣರೋಚಕ ಮ್ಯಾಚ್ ಪಾಕಿಸ್ತಾನ್ ಚಾಂಪಿಯನ್ಸ್

ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ಟೂರ್ನಿಯಲ್ಲಿ ಪಾಕಿಸ್ತಾನ್ ಎ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ದೋಹಾದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ್ ಎ ಮತ್ತು ಬಾಂಗ್ಲಾದೇಶ್ ಎ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಗೆದ್ದ ಬಾಂಗ್ಲಾದೇಶ್ ತಂಡವು ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ತಂಡವು 20 ಓವರ್‌ಗಳಲ್ಲಿ 125 ರನ್‌ಗಳಿಸಿ ಆಲೌಟ್ ಆಯಿತು. 126 ರನ್‌ಗಳ ಗುರಿ ಪಡೆದ ಬಾಂಗ್ಲಾದೇಶ್ ತಂಡ 20 ಓವರ್‌ಗಳಲ್ಲಿ ಕಲೆಹಾಕಿದ್ದು 125 ರನ್‌ಗಳು. ಇದರೊಂದಿಗೆ ಪಂದ್ಯವು ಟೈನಲ್ಲಿ ಅಂತ್ಯಗೊಂಡಿತು. ಅಲ್ಲದೆ ಫಲಿತಾಂಶ ನಿರ್ಣಯಕ್ಕಾಗಿ ಸೂಪರ್ ಓವರ್ ಆಡಿಸಲಾಯಿತು. ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ್ ತಂಡವು 3 ಎಸೆತಗಳಲ್ಲಿ 6 ರನ್‌ಗಳಿಸಿ 2 ವಿಕೆಟ್ ಕಳೆದುಕೊಂಡಿತು. ಅದರಂತೆ 7 ರನ್‌ಗಳ ಗುರಿ ಪಡೆದ ಪಾಕಿಸ್ತಾನ್ ತಂಡವು 4 ಎಸೆತಗಳಲ್ಲಿ ಗುರಿ ಮುಟ್ಟುವ ಮೂಲಕ ರೋಚಕ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಪಾಕಿಸ್ತಾನ್ ಎ ತಂಡವು ಮೂರನೇ ಬಾರಿಗೆ ರೈಸಿಂಗ್ ಸ್ಟಾರ್ಸ್ (ಎಮರ್ಜಿಂಗ್) ಏಷ್ಯಾಕಪ್ ಟ್ರೋಫಿ ಗೆದ್ದುಕೊಂಡಿದೆ.



# ಆಸ್ಟ್ರೇಲಿಯಾಗೆ 17 ಕೋಟಿ ರೂ. ನಷ್ಟ!




ಇಂಗ್ಲೆಂಡ್ ವಿರುದ್ಧದ ಪ್ರತಿಷ್ಠಿತ ಆಯಶಸ್ ಸರಣಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಭರ್ಜರಿ ಜಯ ಸಾಧಿಸಿದೆ. ಈ ಭರ್ಜರಿ ಗೆಲುವಿನಿಂದಾಗಿ ಕ್ರಿಕೆಟ್ ಆಸ್ಟ್ರೇಲಿಯಾಗೆ ಸುಮಾರು 17 ಕೋಟಿ ರೂ. ನಷ್ಟವಾಗಿದೆ ಎಂದರೆ ನಂಬುತ್ತೀರಾ... ನಂಬಲೇಬೇಕು.

ಏಕೆಂದರೆ ಐದು ದಿನಗಳ ಜಿದ್ದಾಜಿದ್ದಿನ ಕದನವನ್ನು ನಿರೀಕ್ಷಿಸಲಾಗಿದ್ದ ಪರ್ತ್ ಟೆಸ್ಟ್ ಪಂದ್ಯವು ಕೇವಲ 2 ದಿನಗಳಲ್ಲೇ ಮುಗಿದು ಹೋಗಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 172 ರನ್ ಕಲೆಹಾಕಿದರೆ, ಆಸ್ಟ್ರೇಲಿಯಾ ತಂಡ 132 ರನ್‌ಗಳಿಸಿ ಆಲೌಟ್ ಆಯಿತು.

ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವು 164 ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಅದರಂತೆ ಕೊನೆಯ ಇನಿಂಗ್ಸ್‌ನಲ್ಲಿ 205 ರನ್‌ಗಳ ಗುರಿಯನ್ನು ಬೆನ್ನತ್ತಿದ ಆಸ್ಟ್ರೇಲಿಯಾ ಪರ ಟ್ರಾವಿಸ್ ಹೆಡ್ 83 ಎಸೆತಗಳಲ್ಲಿ 123 ರನ್ ಸಿಡಿಸಿದ್ದರು. ಈ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ಆಸ್ಟ್ರೇಲಿಯಾ ತಂಡ 28.2 ಓವರ್‌ಗಳಲ್ಲಿ 205 ರನ್‌ಗಳಿಸಿ 2ನೇ ದಿನದಾಟದಲ್ಲೇ ಪಂದ್ಯ ಮುಗಿಸಿದ್ದರು.

ಇತ್ತ ಆಸ್ಟ್ರೇಲಿಯಾ ತಂಡವು ಕೇವಲ 2 ದಿನದಾಟದಲ್ಲೇ ಪಂದ್ಯ ಮುಗಿಸಿದ್ದರಿಂದ ಕ್ರಿಕೆಟ್ ಆಸ್ಟ್ರೇಲಿಯಾ 3 ಮಿಲಿಯನ್ ಆಸ್ಟ್ರೇಲಿಯನ್ ಡಾಲರ್ ನಷ್ಟ ಅನುಭವಿಸಿದೆ. ಎಬಿಸಿ ಸ್ಪೋರ್ಟ್ಸ್ ವರದಿಯ ಪ್ರಕಾರ, ಮೊದಲ ಟೆಸ್ಟ್ ಪಂದ್ಯವು 2 ದಿನಗಳಲ್ಲೇ ಮುಗಿದ ಕಾರಣ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿಯ ಆದಾಯಕ್ಕೆ ಹೊಡೆತ ಬಿದ್ದಿದೆ. ಏಕೆಂದರೆ ಭಾನುವಾರ ಪಂದ್ಯ ವೀಕ್ಷಿಸಲು 60 ಸಾವಿರ ಮಂದಿ ಟಿಕೆಟ್ ಬುಕ್ ಮಾಡಿಕೊಂಡಿದ್ದರು. ಆದರೆ ಟ್ರಾವಿಸ್ ಹೆಡ್ ಅವರ ಆರ್ಭಟದಿಂದಾಗಿ ಮೊದಲ ಟೆಸ್ಟ್ ಪಂದ್ಯವು ಎರಡನೇ ದಿನದಾಟದಲ್ಲೇ ಮುಗಿಯಿತು. ಇದರಿಂದಾಗಿ ಉಳಿದ ದಿನಗಳ ಟಿಕೆಟ್ ಮಾರಾಟ ಕೂಡ ವ್ಯರ್ಥವಾಗಿದೆ. ಈ ಟಿಕೆಟ್ ಮಾರಾಟಗಳಿಂದಾಗಿ ಕ್ರಿಕೆಟ್ ಆಸ್ಟ್ರೇಲಿಯಾ ಸುಮಾರು 3 ಮಿಲಿಯನ್ ಡಾಲರ್ ಆದಾಯಗಳಿಸುವ ಇರಾದೆಯಲ್ಲಿತ್ತು.



# ಫರ್ಹಾನ್ ಆರ್ಭಟಕ್ಕೆ ದಾಖಲೆ ಉಡೀಸ್!

ಟಿ20 ಕ್ರಿಕೆಟ್‌ನಲ್ಲಿ ಪಾಕಿಸ್ತಾನ್

ಬ್ಯಾಟರ್ ಸಾಹಿಬ್‌ಝೂದ ಫರ್ಹಾನ್ ಸಿಕ್ಸರ್‌ಗಳ ಸುರಿಮಳೆಗೈದಿದ್ದಾರೆ. ಈ ಸಿಕ್ಸರ್ ಸುರಿಮಳೆಯೊಂದಿಗೆ ಒಂದೇ ವರ್ಷದಲ್ಲಿ 100 ಸಿಕ್ಸ್ ಸಿಡಿಸಿದ ವಿಶ್ವದ 5ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಒಂದೇ ವರ್ಷದಲ್ಲಿ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ಸಿಕ್ಸ್ ಸಿಡಿಸಿದ ಏಷ್ಯನ್ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ರಾವಲ್ಪಿಂಡಿಯಲ್ಲಿ ನಡೆದ ಶ್ರೀಲಂಕಾ ಹಾಗೂ ಝಿಂಬಾಬ್ವೆ ವಿರುದ್ಧದ ಪಂದ್ಯಗಳಲ್ಲಿ ಪಾಕ್ ಪರ ಆರಂಭಿಕನಾಗಿ ಕಣಕ್ಕಿಳಿದ ಸಾಹಿಬ್‌ಝೂದ ಫರ್ಹಾನ್ ಒಟ್ಟು 8 ಸಿಕ್ಸ್‌ಗಳನ್ನು ಸಿಡಿಸಿದ್ದಾರೆ. ಈ ಎಂಟು ಸಿಕ್ಸರ್‌ಗಳೊಂದಿಗೆ ಸಾಹಿಬ್‌ಝೂದ 2025 ರಲ್ಲಿ 100 ಸಿಕ್ಸರ್‌ಗಳನ್ನು ಪೂರೈಸಿದ್ದಾರೆ. ಇದರೊಂದಿಗೆ ಒಂದೇ ವರ್ಷದಲ್ಲಿ 100 ಸಿಕ್ಸ್ ಸಿಡಿಸಿದ ಏಷ್ಯಾದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಈ ಹಿಂದೆ ಟೀಮ್ ಇಂಡಿಯಾದ ಸ್ಫೋಟಕ ದಾಂಡಿಗ ಅಭಿಷೇಕ್ ಶರ್ಮಾ ಬರೆದ ಭರ್ಜರಿ ದಾಖಲೆಯನ್ನು ಫರ್ಹಾನ್ ಅಳಿಸಿ ಹಾಕಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಒಂದೇ ವರ್ಷ ಅತ್ಯಧಿಕ ಸಿಕ್ಸ್ ಸಿಡಿಸಿದ ಏಷ್ಯನ್ ಬ್ಯಾಟರ್ ಎಂಬ ದಾಖಲೆ ಅಭಿಷೇಕ್ ಶರ್ಮಾ ಹೆಸರಿನಲ್ಲಿತ್ತು. 2024 ರಲ್ಲಿ 38 ಟಿ20 ಇನಿಂಗ್ಸ್ ಆಡಿದ್ದ ಅಭಿಷೇಕ್ ಶರ್ಮಾ ಬರೋಬ್ಬರಿ 87 ಸಿಕ್ಸ್ ಸಿಡಿಸಿದ್ದರು. ಈ ಮೂಲಕ ಒಂದೇ ವರ್ಷದಲ್ಲಿ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ಸಿಕ್ಸ್ ಬಾರಿಸಿದ ಏಷ್ಯನ್ ಬ್ಯಾಟರ್ ಎನಿಸಿಕೊಂಡಿದ್ದರು. ಇದೀಗ ಈ ದಾಖಲೆಯನ್ನು ಸಾಹಿಬ್‌ಝೂದ ಫರ್ಹಾನ್ ಅಳಿಸಿ ಹಾಕಿದ್ದಾರೆ. ಈ ವರ್ಷ 43 ಟಿ20 ಇನಿಂಗ್ಸ್ ಆಡಿರುವ ಸಾಹಿಬ್‌ಝೂದ ಬರೋಬ್ಬರಿ 104 ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ. ಈ ಮೂಲಕ ಟಿ20 ಇತಿಹಾಸದಲ್ಲೇ ಒಂದೇ ವರ್ಷದಲ್ಲಿ ಅತ್ಯಧಿಕ ಸಿಕ್ಸ್ ಸಿಡಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ.





Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966